ಬೆಂಗಳೂರು
ಮಂಗಳವಾರ, 23 ಜೂನ್ 2026
ಸಂಪುಟ 33, ಸಂಚಿಕೆ 233, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೀಟ್: ಬಿಹಾರದಲ್ಲಿ 30 ಮಂದಿ ಬಂಧನ | 08 | ಚರ್ಚೆಗಿಂತ ಮೌನ ಸಮರವೇ ಹೆಚ್ಚು! | 08 | ವಾಟ್ಸ್‌ಆ್ಯಪ್‌ಗೆ ಭಾರತೀಯ ಸಾರಥಿ | 08

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಹಸ್ತ

ದಿನದ ಮಾತು

ಪ್ರಯತ್ನ ಮಾಡುವವರೆಗೆ ಯಾರಿಗೂ ತಮ್ಮ ಸಾಮರ್ಥ್ಯದ ಅರಿವಿರುವುದಿಲ್ಲ.
▲ ನಾಣ್ನುಡಿ


ಮುಸುಕಿನಲ್ಲೇ ಕೆಲಸ ಮಾಡುವ ಅಸಾಮಾನ್ಯ ದೈತ್ಯ ಕಂಪನಿಗಳು

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ 6

ಕಿರುಸುದ್ದಿ

ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ಸ್ಟಾರ್ಮರ್ ರಾಜೀನಾಮೆ



• **ಲಂಡನ್:** ಬ್ರಿಟನ್ ಪ್ರಧಾನಿ ಹಾಗೂ ಲೇಬರ್ ಪಕ್ಷದ ನಾಯಕ ಸ್ಥಾನಕ್ಕೆ ಕೀರ್ ಸ್ಟಾರ್ಮರ್ ಸೋಮವಾರ ರಾಜೀನಾಮೆ ಘೋಷಿಸಿದ್ದಾರೆ. ಮುಂಬರುವ ವಾರಗಳಲ್ಲಿ ಹೊಸ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಅವರು ವೇಳಾಪಟ್ಟಿ ನಿಗದಿಪಡಿಸಿದ್ದು, ಸೆಪ್ಟೆಂಬರ್ ವೇಳೆಗೆ ಹೊಸ ನಾಯಕರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

• ಪುಟ 7

ಹನುಮ ಜನ್ಮಭೂಮಿ ವಿವಾದ: ಕರ್ನಾಟಕ ಹೈಕೋರ್ಟ್‌ನಲ್ಲೇ ಇತ್ಯರ್ಥವಾಗಲಿ

• ಪುಟ 7

ಬಂಗಾಳ ಬಜೆಟ್‌ನಲ್ಲಿ ಭರಪೂರ ಘೋಷಣೆ

• ಪುಟ 7

ಕತಾರ್‌ನ ಅನಿಲ ಸ್ಥಾವರದಲ್ಲಿ ಭಾರೀ ಸ್ಫೋಟ

• ಪುಟ 7

ಸಂಘದ ನಿತ್ಯ ಶಾಖೆಗೆ ಬಂದರೆ ಉತ್ತರ ಸಿಗುವುದು: ಪದ್ಮಾರ್


• ಪುಟ 2

ಖಾಲಿ ಹುದ್ದೆಗಳ ಭರ್ತಿ, ಬಡ್ತಿ ಪ್ರಕ್ರಿಯೆ ಚುರುಕುಗೊಳಿಸಿ

• ಪುಟ 2

ಪ್ರತಿಭಾವಂತರಿಗೆ ಅವಕಾಶ: ಸಿಎಂ

• ಪುಟ 2



ಪಾಶ್ಚಿಮಾತ್ಯ ಒಕ್ಕೂಟದಲ್ಲಿ ರಾಜತಾಂತ್ರಿಕ ಬಿರುಗಾಳಿ!

• ಪುಟ 11

ಸುದ್ದಿ ಸಮಗ್ರ

ಪಕ್ಷ ಸಂಘಟನೆ ಚುರುಕುಗೊಳಿಸಲು ಡಿಸಿಸಿ ಅಧ್ಯಕ್ಷರಿಗೆ ಆದೇಶ

ಸ್ಥಳೀಯ ಚುನಾವಣೆಗೆ ಸಜ್ಜಾಗಿ: ಸಿಎಂ ಸೂಚನೆ

■ ಜಿಪಂ, ತಾಪಂ ಚುನಾವಣೆ ಹಿನ್ನೆಲೆ
■ ಕಾಂಗ್ರೆಸ್ ಜಿಲ್ಲಾಧ್ಯಕ್ಷರ ಜತೆ ಸಿಎಂ ಸಭೆ

• **ಬೆಂಗಳೂರು:** ಮುಂದಿನ ದಿನಗಳಲ್ಲಿ ಎದುರಾಗುವ ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಯನ್ನು ಕಾಂಗ್ರೆಸ್ ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರುಗಳು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ಕುಮಾರಕೃಪಾ ಅತಿಥಿಗೃಹದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಎಲ್ಲಾ ಜಿಲ್ಲೆಗಳ ಜಿಲ್ಲಾಧ್ಯಕ್ಷರುಗಳ ಜತೆ ಸಭೆ ನಡೆಸಿದ ಅವರು, ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದಿಲ್ಲ. ಯಾವುದೇ ಕ್ಷಣದಲ್ಲಾದರೂ ಚುನಾವಣೆಗಳು ಎದುರಾಗಬಹುದು. ಹೀಗಾಗಿ ಪಕ್ಷವನ್ನು ನಿರೀಕ್ಷಿತ ಮಟ್ಟದಲ್ಲಿ ಸಂಘಟನೆ ಮಾಡಬೇಕು. ಸರ್ಕಾರದ ಯೋಜನೆಗಳು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಹಾಗೂ ನಮ್ಮ ಐದು ಗ್ಯಾರಂಟಿಗಳು ಸೇರಿದಂತೆ ಎಲ್ಲ ಯೋಜನೆಗಳ ಬಗ್ಗೆ ಜನರಿಗೆ ಮನದಟ್ಟು ಮಾಡಿಕೊಡಬೇಕು ಎಂದರು.

ಮುಂದಿನ ಎರಡು ವರ್ಷಗಳು ರಾಜ್ಯದಲ್ಲಿ ಚುನಾವಣಾ ವರ್ಷವಾಗಿರಲಿದೆ. ಈಗಿನಿಂದಲೇ ಇದಕ್ಕೆ ಬೇಕಾದ ಸಿದ್ಧತೆಗಳನ್ನು ನಡೆಸಬೇಕು. ಯಾರೂ ಮೈಮರೆತು ಕೂರಬಾರದು ಎಂದು ಎಚ್ಚರಿಸಿದರು. ಮುಂದಿನ ದಿನಗಳಲ್ಲಿ ನಡೆಯುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ವಿಧಾನಸಭೆ, ಲೋಕಸಭಾ ಚುನಾವಣೆಗಳಿಗೆ ತಯಾರಿ ಮಾಡಿಕೊಳ್ಳುವಂತೆ ಸಲಹೆ ನೀಡಿದರು.



ಯುವಕರನ್ನು ಸಂಘಟಿಸಿ

2013ರಿಂದ 2018ರ ನಡುವೆ ಕಾಂಗ್ರೆಸ್ ಜಿಲ್ಲಾಧ್ಯಕ್ಷರುಗಳಿಗೆ ವಾಹನ ವ್ಯವಸ್ಥೆ ಹಾಗೂ ಮಾಸಿಕ ವೇತನ ನೀಡುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಗ್ಯಾರಂಟಿ ಸಮಿತಿಗಳನ್ನು ರಚಿಸಿ, ಅದರ ಮೂಲಕ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೆ ವೇತನ ಹಾಗೂ ಇತರ ಭತ್ಯೆಗಳನ್ನು ನೀಡಲಾಗುತ್ತಿದೆ. ಅಲ್ಲದೆ, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭಾರತ್ ಜೋಡೋ ಯುವಕ ಸಂಘವನ್ನು ಸ್ಥಾಪಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಇದರ ಮೂಲಕ ಯುವಕರನ್ನು ಸಂಘಟನೆಗೊಳಿಸಬೇಕು ಎಂದು ಸಿಎಂ ಸೂಚಿಸಿದರು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಪಾಲಿಕೆಗಳಿಗೆ ಚುನಾವಣೆ ನಡೆಸಬೇಕಿದೆ.

➡ಪುಟ 9


> ಜಿಲ್ಲಾ, ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಸಮಿತಿ ರಚಿಸಲಾಗಿದೆ. ಈ ಸಮಿತಿಯೊಡನೆ ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಸಮನ್ವಯ ಸಾಧಿಸಬೇಕು. ಒಂದು ವೇಳೆ ಅಳ್ವವರು ಗ್ಯಾರಂಟಿ ಯೋಜನೆ ಬಿಟ್ಟುಕೊಡಲು ಇಚ್ಛಿಸಿದರೆ ಅವರ ಮನವೊಲಿಸಬೇಕು.
> ■ ಡಿ.ಕೆ.ಶಿವಕುಮಾರ್, ಸಿಎಂ

ಎಸ್‌ಐಆರ್: ಜನರಿಗೆ ಅರಿವು ಮೂಡಿಸಿ

ಕೇಂದ್ರ ಚುನಾವಣಾ ಆಯೋಗ ರಾಜ್ಯದಲ್ಲಿ ನಡೆಸಲು ಉದ್ದೇಶಿಸಿರುವ ವಿಶೇಷ ಸಮಗ್ರ ಪರಿಷ್ಕರಣೆಯೂ ನಮ್ಮ ಪಕ್ಷಕ್ಕೆ ಮಾರಕವಾಗಿ ಪರಿಣಮಿಸಲಿದೆ. ಪಶ್ಚಿಮ ಬಂಗಾಳದಲ್ಲಿಯೂ ಎಸ್‌ಐಆರ್‌ನಿಂದಾಗಿ ಸುಮಾರು 97 ಲಕ್ಷದಷ್ಟು ಮತದಾರರು ತಮ್ಮ ಹಕ್ಕು ಕಳೆದುಕೊಂಡಿದ್ದರು. ಹೀಗಾಗಿ ನಮ್ಮ ರಾಜ್ಯದಲ್ಲಿ ನಡೆಯುವ ಎಸ್‌ಐಆರ್‌ಗೆ ಪೂರ್ವಭಾವಿಯಾಗಿ ಎಲ್ಲ ಜಿಲ್ಲಾ ಅಧ್ಯಕ್ಷರು ಬ್ಲಾಕ್ ಅಧ್ಯಕ್ಷರ ಜತೆಗೂಡಿ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು. ಅಲ್ಲದೆ, ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟು ಹೋಗದಂತೆ ಎಚ್ಚರವಹಿಸಬೇಕು. ಮತದಾರರ ಪಟ್ಟಿಯಲ್ಲಿ ಹೆಸರಿದ್ದರಷ್ಟೇ ರಾಜ್ಯ ಸರ್ಕಾರದ ಸೌಲಭ್ಯಗಳು ಸಿಗುತ್ತವೆ ಎಂಬುದನ್ನು ಜನರಿಗೆ ತಿಳಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

3 ರಾಜ್ಯಗಳಲ್ಲಿ ಜಾರಿ | ಕರ್ನಾಟಕ ವಿರೋಧ

ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರದ ಸಿದ್ಧತೆ




■ ಪಶ್ಚಿಮಘಟ್ಟ ಸಂರಕ್ಷಣೆಗೆ ಕೇಂದ್ರದ ಅಂತಿಮ ಹೆಜ್ಜೆ
■ ಗುಜರಾತ್, ಮಹಾರಾಷ್ಟ್ರ ಗೋವಾದಲ್ಲಿ ಪರಿಸರ ಸೂಕ್ಷ್ಮ ಪ್ರದೇಶ ಘೋಷಣೆಗೆ ಸಿದ್ಧತೆ
■ ಕರ್ನಾಟಕದ 20,668 ಚದರ ಕಿ.ಮೀ. ಪ್ರದೇಶ ಪ್ರಸ್ತಾಪದಲ್ಲಿ ಸೇರ್ಪಡೆ

• **ಹೊಸದಿಲ್ಲಿ:** ಹನ್ನೆರಡು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ಪ್ರದೇಶಗಳ ಘೋಷಣೆ ಪ್ರಕ್ರಿಯೆಗೆ ಅಂತಿಮ ರೂಪ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಮೊದಲ ಹಂತದಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಅಧಿಕೃತವಾಗಿ ಅಧಿಸೂಚಿಸುವ ಸಿದ್ಧತೆ ನಡೆದಿದೆ.

ಪಶ್ಚಿಮಘಟ್ಟ ವ್ಯಾಪ್ತಿಯ ಕರ್ನಾಟಕ, ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಒಟ್ಟು 56,825.7 ಚದರ ಕಿ.ಮೀ. ಪ್ರದೇಶವನ್ನು ಪರಿಸರಸೂಕ್ಷ್ಮ ಪ್ರದೇಶವೆಂದು ಗುರುತಿಸಲು 2024ರ ಕರಡು ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಪ್ರದೇಶಗಳ ವ್ಯಾಪ್ತಿ ಹಾಗೂ ನಿರ್ಬಂಧಗಳ ಕುರಿತು ರಾಜ್ಯಗಳೊಂದಿಗೆ ಒಮ್ಮತ ಮೂಡದ ಕಾರಣ ಅಂತಿಮ ಅಧಿಸೂಚನೆ ವಿಳಂಬವಾಗಿತ್ತು.

ಗಣಿಗಾರಿಕೆ, ಕೈಗಾರಿಕೆಗೆ ನಿರ್ಬಂಧ



ಗುಜರಾತ್, ಮಹಾರಾಷ್ಟ್ರ ಮತ್ತು ಗೋವಾದಲ್ಲಿನ ವಿವಾದಗಳು ಬಹುತೇಕ ಬಗೆಹರಿದಿರುವುದರಿಂದ, ಎಲ್ಲ ಆರು ರಾಜ್ಯಗಳಿಗೂ ಏಕಕಾಲದಲ್ಲಿ ಅಧಿಸೂಚನೆ ಹೊರಡಿಸುವ ಬದಲು ಒಮ್ಮತ ಮೂಡಿರುವ ರಾಜ್ಯಗಳಲ್ಲಿ ಮೊದಲಿಗೆ ಜಾರಿಗೊಳಿಸಲು ಕೇಂದ್ರ ಚಿಂತನೆ ನಡೆಸಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಕರ್ನಾಟಕದಲ್ಲೇ ಅತಿ ಹೆಚ್ಚು ಪ್ರದೇಶ: ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲು ಪ್ರಸ್ತಾಪಿಸಿರುವ ಭೂಪ್ರದೇಶದಲ್ಲಿ ಕರ್ನಾಟಕದ ಪಾಲು ಅತಿ ಹೆಚ್ಚಾಗಿದೆ. ರಾಜ್ಯದ ಸುಮಾರು 20,668 ಚದರ ಕಿ.ಮೀ. ಪ್ರದೇಶ, ಅಂದರೆ ಒಟ್ಟು ಪ್ರಸ್ತಾವಿತ ಪ್ರದೇಶದ ಶೇ.36.3ರಷ್ಟು ಭಾಗ ಈ ವ್ಯಾಪ್ತಿಗೆ ಬರುತ್ತದೆ. ಆದರೆ ಕರ್ನಾಟಕ ಸರ್ಕಾರವು 2024ರಲ್ಲಿ ಕಸ್ತೂರಿರಂಗನ್ ಸಮಿತಿ ವರದಿ ತಿರಸ್ಕರಿಸಲು ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಂಡಿತ್ತು. ಹೀಗಿದ್ದರೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಮಾತುಕತೆ ಮುಂದುವರಿದಿದೆ. ಪಶ್ಚಿಮಘಟ್ಟದ ಸಂರಕ್ಷಣೆಗೆ ಪರ್ಯಾಯ ಕಾರ್ಯಯೋಜನೆ ಸಲ್ಲಿಸುವಂತೆ ಕೇಂದ್ರವು ಕರ್ನಾಟಕಕ್ಕೆ ಸೂಚಿಸಿದೆ ಎನ್ನಲಾಗಿದೆ.

➡ಪುಟ 9

3 ರಾಜ್ಯಗಳಲ್ಲಿ ಒಮ್ಮತ

ಗುಜರಾತ್‌ನಲ್ಲಿ ಸುಮಾರು 449ರಿಂದ 470 ಚದರ ಕಿ.ಮೀ. ವ್ಯಾಪ್ತಿಯ 64 ಗ್ರಾಮಗಳನ್ನು ಸೂಕ್ಷ್ಮ ಪ್ರದೇಶವೆಂದು ಗುರುತಿಸಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ಮಹಾರಾಷ್ಟ್ರದಲ್ಲಿ ಸುಮಾರು 17,340 ಚದರ ಕಿ.ಮೀ. ಪ್ರದೇಶವನ್ನು ಸೇರಿಸಲು ಪ್ರಸ್ತಾಪಿಸಲಾಗಿದ್ದು, 2,515 ಗ್ರಾಮಗಳ ಪೈಕಿ 378 ಗ್ರಾಮಗಳನ್ನು ಕೈಬಿಡುವಂತೆ ರಾಜ್ಯ ಮನವಿ ಮಾಡಿದೆ. ಗೋವಾದಲ್ಲಿ ಗುರುತಿಸಿರುವ 108 ಗ್ರಾಮಗಳ ಪೈಕಿ ಸತ್ತಾರಿ ತಾಲೂಕಿನ 21 ಗ್ರಾಮಗಳನ್ನು ಪಟ್ಟಿಯಿಂದ ಹೊರಗಿಡಬೇಕೆಂದು ಅಲ್ಲಿನ ಸರ್ಕಾರ ಕೋರಿದೆ.

ಲಖನೌ ಕೋಚಿಂಗ್ ಸೆಂಟರ್ ಕಟ್ಟಡದಲ್ಲಿ ಭಾರೀ ದುರಂತ

ಅಗ್ನಿ ಅನಾಹುತಕ್ಕೆ 15 ಜನ ಬಲಿ

• **ಲಖನೌ:** ಉತ್ತರ ಪ್ರದೇಶದ ರಾಜಧಾನಿ ಲಖನೌನ ಅಲಿಗಂಜ್ ಪ್ರದೇಶದಲ್ಲಿರುವ 3 ಮಹಡಿ ವಾಣಿಜ್ಯ ಕಟ್ಟಡದಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಕನಿಷ್ಠ 15 ಮಂದಿ ಮೃತಪಟ್ಟಿದ್ದು, 7 ಮಂದಿ ಗಾಯಗೊಂಡಿದ್ದಾರೆ. ಮೃತಪಟ್ಟವರಲ್ಲಿ ಅನಿಮೇಷನ್ ತರಬೇತಿ ಕೇಂದ್ರಕ್ಕೆ ಬಂದಿದ್ದ ಹಲವು ವಿದ್ಯಾರ್ಥಿಗಳು ಸೇರಿದ್ದಾರೆ. ಕಟ್ಟಡದ 2ನೇ ಮಹಡಿಯಲ್ಲಿ ಅನಿಮೇಷನ್ ತರಗತಿಗಳು ನಡೆಯುತ್ತಿದ್ದ ವೇಳೆ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿ, ದಟ್ಟ ಹೊಗೆ ಕ್ಷಣಾರ್ಧದಲ್ಲಿ ಕಟ್ಟಡ ಆವರಿಸಿದ್ದರಿಂದ ಅನೇಕರು ಒಳಗೇ ಸಿಲುಕಿಕೊಂಡರು. ಕೆಲವರು ಜೀವ ಉಳಿಸಿಕೊಳ್ಳಲು ಮೇಲ್ಮಹಡಿಯಿಂದ ಜಿಗಿದ ಪರಿಣಾಮ ಗಾಯಗೊಂಡಿದ್ದಾರೆ.

ಮಧ್ಯಾಹ್ನ ಸುಮಾರು 3 ಗಂಟೆಗೆ ಬೆಂಕಿ ಕಾಣಿಸಿಕೊಂಡ ಮಾಹಿತಿ ದೊರಕುತ್ತಿದ್ದಂತೆ 14 ಅಗ್ನಿಶಾಮಕ ವಾಹನಗಳು, ಹೈಡ್ರಾಲಿಕ್ ಪ್ಲಾಟ್‌ಫಾರ್ಮ್ ವಾಹನ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹಾಗೂ ನಾಗರಿಕ ರಕ್ಷಣಾ ಪಡೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು.

➡ಪುಟ 9



ಸಾಕು ಪ್ರಾಣಿಗಳ ಸಾವು

ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೆಟ್ ಕ್ಲಿನಿಕ್‌ನಲ್ಲಿದ್ದ ಪ್ರಾಣಿಗಳೂ ಅಗ್ನಿ ದುರಂತಕ್ಕೆ ಬಲಿಯಾಗಿವೆ. ರಕ್ಷಣಾ ಕಾರ್ಯಾಚರಣೆ ವೇಳೆ ಕನಿಷ್ಠ 3 ಪ್ರಾಣಿಗಳ ಮೃತ ದೇಹಗಳನ್ನು ಹೊರತೆಗೆದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕಲ್ಪ ಸಮಾವೇಶದಿಂದ ಪ್ರಮಾದಕ್ಕೆ ಹರಿಪ್ರಸಾದ್ ವಿಷಾದ

ನೀಟ್ ವಂಚಿತರಾದವರಿಗೆ ನೆರವು

• **ಬೆಂಗಳೂರು:** ಸಂಕಲ್ಪ ಸಮಾವೇಶ ಕಾರ್ಯಕ್ರಮದ ಟ್ರಾಫಿಕ್ ಸಮಸ್ಯೆಯಿಂದ ಎರಡು, ಮೂರು ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗಿಲ್ಲ ಎಂಬ ಸುದ್ದಿ ನೋಡಿದೆ. ಈ ಕಾರ್ಯಕ್ರಮದಿಂದ ಇಂತಹ ಪ್ರಮಾದವಾಗಿದ್ದರೆ ನಾವು ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು.



ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಿಯೂ ಸಮಸ್ಯೆಯಾಗಬಾರದು ಎಂದು ಅರಮನೆ ಮೈದಾನದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೂ ಎರಡು ಮೂರು ಮಕ್ಕಳಿಗೆ ತೊಂದರೆ ಆಗಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಅವರಿಗೆ ಮುಂದಿನ ಪರೀಕ್ಷೆ ಕೈಗೊಳ್ಳಲು ಬೇಕಾಗಿರುವ ಎಲ್ಲಾ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ ಎಂದರು.

➡ಪುಟ 9

ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ರಾಜಕೀಯಕ್ಕೆ ಹೆಚ್ಚು ಆದ್ಯತೆ

• **ಹೊಸದಿಲ್ಲಿ:** ಕಾಂಗ್ರೆಸ್‌ಗೆ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ರಾಜಕೀಯವೇ ಮೊದಲ ಆದ್ಯತೆ ಆಗಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಮತ್ತು ರಾಜ್ಯಸಭಾ ಸಂಸದ ಸುಧಾಂಶು ತ್ರಿವೇದಿ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಗರದ ಸಂಚಾರಕ್ಕೆ ಅಡ್ಡಿಪಡಿಸಿದ ಕಾಂಗ್ರೆಸ್ ಸಮಾವೇಶದಿಂದ ಬೆಂಗಳೂರಿನಲ್ಲಿ ಅನೇಕ ವಿದ್ಯಾರ್ಥಿಗಳು ನೀಟ್ ಯುಜಿ ಮರುಪರೀಕ್ಷೆಗೆ ನಿಗದಿತ ಸಮಯಕ್ಕೆ ತಲುಪಲು ಸಾಧ್ಯವಾಗದೆ ಪರೀಕ್ಷೆ ಬರೆಯುವುದರಿಂದ ವಂಚಿತರಾಗಿದ್ದಾರೆ.

➡ಪುಟ 9

ಶಿಂಧೆ ಗುಂಪಿಗೆ ಸೇರ್ಪಡೆಯಾದ ಉದ್ಧವ್ ಬಣದ 6 ಸಂಸದರು

ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ ಘೋಷಣೆ

• **ಮುಂಬೈ:** ಶಿವಸೇನೆ(ಯುಬಿಟಿ) ಬಣದ 6 ಬಂಡಾಯ ಲೋಕಸಭಾ ಸದಸ್ಯರು ಸೋಮವಾರ ಅಧಿಕೃತವಾಗಿ ಆಡಳಿತಾರೂಢ ಶಿವಸೇನೆಗೆ ಸೇರ್ಪಡೆಯಾಗಿದ್ದಾರೆ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಘೋಷಿಸಿದ್ದಾರೆ. ಈ ಪಕ್ಷಾಂತರ, ಉದ್ಧವ್ ಠಾಕ್ರೆ ನೇತೃತ್ವದ ಬಣವನ್ನು ಮತ್ತೊಂದು ಸೀಳಾಗಿಸಿದೆ.

ಈ ಸಂಸದರು ಶಿಂಧೆ ಮತ್ತು ಇತರ ಹಿರಿಯ ಪಕ್ಷದ ನಾಯಕರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಸೇನೆಗೆ ಸೇರಿದ್ದಾರೆ. ಹೊಸದಿಲ್ಲಿಯಲ್ಲಿ ನಡೆದ ಶಿವಸೇನೆ(ಯುಬಿಟಿ) ಸಂಸದೀಯ ಪಕ್ಷದ ಸಭೆಗೆ ಈ ಸದಸ್ಯರು ಗೈರಾದ 5 ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

➡ಪುಟ 9

ವ್ಯವಸ್ಥಿತ ಅನುಷ್ಠಾನಕ್ಕೆ ಶಿಕ್ಷಣ ಇಲಾಖೆ ನಿರ್ಧಾರ

ಮರು ಸಿಂಚನ ಮತ್ತೆ ಚುರುಕು

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿಯೂ ನಿರೀಕ್ಷಿತ ಕಲಿಕಾ ಸಾಮರ್ಥ್ಯ ತಲುಪದ ವಿದ್ಯಾರ್ಥಿಗಳನ್ನು ಗುರುತಿಸುವುದು, ಅಂತಹವರಿಗೆ ಹೆಚ್ಚುವರಿ ಶೈಕ್ಷಣಿಕ ನೆರವು ಒದಗಿಸುವ ಮಹತ್ವಾಕಾಂಕ್ಷೆಯ ಮರು ಸಿಂಚನ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಮತ್ತೆ ಚುರುಕುಗೊಳಿಸಿದೆ.

ರಾಜ್ಯದಲ್ಲಿ ಕಳೆದೆರಡು ವರ್ಷಗಳಲ್ಲಿ ಅನುಷ್ಠಾನಗೊಂಡಿದ್ದ ಈ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗದ ಹಿನ್ನೆಲೆಯಲ್ಲಿ ಈ ಬಾರಿ ಹೆಚ್ಚು ವ್ಯವಸ್ಥಿತವಾಗಿ ಹಾಗೂ ಗುರಿ ಆಧಾರಿತವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಶಿಕ್ಷಣ ಇಲಾಖೆ ಸಜ್ಜಾಗಿದೆ. ಈಗಾಗಲೇ ಶಾಲೆಗಳಲ್ಲಿ ಸೇತುಬಂಧ ಕಾರ್ಯಕ್ರಮದ ಮೂಲಕ ಪೂರಕ ಕಲಿಕೆಯನ್ನು ಒದಗಿಸುತ್ತಿರುವ ಶಿಕ್ಷಣ ಇಲಾಖೆ, ಇದೀಗ ಮರು ಸಿಂಚನ ಯೋಜನೆಯ ಮೂಲಕ ತಳಮಟ್ಟದಲ್ಲಿರುವ ವಿದ್ಯಾರ್ಥಿಗಳನ್ನು ನಿರ್ದಿಷ್ಟ ಕಲಿಕಾ ಫಲಿತಾಂಶ ತಲುಪಿಸುವ ಗುರಿ ಹೊಂದಿದೆ. ಅದಕ್ಕೆ ಪೂರಕವಾಗಿ ಈ ಯೋಜನೆ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಸುಧಾರಿಸುವತ್ತ ವಿಶೇಷ ಗಮನಹರಿಸಿದೆ.

ಕಲಿಕಾ ಗುಣಮಟ್ಟ ಸುಧಾರಣೆಗೆ ಕ್ರಮ

➡ಪುಟ 9



3.83 ಲಕ್ಷ ವಿದ್ಯಾರ್ಥಿಗಳಿಗೆ ಲಾಭ

ಕನ್ನಡ, ಇಂಗ್ಲಿಷ್, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳನ್ನು ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಎಸ್‌ಸಿಇಆರ್‌ಟಿ) ವಿಶೇಷ ಕಲಿಕಾ ವಿಷಯಗಳನ್ನು ಸಿದ್ಧಪಡಿಸಿದೆ.

➡ಪುಟ 9

ಮಮತಾಗೆ ಕೊಕ್

• **ಕೋಲ್ಕತಾ:** ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಹಾಗೂ ತೃಣಮೂಲ ಕಾಂಗ್ರೆಸ್ ಸಂಸ್ಥಾಪಕಿ ಮಮತಾ ಬ್ಯಾನರ್ಜಿ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿರುವುದಾಗಿ ರಚ್ಚುತ ಬ್ಯಾನರ್ಜಿ ನೇತೃತ್ವದ ಬಂಡಾಯ ಬಣ ಸೋಮವಾರ ಘೋಷಿಸಿದೆ. ಇವರ ಜಾಗಕ್ಕೆ ಅರೂಪ್ ರಾಯ್ ಅವರನ್ನು ನೇಮಿಸಲಾಗಿದೆ ಎಂದು ಹೇಳಲಾಗಿದೆ. ಕೋಲ್ಕತ್ತಾದ ಖಾಸಗಿ ಹೋಟೆಲ್‌ನಲ್ಲಿ ಬಂಡಾಯ ಶಾಸಕರು ಮತ್ತು ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಸಭೆಯ ಬಳಿಕ 10 ಸದಸ್ಯರ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಟಿಎಂಸಿ ಪಕ್ಷಾಧ್ಯಕ್ಷ ಸ್ಥಾನದಿಂದ ವಜಾ

➡ಪುಟ 9

ಯುವಕರನ್ನು ಸಂಘಟಿಸಿ

ಪುಟ 0➔ ಅವುಗಳಲ್ಲಿ ಪಕ್ಷದ ಕೆಳ ಹಂತದ ಕಾರ್ಯಕರ್ತರಿಗೆ ಅವಕಾಶ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಿಕೊಂಡು ಬರಬೇಕಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಯವರು ತಮ್ಮ ಪಕ್ಷದ ಜಿಲ್ಲಾಧ್ಯಕ್ಷರ ಜತೆ ಸಮಾಲೋಚನೆ ನಡೆಸಿದರು. ರಾಜ್ಯ ಸರ್ಕಾರ ಘೋಷಣೆ



ಮಾಡಿರುವ ಐದು ಗ್ಯಾರಂಟಿಗಳು ರಾಜ್ಯ ಅರ್ಹ ಫಲಾನುಭವಿಗಳಿಗೆ ತಲುಪಬೇಕು ಎಂಬುದು ನಮ್ಮ ಸರ್ಕಾರದ ಉದ್ದೇಶ. ಆದರೆ, ಕೆಲವು ಕಡೆಗಳಲ್ಲಿ ಗ್ಯಾರಂಟಿ ಯೋಜನೆಗಳು ಅನರ್ಹರಿಗೂ ಸಿಗುತ್ತಿವೆ, ಅದರಲ್ಲೂ ಗೃಹಲಕ್ಷ್ಮಿ ಯೋಜನೆಯಲ್ಲಿ ಸತ್ತವರ ಖಾತೆಗಳಿಗೂ ಹಣ ಹೋಗಿರುವ ಬಗ್ಗೆ ಗೊತ್ತಾಗಿದೆ. ಇಂತಹ ಪ್ರಕರಣಗಳ ಮೇಲೆ ಜಿಲ್ಲಾ ಅಧ್ಯಕ್ಷರುಗಳು ನಿಗಾ ಇರಿಸಬೇಕು ಎಂದು ಡಿ.ಕೆ.ಶಿವಕುಮಾರ್ ಸೂಚಿಸಿದರು. ಅಲ್ಲದೇ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳ ಮೂಲಕ ಗ್ಯಾರಂಟಿ ಯೋಜನೆಗಳ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಸಾರ್ವಜನಿಕ ಸ್ಥಳದಲ್ಲಿ ಚರ್ಚೆಯಾಗಲಿ: ಎಚ್.ಡಿ. ಕುಮಾರಸ್ವಾಮಿ

ಎಚ್‌ಡಿಕೆಗೆ ಸಿಎಂ ಡಿಕೆಶಿ ಆಹ್ವಾನ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ನಿರ್ಮಾಣದ ಕುರಿತ ಚರ್ಚೆಗೆ ನಾನು ಸಿದ್ಧನಿದ್ದೇನೆ ಎಂದಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಆಹ್ವಾನ ನೀಡಿದ್ದು, ಜೂ.26 ರಂದು ವಿಧಾನಸೌಧದ ತಮ್ಮ ಕಚೇರಿಗೆ ಆಗಮಿಸುವಂತೆ ಪತ್ರ ಬರೆದಿದ್ದಾರೆ.

ಸೋಮವಾರ ಸುದ್ದಿಗೋಷ್ಠಿ ನಡೆಸಿ, ಬೈರಮಂಗಲದ ಪ್ರತಿಭಟನಾ ಸ್ಥಳಕ್ಕೆ ಬನ್ನಿ, ಅಲ್ಲಿ ಕೂತಿರುವವರು ಅಸಲಿ ರೈತರೋ ಅಥವಾ ನಕಲಿ ರೈತರೋ ಎಂಬುದು ನಿಮಗೆ ಗೊತ್ತಾಗುತ್ತದೆ. ನಾನು ಸಿದ್ಧನಿದ್ದೇನೆ, ಬೈರಮಂಗಲಕ್ಕೆ ಬರುವುದಕ್ಕೆ ನೀವು ಸಿದ್ಧರಿದ್ದೀರಾ ಎಂದು ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದರು.

ಈ ಸವಾಲು ಸ್ವೀಕರಿಸಿರುವ ಸಿಎಂ ಡಿ.ಕೆ. ಶಿವಕುಮಾರ್ ಅವರು, ತಾವು ಪ್ರಾರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ, ತಮ್ಮ ಜೊತೆ ನಾನು ಚರ್ಚಿಸಲು ಉತ್ಸುಕನಾಗಿದ್ದು, ಜೂ.26 ಬೆಳಗ್ಗೆ 11 ಗಂಟೆಗೆ ವಿಧಾನಸೌಧಕ್ಕೆ ತಾವು ಮತ್ತು ತಮ್ಮ ತಂಡದ ಐದು ಪ್ರತಿನಿಧಿಗಳೊಂದಿಗೆ ನನ್ನ ಕಚೇರಿಗೆ ಆಗಮಿಸುವಂತೆ ತಮ್ಮನ್ನು ಕೋರುತ್ತೇನೆ ಎಂದು ಪತ್ರ ಬರೆದಿದ್ದಾರೆ.ಬಿಡದಿ ಟೌನ್‌ಶಿಪ್ ವಿಚಾರವಾಗಿ ಸುಮಾರು ದಿನಗಳಿಂದ ಸಿಎಂ ಡಿ.ಕೆ ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ನಡುವಿನ ಜಟಾಪಟಿ ಜೋರಾಗಿದ್ದು, ಬಿಡದಿ ಟೌನ್ ಶಿಪ್ ವಿಚಾರವಾಗಿ ಎಚ್.ಡಿ ಕುಮಾರಸ್ವಾಮಿ ಪರವಾಗಿ ಜೆಡಿಎಸ್‌ನವರು ಅಧಿವೇಶನದಲ್ಲಿ ಚರ್ಚೆ ಮಾಡಲಿ, ಉತ್ತರ ಕೊಡೋಣ ಎಂದಿರುವ ಸಿಎಂ ಡಿ.ಕೆ ಶಿವಕುಮಾರ್ ಅವರು, ನಾನು ಈಗ ಏನನ್ನೂ ಮಾತನಾಡುವುದಿಲ್ಲ, ಹಿಂದೆಯೇ ಚರ್ಚೆಗೆ ಕರೆದಿದ್ದೆ, ಅವರೆ ಬರಲಿಲ್ಲ, ಮುಂದಿನ ಅಧಿವೇಶನದಲ್ಲಿ ಅವರ ಪಕ್ಷದ, ಇತರ ಅನುಭವಿ ರಾಜಕಾರಣಿಗಳ ಮೂಲಕ ಚರ್ಚೆ ಮಾಡಿಸಲಿ ಎಂದಿದ್ದಾರೆ.ಸಿಎಂ ಡಿ.ಕೆ. ಶಿವಕುಮಾರ್ ಆಹ್ವಾನಕ್ಕೆ ಪ್ರತಿಯಾಗಿ ಪತ್ರ ಬರೆದಿರುವ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು, ವಿಧಾನಸೌಧದಲ್ಲಿ ನಡೆಸಲು ಉದ್ದೇಶಿಸಿರುವ ಸಭೆಯಲ್ಲಿ ಭಾದಿತ ರೈತ ವರ್ಗ, ಗ್ರಾಮಸ್ಥರು ಮತ್ತು ಪಾಲುದಾರರನ್ನು ಆಹ್ವಾನಿಸದೆ ಅವರನ್ನು ಹೊರಗೆ ಇಟ್ಟು ಸಭೆ ನಡೆಸುವುದರಿಂದ ಸಭೆ ಫಲಪ್ರದವಾಗುವುದಿಲ್ಲ, ತಾವು ನಿಗದಿಪಡಿಸಿದ ಜೂ.26 ಶುಕ್ರವಾರ ರಂದು ನನಗೆ ಪೂರ್ವ ನಿಯೋಜಿತ ಕಾರ್ಯಕ್ರಮಗಳು ಇರುವುದರಿಂದ, ಈ ಉದ್ದೇಶಿತ ಸಭೆಯನ್ನು ಜೂ.27ರ ಶನಿವಾರ ಬಿಡದಿ ಅಥವ ಬೈರಮಂಗಲದ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಯೋಜನೆ ಭಾದಿತ ವರ್ಗದ ಜನರನ್ನು ಆಹ್ವಾನಿಸಿ ಸಭೆ ನಡೆಸಬೇಕೆಂದು ಕೋರಿದ್ದಾರೆ.

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಇಂಗಿತ

ಭೈರಪ್ಪನವರ ಸಾಹಿತ್ಯ ಮೌಲ್ಯಯುತ

• **ಮೈಸೂರು:** ಕಾದಂಬರಿಕಾರ ಡಾ. ಎಸ್.ಎಲ್.ಭೈರಪ್ಪ ಅವರು ಕೊನೆ ಕ್ಷಣದವರೆಗೆ ತಾನು ನಂಬಿದ ವಿಚಾರ ಬಿಟ್ಟು ಅವರು ಏನೂ ಮಾಡಲಿಲ್ಲ, ಅವರ ನೆನಪಿನ ಶಕ್ತಿ ಅಪಾರ. ಅದು ಕೊನೆಯ ದಿನಗಳಲ್ಲಿ ನ್ಯಾಯಾಲಯದಲ್ಲಿ ಸಾಬೀತು ಮಾಡಿದರು ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಶ್ರೀರಂಗಪಟ್ಟಣದ ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ದಿವಂಗತ ಡಾ.ಎಸ್.ಎಲ್.ಭೈರಪ್ಪ ಸಂಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭೈರಪ್ಪನವರ ಸಾಹಿತ್ಯವನ್ನು ವಿಶ್ವ ಸಾಹಿತ್ಯ ದೃಷ್ಟಿಯಿಂದ ನೋಡಬೇಕಿದೆ. ಕನ್ನಡ ಪತ್ರಿಕಾ ರಂಗದಲ್ಲಿ ಒಂದು ಗ್ಯಾಂಗ್ ಇತ್ತು. ಅನಂತಮೂರ್ತಿ, ಲಂಕೇಶ್ ಅವರ ಬಗ್ಗೆ ಚರ್ಚೆ, ವಿಮರ್ಶೆ ನಡೆಯುತ್ತಿತ್ತು. ಆದರೆ ಭೈರಪ್ಪನವರ ಬಗ್ಗೆ ಚರ್ಚೆಯೇ ಇಲ್ಲವಾಗಿತ್ತು. ಈ ಬಗ್ಗೆ ಭೈರಪ್ಪನವರು ಬೇಸರ ಮಾಡಿಕೊಳ್ಳಲಿಲ್ಲ ಎಂದು ಹೇಳಿದರು. ಡಾ.ಎಸ್.ಎಲ್.ಭೈರಪ್ಪನವರ ಸಾಹಿತ್ಯ ಮೌಲ್ಯಯುತವಾದ್ದದು. ಅವರ ಪ್ರತೀ ಪುಸ್ತಕದಿಂದ ಒಂದು ರೂ. ಕೋಟಿಗೂ ಹೆಚ್ಚಿನ ಸಂಭಾವನೆ ಬಂದಿದೆ. ಕನ್ನಡದ ಯಾವ ಲೇಖಕರಿಗೂ ಆ ರೀತಿ ಬಂದಿಲ್ಲ, ಭೈರಪ್ಪನವರ ನಿಧನದ ನಂತರ ಅವರ ಕೃತಿಗಳ ಮಾರಾಟದಿಂದ ನಾಲ್ಕು ಕೋಟಿ ರೂಪಾಯಿ ಬಂದಿದೆ.



ಫ್ರಾಂಕ್ ಫರ್ಟ್ ಪುಸ್ತಕ ಮೇಳದಲ್ಲಿ ಭೈರಪ್ಪನವರ ಪುಸ್ತಕ ಸತತ ಏಳು ವರ್ಷಗಳ ಕಾಲ ಮೊದಲ ಸಾಲಿನಲ್ಲಿದೆ. ಅವರ ಸಾಹಿತ್ಯದ ಮೌಲ್ಯ, ದ್ರವ್ಯ ಮಹತ್ತರವಾದುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ಯಾಲಯದ ಡಾ.ಎಚ್.ಎ. ನಾಗರಾಜರಾವ್, ವಿದ್ಯೋದಯ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್. ವಾಸುದೇವ ಭಟ್, ಚಿಂತಕ ಪ್ರೊ.ಅಜಕ್ಕಳ ಗಿರೀಶ್ ಭಟ್, ವಿದ್ವಾನ್ ಗ.ನಾ. ಭಟ್ ಉಪಸ್ಥಿತರಿದ್ದರು. ಭೈರಪ್ಪನವರು ಆಗಲಿ 9 ತಿಂಗಳು ಆಗಿದೆ. ಆದರೆ, ನಮ್ಮ ಚಿತ್ತಭಿತ್ತಿಯಲ್ಲಿ ಶಾಶ್ವತವಾಗಿ ನೆಲೆಸಿದವರು ಎಂದು ಹೇಳಿದರು. ಭೈರಪ್ಪನವರು, ಪತ್ರಿಕೆ ಮುದ್ರಣಕ್ಕೆ ಹೋಗುವ ಮುನ್ನ ಕನಿಷ್ಠ ಹತ್ತು ಜನ ಅದನ್ನು ಓದಬೇಕು. ಫ್ಯಾಕ್ಟ್ ಚೆಕ್ ಆಗಬೇಕು ಎಂದು ಸಲಹೆ ನೀಡಿದ್ದರು. ಒಳದಾರಿ, ಶಾರ್ಟ್ ಕಟ್ ಅವರಿಗೆ ಆಗುತ್ತಿರಲಿಲ್ಲ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ವಿಷವನ್ನು ತಾನು ಕುಡಿದು ಜಗತ್ತಿಗೆ ಅಮೃತವನ್ನು ನೀಡಿದ ದೇವರು ಈಶ್ವರ
- ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

-ಅದು ಈಶ್ವರನಿಗೆ ಮಾತ್ರ ಸಾಧ್ಯವಾದೀತು, ನಾವು ನಶ್ವರರು.ಇನ್ನೊಬ್ಬರಿಗೆ ವಿಷವನ್ನು ಕೊಟ್ಟು ಸಂತೋಷವಾಗಿಟ್ಟು ಸಂಭ್ರಮಿಸುವ ಆಧುನಿಕರು ನಾವು!

ದಿನ ಭವಿಷ್ಯ

ಮೇಷ
ನೀವು ಎಸಗಿದ ತಪ್ಪುಗಳನ್ನು ಸರಿಪಡಿಸಲು ಗಮನ ಕೊಡಿ. ತಪ್ಪು ಒಪ್ಪಿಕೊಳ್ಳುವುದರಲ್ಲಿ ನಾಚಿಕೆ ಇಲ್ಲ. ಆರೋಗ್ಯ ಸಮಸ್ಯೆ ಕಾಡಬಹುದು.

ವೃಷಭ
ವೃತ್ತಿಯಲ್ಲಿ ಮಂದಗತಿ ಕಾಯ್ದುಕೊಳ್ಳಿ. ಮುಂಜಾಗ್ರತೆಗೆ ಒಲವು. ಹಣ ಹೂಡಿಕೆಗೆ ದೀರ್ಘಾವಧಿ ಯೋಜನೆ ಒಳ್ಳೆಯದು.

ಮಿಥುನ
ಆಪ್ತೀಯರ ಒತ್ತಡ ಕಡಿಮೆ ಮಾಡಲು ನಿಮ್ಮ ಪ್ರಯತ್ನವಿರಲಿ. ಹಣ ಹೂಡಿಕೆ ಇಂದು ಒಳಿತಲ್ಲ. ವೃತ್ತಿಯಲ್ಲಿ ಹುರುಪು ಹಿನ್ನಡೆ ಕಾಣುವಿರಿ. ಧನವ್ಯಯ.

ಕಟಕ
ವೃತ್ತಿಯಲ್ಲಿ ಹೊಸ ಅವಕಾಶ ಕಾಣಲಿದೆ. ಸದುಪಯೋಗ ಮಾಡಿ. ಮನಸೊಪ್ಪುವ ಸಂಗಾತಿ ಸಿಕ್ಕಿಯಾರು. ಸಂಬಂಧ ದೃಢವಾದೀತು.

ಸಿಂಹ
ವೃತ್ತಿ ಬದಲಿಸಲು ಯೋಚಿಸಿದ್ದರೆ ಕಾಲ ಪಕ್ವವಾಗಿದೆ. ಹಣದ ವಿಚಾರದಲ್ಲಿ ಯಾರನ್ನೂ ಕುರುಡಾಗಿ ನಂಬದಿರಿ. ಆರೋಗ್ಯ ಸಮಸ್ಯೆ.

ಕನ್ಯಾ
ಮನೆಯವರು ನಿಮ್ಮಿಂದ ಹೆಚ್ಚು ಗಮನ ಅಪೇಕ್ಷಿಸುವರು. ವೃತ್ತಿ ಒತ್ತಡದಲ್ಲೇ ಮುಳುಗದಿರಿ. ಆಹಾರದ ಅತಿಸೇವನೆ ಹೊಟ್ಟೆ ಕೆಡಿಸಬಹುದು.

ತುಲಾ
ದಿನವಿಡೀ ಗೊಂದಲದ ಮನಸ್ಥಿತಿ. ವೃತ್ತಿಯಲ್ಲಿ ಹೊಸ ಸವಾಲು. ಭಾವನೆ ಬದಿಗಿಟ್ಟು ವೃತ್ತಿಪರತೆಯಿಂದ ನಿಭಾಯಿಸಿ.

ವೃಶ್ಚಿಕ
ಯಾವುದೇ ಕೆಲಸಕ್ಕೆ ಇಂದು ಹೆಚ್ಚುವರಿ ಶ್ರಮ ಅಗತ್ಯ. ಆದೇಶದ ಉಂಟಾಗಲಿದೆ. ಆಸಕ್ತಿಕರ ವ್ಯಕ್ತಿಯ ಭೇಟಿ. ಸಂಬಂಧ ಬಲಗೊಳ್ಳಲಿದೆ.

ಧನು
ಸಣ್ಣ ಆರೋಗ್ಯ ಸಮಸ್ಯೆ ಕಾಡಿದರೂ ನಿರ್ಲಕ್ಷ್ಯ ಬೇಡ. ಸೂಕ್ತ ಚಿಕಿತ್ಸೆ ಕೂಡಲೇ ನಡೆಸಿ. ವೃತ್ತಿಯ ಒತ್ತಡ ಇಂದು ಕಡಿಮೆಯಾಗಲಿದೆ.

ಮಕರ
ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಕೂಡಲೇ ಬಗೆಹರಿಸಿ. ಹೊಸ ವ್ಯವಹಾರದಲ್ಲಿ ಹಣ ಹೂಡಿಕೆ ನಿರೀಕ್ಷಿತ ಫಲಿತಾಂಶ ನೀಡದು.

ಕುಂಭ
ಹಣದ ಬಿಕ್ಕಟ್ಟು ಕಾಡಬಹುದು. ಸೂಕ್ತ ಸಲಹೆ ಕೇಳಪಡೆಯಿರಿ. ಆರೋಗ್ಯ ಕಾಪಾಡಲು ಸೂಕ್ತ ಮುನ್ನೆಚ್ಚರಿಕೆ ವಹಿಸಿ. ಧನವ್ಯಯ ಅಧಿಕ.

ಮೀನ
ಹಣದ ವ್ಯವಹಾರ ಸರಿದಾರಿಗೆ ತನ್ನಿ. ಖರ್ಚು ಕಡಿಮೆ ಮಾಡಿ. ಸಣ್ಣ ವಿಷಯಗಳು ಹೆಚ್ಚು ಕಿರಿಕಿರಿ ಸೃಷ್ಟಿಸುವವು. ಸಮಚಿತ್ತ ಅವಶ್ಯ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 8,3,9,4

ಆರೆಸ್ಸೆಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೇಂಡೆ

ಸಮಾಜ ಜಾಗೃತಿಗೆ ಆರೆಸ್ಸೆಸ್

• **ಉಡುಪಿ:** ಸಂಘವನ್ನು ಡಾ. ಹೆಡಗೇವಾರ್ ಅವರು ಯಾರನ್ನೂ ವಿರೋಧಿಸುವುದಕ್ಕಾಗಿ ಆರೆಸ್ಸೆಸ್ಸನ್ನು ಹುಟ್ಟು ಹಾಕಿದ್ದಲ್ಲ,ಬದಲಿಗೆ ತಮ್ಮನ್ನು ತಾವೇ ಮರೆತು ಹೋಗಿದ್ದ, ಸ್ವಾಭಿಮಾನ ಹೀನರಾಗಿದ್ದ ಹಿಂದು ಸಮಾಜವನ್ನು ಜಾಗೃತಿ ಮಾಡುವುದಕ್ಕಾಗಿ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೇಂಡೆ ಅವರು ಹೇಳಿದರು.

ಉಡುಪಿಯ ಕಿನ್ನಿಮೂಲ್ಕಿ ಶ್ರೀದೇವಿ ಸಭಾ ಭವನದಲ್ಲಿ ನಡೆದ ಪ್ರಮುಖ ನಾಗರಿಕರ ಗೋಷ್ಠಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿಂದು ಸಮಾಜ ಜಾಗೃತಿಗಾಗಿ ಸ್ಥಾಪಿತವಾದ ಸಂಘ ಇಂದು ತಾನು ಜಾತ್ಯತೀತವಾದದತ್ತ ಹೊರಳುತ್ತಿದೆಯಾ? ಹಿಂದು ರಾಷ್ಟ್ರ ಎಂದು ಸಂವಿಧಾನದಲ್ಲೇ ಉಲ್ಲೇಖಿಸಬೇಕು ಎಂಬ ವ್ಯಕ್ತಿಯೊಬ್ಬರ ವಾದಕ್ಕೆ ಉತ್ತರಿಸಿದ ಅವರು, ಭಾರತ ಮೂಲದಲ್ಲೇ ಜಾತ್ಯತೀತವಾಗಿದೆ. ನಾವೆಲ್ಲರೂ ವಿವಿಧತೆಯಲ್ಲಿ ಏಕತೆ ಎಂಬ ತತ್ವದಲ್ಲಿ ಬದುಕುತ್ತಿದ್ದೇವೆ. ಹಿಂದು ರಾಷ್ಟ್ರ ಎಂದು ಸಂವಿಧಾನದಲ್ಲಿ ಉಲ್ಲೇಖಿಸಬೇಕಾದ ಅವಶ್ಯಕತೆಯಿಲ್ಲ, ಬದಲಾಗಿ ಅದು ನಮ್ಮ ನಂಬಿಕೆಯಲ್ಲೇ ಬೇರೂರಿದೆ. 800 ವರ್ಷ ಮೊಗಲರ ಹಾಗೂ 200 ವರ್ಷ ಬ್ರಿಟಿಷರ ದಾಳಿಯ ಹೊರತಾಗಿಯೂ ಭಾರತ ಹಿಂದು ರಾಷ್ಟ್ರವಾಗಿಯೇ ಉಳಿದಿದೆ. ಇದಕ್ಕೆ ಯಾವ ಸರ್ಟಿಫಿಕೇಟ್ ಕೂಡ ಅಗತ್ಯವಿಲ್ಲ ಎಂದರು.

ದೇವಸ್ಥಾನಗಳ ದುಡ್ಡು ದುರ್ಬಳಕೆ ತಡೆಗೆ ಸಂಸ್ಕಾರ ಅಗತ್ಯ: ದೇವಸ್ಥಾನಗಳ ಆಡಳಿತ ಸರ್ಕಾರದ ಬಳಿ ಇರಬೇಕಾ ಅಥವಾ ಆಡಳಿತ ಮಂಡಳಿ ಬಳಿ ಇರಬೇಕಾ ಎಂಬ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಗೋಜಲಿನ ವಿಷಯ. ಇಲ್ಲಿ ಯಾರ ಬಳಿ ಆಡಳಿತ ಇದೆ ಎಂಬುದಕ್ಕಿಂತ ಮುಖ್ಯವಾಗಿ ಅದನ್ನು ದುರ್ಬಳಕೆ ಮಾಡಬಾರದು ಎಂಬ ಸಂಸ್ಕಾರ ಅದನ್ನು ನಿರ್ವಹಿಸುವವರಿಗೆ ಬರಬೇಕಾಗುತ್ತದೆ. ಇದಕ್ಕಾಗಿ ಜಾಗೃತಿ,ಸಂಸ್ಕಾರ ಮೂಡಿಸಬೇಕಿದೆ ಎಂದರು. ಮಂಗಳೂರು ವಿಭಾಗ ಸಂಘಚಾಲಕ್ ನಾರಾಯಣ ಶೆಣೈ ಉಪಸ್ಥಿತರಿದ್ದರು. ಅಭಯ್ ವೈಯಕ್ತಿಕ ಗೀತೆ ಹಾಡಿದರು. ಶ್ರೀದೇವಿ ವಂದೇಮಾತರಂ ಹಾಡಿದರು. ಜಿಲ್ಲಾ ಸಂಪರ್ಕ ಪ್ರಮುಖ್ ಕೃಷ್ಣ ಪ್ರಸಾದ್ ಸ್ವಾಗತಿಸಿ , ನವೀನ್ ವಂದಿಸಿದರು.



ಜನಸಂಖ್ಯೆ ಕುರಿತು ಹಿಂದುಗಳಲ್ಲಿ ಜಾಗೃತಿ ಅಗತ್ಯ

ಸ್ವಾತಂತ್ರ್ಯದ ವೇಳೆ ಭಾರತದ ಹಿಂದುಗಳ ಶೇಕಡಾವರು ಜನಸಂಖ್ಯೆಗಿಂತ ಈಗಿನ ಹಿಂದುಗಳ ಜನಸಂಖ್ಯೆ ಕುಸಿದಿದೆ. ಇದರಿಂದ ನಾವೇನು ಜಾಗೃತಿ ಪಡೆದುಕೊಳ್ಳಬಹುದು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇಂದು ಹಿಂದು ಸಮುದಾಯಗಳ ಮಕ್ಕಳ ಹೆರುವಿಕೆ ಫಲವತ್ತತೆ 1.9 ಕ್ಕೆ ಕುಸಿದಿದೆ. ಇದು 2.1 ರಷ್ಟಿದ್ದರೆ ಮಾತ್ರ ಸಮಾಜ ಉಳಿಯುತ್ತದೆ. ಇದರ ಕುರಿತು ಎಲ್ಲ ಕಡೆ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ವರ್ಷ ಜನಿಸಿದ 46 ಸಾವಿರ ಮಕ್ಕಳ ಪೈಕಿ 23 ಸಾವಿರ ಮಕ್ಕಳು ಮಾತ್ರ ಹಿಂದು ಸಮುದಾಯದ್ದು, ಉಳಿದ ಅರ್ಧ ಮಕ್ಕಳ ಜನನ ಬೇರೆ ಸಮುದಾಯದ್ದು ಅಂದರೆ ಇದು ಹಿಂದುಗಳು ಯೋಚಿಸುವ ವಿಚಾರವಾಗಿದೆ ಎಂದು ಎಚ್ಚರಿಸಿದರು.

ಖರ್ಗೆ ವಿರುದ್ಧ ಬಿ.ವೈ. ವಿಜಯೇಂದ್ರ ವಾಗ್ದಾಳಿ

ಪ್ರಧಾನಿ ಮೋದಿ ವಿರುದ್ಧ ಹಗುರ ಮಾತು ಬೇಡ

• **ಬೆಂಗಳೂರು:** ಸ್ವಾತಂತ್ರ್ಯ ಚಳವಳಿಯ ಉದ್ದೇಶಕ್ಕಾಗಿ ಹುಟ್ಟಿಕೊಂಡ ಕಾಂಗ್ರೆಸ್ ಹೆಸರಿನ ಸಂಘಟನೆಯನ್ನು ಹೈಜಾಕ್ ಮಾಡಿ ಅದರ ಪಾವಿತ್ರ್ಯತೆಯನ್ನು ಕುಲಗೆಡಿಸಿದವರು ನೀವು, ಯಾವ ನೈತಿಕತೆಯಿಟ್ಟುಕೊಂಡು ರಾಷ್ಟ್ರ ಭಕ್ತ ಸಂಘಟನೆ ಆರ್‌ಎಸ್‌ಎಸ್ ಹಾಗೂ ಪ್ರಧಾನಿ ಮೋದಿ ಅವರ ವಿರುದ್ಧ ಹಗುರವಾಗಿ ಮಾತನಾಡಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಶ್ನಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಸುದೀರ್ಘ ಪೋಸ್ಟ್ ಮಾಡಿದ್ದಾರೆ. ಲಕ್ಷಾಂತರ ಜನರ ತ್ಯಾಗ-ಬಲಿದಾನಗಳಿಂದ ಸ್ವತಂತ್ರ ಪಡೆದುಕೊಂಡ ಹೆಮ್ಮೆಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವಾಧಿಕಾರ ಮೆರೆದು ದೇಶವನ್ನು ದಾರಿದ್ರ್ಯ ವ್ಯವಸ್ಥೆಗೆ ತಂದಿಟ್ಟು ವಿಶ್ವಮಟ್ಟದಲ್ಲಿ ಭಾರತ ಭಿಕ್ಷುಕರ ದೇಶ ಎಂಬ ಕುಖ್ಯಾತಿಯ ಪಟ್ಟ ಕಟ್ಟಿದ್ದು ನಿಮ್ಮ ಕಾಂಗ್ರೆಸ್ ಪಕ್ಷ ಎಂದು ಟೀಕಿಸಿದ್ದಾರೆ.



ನಿಮ್ಮ ಮಾತುಗಳೆಲ್ಲವೂ ಹತಾಶೆ ಹಾಗೂ ಕೊಳಕು ಮನಸ್ಸನ್ನು ಪ್ರತಿಬಿಂಬಿಸುತ್ತದೆ. ಕಾಂಗ್ರೆಸ್‌ನ ಕೆಟ್ಟ ಸಂಸ್ಕೃತಿ ನೋಡಿಯೇ ಈ ದೇಶದ ಜನ ರಾಜಕೀಯ ಭೂಪಟದಲ್ಲಿ ಬಹುತೇಕ ಅಳಿಸಿ ಹಾಕಿದ್ದಾರೆ. ಅಲ್ಲೊಂದು ಇಲ್ಲೊಂದು ರಾಜ್ಯದಲ್ಲಿ ಪೊಳ್ಳು ಭರವಸೆ, ಅಪಪ್ರಚಾರ ಹಾಗೂ ಸಮಯಸಾಧಕತನದ ರಾಜಕಾರಣ ಮಾಡಿ ಅಧಿಕಾರದಲ್ಲಿ ಕುಳಿತಿದ್ದೀರಿ. ಸದ್ಯಕ್ಕೆ ಉಳಿದಿರುವ ರಾಜ್ಯಗಳಿಗಿಂತ ಕರ್ನಾಟಕ ರಾಜ್ಯವೇ ನಿಮ್ಮ ಪಾಲಿಗೆ ಭ್ರಷ್ಟತೆಯ ಫಲ ನೀಡುವ ಕಳ್ಳ ಖಜಾನೆಯಾಗಿದೆ. ಸರ್ಕಾರದ ಖಜಾನೆಗೇ ಕನ್ನ ಹಾಕಿದ ಕುಖ್ಯಾತಿ ಇಲ್ಲಿದೆ. ಸಾವಿರಾರು ನಿವೇಶನಗಳನ್ನು ಲೂಟಿ ಮಾಡಿದ ದಾಖಲೆಯೂ ಕಾಂಗ್ರೆಸ್ ಸರ್ಕಾರದ ಹೆಸರಿನಲ್ಲಿದೆ. ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನೆಲ್ಲಾ ದುರ್ಬಳಕೆ ಮಾಡಿಕೊಂಡ ಪರಿಶಿಷ್ಟ ದ್ರೋಹಿ ಸರ್ಕಾರ ಎಂಬ ಹೆಸರೂ ನಿಮ್ಮ ಪಕ್ಷದ ದಾಖಲೆಗೆ ಸೇರಿದೆ ಎಂದಿದ್ದಾರೆ. ರಾಜ್ಯದಲ್ಲಿ ಕನಿಷ್ಠ ಉದ್ಯೋಗ ಸೃಷ್ಟಿಸಲಿಲ್ಲ, ಹೋಗಲಿ ಎಂದರೆ ಇರುವ 2.85 ಲಕ್ಷ ಹುದ್ದೆಗಳನ್ನು ಖಾಲಿ ಉಳಿಸಿ, ನಿರುದ್ಯೋಗಿಗಳನ್ನು ವಂಚಿಸಿ, ಮುಗಿಲು ಮುಟ್ಟಿದ ಅವರ ಆಕ್ರೋಶದ ಹೋರಾಟ ಪ್ರಾಯಶಃ ನೀವು ಮರೆತಂತಿದೆ. ನರೇಂದ್ರ ಮೋದಿ ಅವರು ಉದ್ಯೋಗ ಸೃಷ್ಟಿಸಲಿಲ್ಲ ಎಂದು ಯಾವ ಅಂಕಿ ಅಂಶಗಳ ಆಧಾರದ ಮೇಲೆ ನೀವು ಹೇಳುತ್ತಿದ್ದೀರಿ? ಕಳೆದ 12 ವರ್ಷಗಳ ಮೋದಿ ಅವರ ಆಡಳಿತದಲ್ಲಿ ತಲೆಯೆತ್ತಿದ ಕೈಗಾರಿಕೆಗಳು, ಸೃಷ್ಟಿಯಾದ ಉದ್ಯೋಗಗಳು, ಸ್ವಾವಲಂಬಿ ಭಾರತವನ್ನಾಗಿಸುವ ನಿಟ್ಟಿನ ವಿಕಸಿತ ಭಾರತದ ಸಂಕಲ್ಪ ಸಾಕಾರಗೊಳ್ಳುತ್ತಿದೆ. ವಿಶ್ವ ಮುಂಚೂಣಿಯಲ್ಲಿ ಭಾರತ ಇಂದು ಉದ್ಯಮಶೀಲ ಹಾಗೂ ಆರ್ಥಿಕ ಮುಂಚೂಣಿಯ ನಾಲ್ಕನೇ ಸ್ಥಾನ ಪಡೆದು ಅಗ್ರ ಪಟ್ಟಿಯಲ್ಲಿದೆ. ವಿಶ್ವ ನಾಯಕತ್ವ ವಹಿಸುವ ಸಾಮರ್ಥ್ಯ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಭಾರತಕ್ಕಿದೆ ಎಂದು ಜಗತ್ತಿನ ಅನೇಕ ರಾಷ್ಟ್ರಗಳು ಮೋದಿ ಅವರಿಗೆ ರತ್ನಗಂಬಳಿ ಹಾಸಿ ಪ್ರಶಂಸಿಸುತ್ತಿವೆ ಎಂದು ಹೇಳಿದ್ದಾರೆ.

ಭಾರತ ಹತ್ತು-ಹಲವು ಸವಾಲುಗಳನ್ನು ಮೆಟ್ಟಿ ಜಾಗತಿಕ ಮುಂಚೂಣಿಯತ್ತ ದಾಪುಗಾಲನ್ನಿಡುತ್ತಿರುವುದನ್ನು ಸಹಿಸಲಾರದ ವಿಕೃತ ಮನೋಭಾವ ನಿಮ್ಮ ಕಾಂಗ್ರೆಸ್ ಪಕ್ಷದ್ದು, ಆದರ ಸಾರಥ್ಯ ವಹಿಸಿರುವ ನಿಮಗೆ ಅದನ್ನು ಪ್ರತಿನಿಧಿಸಿ ಮಾತನಾಡುವ ಅನಿವಾರ್ಯತೆ ಇದೆ. ಆದರೆ ನಿಮ್ಮ ಹಿರಿತನ, ಘನತೆ, ಅನುಭವಗಳನ್ನು ಬಾಲಿಶ ಹಾಗೂ ಅಸೂಯೆ ಹೇಳಿಕೆಗಳು ಕುಗ್ಗಿಸದಿರಲಿ. ಭಾರತದಲ್ಲಿ 2300 ರೂ.ಗೆ ಲಭ್ಯವಾಗುವ ಔಷಧ ಅಮೆರಿಕದಲ್ಲಿ 95,000 ರೂ. ಭರಿಸಬೇಕಾಗುತ್ತದೆ ಎಂಬ ವಾಸ್ತವ ಇತ್ತೀಚಿಗೆ ವರದಿಯಾಗಿದೆ. ಈ ಕಾರಣಕ್ಕಾಗಿ ವಿದೇಶಗಳಿಂದಲೂ ಬಂದು ಭಾರತದಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಉದಾಹರಣೆಗಳು ಸಾಕಷ್ಟಿವೆ ಎಂದು ವಿಜಯೇಂದ್ರ ವಿವರಿಸಿದ್ದಾರೆ.

ಭಾರತದ ಪ್ರತಿ ಪ್ರಜೆಯೂ ಆತ್ಮಗೌರವದಿಂದ ಹಾಗೂ ಸ್ವಾಭಿಮಾನದಿಂದ ಆರೋಗ್ಯ, ಶಿಕ್ಷಣ, ಉದ್ಯೋಗದ ಹಕ್ಕನ್ನು ಪಡೆಯುವ ವ್ಯವಸ್ಥೆ ಇಂದು ದೇಶದ ಮೂಲೆ ಮೂಲೆಗೂ ವಿಸ್ತರಿಸಿದೆ ಎಂದರು.

ವೈದ್ಯೆ ವಿರುದ್ಧ ಎಫ್‌ಐಆರ್‌ಗೆ ತಡೆಗೆ ಹೈ ನಕಾರ

• **ಬೆಂಗಳೂರು:** ಕೆಎಂಎಫ್‌ನ ನಂದಿನಿ ಹಾಲು ಹಾಗೂ ಅದರ ಉತ್ಪನ್ನಗಳ ಸೇವನೆಗೆ ಯೋಗ್ಯವಲ್ಲ ಎಂದು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದ ಆರೋಪ ಎದುರಿಸುತ್ತಿರುವ ನಗರದ ವೈದ್ಯೆ ಡಾ.ಶರಣ್ಯಾ ಪದ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ತಡೆ ನೀಡಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ.

ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಹಾಗೂ 32ನೇ ಎಸಿಜೆಎಂ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣಾ ಪ್ರಕ್ರಿಯೆ ರದ್ದು ಕೋರಿ ಮೂಲತಃ ಕೋಲಾರ ಜಿಲ್ಲೆಯ ಮಾಲೂರಿನ ಡಾ.ಶರಣ್ಯಾ ಪದ್ಮ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.ಅರ್ಜಿದಾರರ ವಿರುದ್ಧ ಎಫ್‌ಐಆರ್‌ಗೆ ತಡೆ ನೀಡಲು ನಿರಾಕರಿಸಿತು.

ಶಿಂಧೆ ಗುಂಪಿಗೆ ಸೇರ್ಪಡೆಯಾದ ಉದ್ಧವ್ ಬಣದ 6 ಸಂಸದರು

ಪುಟ 0➔ ಆ ಸಭೆಗೆ ಕೇವಲ 3 ಸಂಸದರು ಮಾತ್ರ ಹಾಜರಾಗಿದ್ದರು. ಪಕ್ಷಾಂತರಗೊಂಡ ಸಂಸದರನ್ನು ಶಿಂಧೆ ಧುರಂಧರ್ ಎಂದು ಕರೆದಿದ್ದಾರೆ.

ಪಕ್ಷ ಬದಲಿಸಿದ ಸಂಸದರು: ಪಕ್ಷಾಂತರಗೊಂಡ ಲೋಕಸಭಾ ಸದಸ್ಯರೆಂದರೆ ಯವತ್ಮಾಲ್‌ನ ಸಂಜಯ್ ದೇಶ್‌ಮುಖ್, ಪರ್ಭಾನಿಯ ಸಂಜಯ್ ಜಾಧವ್, ಮುಂಬೈ ಈಶಾನ್ಯದ ಸಂಜಯ್ ದಿನಾ ಪಾಟೀಲ್, ಹಿಂಗೋಲಿಯ ನಾಗೇಶ್ ಪಾಟೀಲ್-ಅಷ್ಟಿಕರ್, ಧಾರಾಶಿವ್‌ನ ಓಂಪ್ರಕಾಶ್ ರಾಜೇನಿಂಬಾಳ್ಕರ್ ಮತ್ತು ಶಿರಡಿಯ ಭೌಸಾಹೇಬ್ ವಾಕಚೌರೆ.

ರಾಜಕೀಯ ಪರಿಣಾಮ: ಈ ಪಕ್ಷಾಂತರದಿಂದಾಗಿ ಶಿವಸೇನೆ ಸಂಸದರ ಸಂಖ್ಯೆಯ ಆಧಾರದ ಮೇಲೆ ಮಹಾರಾಷ್ಟ್ರದಲ್ಲಿ 2ನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈ 6 ಸಂಸದರು 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನೆ ಅಭ್ಯರ್ಥಿಗಳ ವಿರುದ್ಧ ಜಯಗಳಿಸಿದ್ದರು. ಆ ಚುನಾವಣೆಯಲ್ಲಿ ಶಿವಸೇನೆ (ಯುಬಿಟಿ) 9 ಸ್ಥಾನಗಳನ್ನು ಗೆದ್ದಿತ್ತು.

ದಿವಂಗತ ಬಾಳಾ ಸಾಹೇಬ್ ಠಾಕ್ರೆ ಬೋಧನೆಗಳನ್ನು ಅನುಸರಿಸುವ ಮೂಲ ಶಿವಸೇನೆಗೆ ಈ ಸದಸ್ಯರು ಸೇರಿದ್ದಾರೆ ಎಂದು ಶಿಂಧೆ ತಿಳಿಸಿದ್ದಾರೆ. ಜೂನ್ 2022ರಲ್ಲಿ ಮಹಾ ವಿಕಾಸ್ ಅಘಾಡಿ ಸರ್ಕಾರ ಪತನಗೊಳಿಸಿದ ತಮ್ಮ ಆರಂಭಿಕ ಬಂಡಾಯದ ನಂತರ, ಈ ಬೆಳವಣಿಗೆಯನ್ನು ಆಪರೇಷನ್ ಟೈಗರ್ ಮತ್ತು ಶಿವಸೇನೆ ವಿಸ್ತರಣೆಯ 2ನೇ ಹಂತ ಎಂದು ಅವರು ಬಣ್ಣಿಸಿದ್ದಾರೆ.

ನೀಟ್ ವಂಚಿತರಾದವರಿಗೆ ಕೈ ನೆರವು

ಪುಟ 0➔ ಕಾಂಗ್ರೆಸ್ ಪಕ್ಷದ ಸಂಕಲ್ಪ ಸಮಾವೇಶ ಕಾರ್ಯಕ್ರಮದಲ್ಲಿ ಟ್ರಾಫಿಕ್ ಜಾಮ್ ಆಗಿದ್ದು ನಿಜ. ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂದು ನಾವು ಭಾನುವಾರ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು. ಸಣ್ಣ ಪುಟ್ಟ ತೊಂದರೆಗಳು ಆಗಿವೆ. ಅವುಗಳನ್ನು ನಾವು ಅಲ್ಲಗಳೆಯುವುದಿಲ್ಲ, ಕಾರ್ಯಕ್ರಮದಿಂದ ತೊಂದರೆ ಅನುಭವಿಸಿರುವ ವಿದ್ಯಾರ್ಥಿಗಳ ಬಗ್ಗೆ ಕೇಳಿದಾಗ, ನಮ್ಮ ತಂಡ ಅವರನ್ನು ಭೇಟಿ ಮಾಡುವ ಪ್ರಯತ್ನ ಮಾಡಲಿದೆ. ಅವರಿಗೆ ಆಗಿರುವ ನಷ್ಟ ಭರಿಸಲು ಸಿದ್ಧರಿದ್ದೇವೆ ಎಂದು ತಿಳಿಸಿದರು.

ಮೈಸೂರಿನಲ್ಲಿ 1400 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಅಲ್ಲಿ ಯಾವ ಕಾರ್ಯಕ್ರಮವಿತ್ತು. ಯಾದಗಿರಿಯಲ್ಲಿ 286, ದಕ್ಷಿಣ ಕನ್ನಡ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇಲ್ಲೆಲ್ಲಾ ಯಾವ ಕಾರ್ಯಕ್ರಮ ನಡೆದಿತ್ತು? ಕೆಲವು ವಿದ್ಯಾರ್ಥಿಗಳು ಮಾಧ್ಯಮಗಳಿಗೆ ನೀಡಿರುವ ಸಂದರ್ಶನದಲ್ಲಿ ಪರೀಕ್ಷೆ ಬರೆದಿರುವುದಾಗಿಯೂ ಹೇಳಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ರಾಜಕೀಯಕ್ಕೆ ಹೆಚ್ಚು ಆದ್ಯತೆ

ಪುಟ 0➔ ಇದು ಕಾಂಗ್ರೆಸ್‌ಗೆ ವಿದ್ಯಾರ್ಥಿಗಳ ಹಿತಾಸಕ್ತಿಗಳಿಗಿಂತ ತನ್ನ ರಾಜಕಾರಣವೇ ಹೆಚ್ಚು ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದರು. ಅವರಿಗೆ ಯುವಕರ ಬಗ್ಗೆ ನಿಜವಾದ ಕಾಳಜಿಯಿಲ್ಲ, ಶೈಕ್ಷಣಿಕ ಸಮಸ್ಯೆಗಳನ್ನು ರಾಜಕೀಯ ಪ್ರದರ್ಶನವನ್ನಾಗಿ ಮಾಡುವುದು ಅವರ ಏಕೈಕ ಆಸಕ್ತಿಯಾಗಿದೆ ಎಂದು ಕಿಡಿಕಾರಿದರು.

ಮೂವರ ಆತ್ಮಹತ್ಯೆ: ದೂರು

• **ಮೈಸೂರು:** ದಾಂಪತ್ಯ ಜೀವನಕ್ಕೆ ಕಾಲಿಡಬೇಕಿದ್ದ ಯುವತಿ ಮತ್ತು ಹೆತ್ತವರು ಆತ್ಮಹತ್ಯೆಗೆ ಶರಣಾಗಿರುವ ಘೋರ ಘಟನೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಡೆತ್‌ನೋಟ್ ಬರೆದಿಟ್ಟು ಸಾವಿಗೆ ಶರಣಾಗಿರುವ ಯುವತಿಯನ್ನು ರಕ್ಷಿತಾ(21) ಹಾಗೂ ಆಕೆಯ ತಂದೆ ಶಿವಣ್ಣ(54), ತಾಯಿ ನಾಗರತ್ನ(44) ಎಂದು ಗುರುತಿಸಲಾಗಿದೆ. ಈ ಮೂವರ ಸಾವಿಗೂ ಉಲ್ಲಾಸ್ ಗೌಡ ಕಾರಣನೆಂದು ಡೆತ್ ನೋಟ್‌ನಲ್ಲಿ ಬರೆದಿಟ್ಟಿದ್ದಾರೆ. ಕೆಂಪಯ್ಯನಹುಂಡಿ ಗ್ರಾಮದ ಯುವಕ ಉಲ್ಲಾಸ್ ಗೌಡ ಎಂಬಾತ ಮಾನಸಿಕವಾಗಿ ಈ ಕುಟುಂಬಕ್ಕೆ ಕಿರುಕುಳ ನೀಡುತ್ತಿದ್ದ ಆರೋಪಿ. ಎರಡು ದಿನಗಳಲ್ಲಿ ಯುವತಿಯ ಮದುವೆಗೆ ಸಕಲ ಸಿದ್ಧತೆ ನಡೆದಿತ್ತು. ಈ ನಡುವೆ ವಧು ರಕ್ಷಿತಾಳನ್ನು ಗ್ರಾಮದ ಉಲ್ಲಾಸ್ ಗೌಡ ಪ್ರೀತಿಸಿದ್ದು, ಮದುವೆ ಆಗುತ್ತೇನೆ ಎಂದು ಕುಟುಂಬದವರಿಗೆ ಹೇಳಿದ್ದ. ಆದರೆ ಆತನ ಪ್ರಸ್ತಾವವನ್ನು ರಕ್ಷಿತಾ, ಮತ್ತು ಆಕೆಯ ಅಪ್ಪ -ಅಮ್ಮ ವಿರೋಧಿಸಿದ್ದರು. ಅಲ್ಲದೆ, ರಕ್ಷಿತಾಳಿಗೆ ಬೇರೆ ಯುವಕನೊಂದಿಗೆ ಮದುವೆ ಮಾಡಲು ನಿಶ್ಚಿತಾರ್ಥ ಸಹ ಮಾಡಿದ್ದರು. ಜೂನ್ 24ರಂದು ಮದುವೆ ನಡೆಸಲು ನಿಶ್ಚಯಿಸಿ, ಸಕಲ ತಯಾರಿ ಮಾಡಿಕೊಂಡಿದ್ದರು.

ವರನಿಗೆ ಮೆಸ್ಸೇಜ್ ಮಾಡಿದ್ದ ಆರೋಪಿ: ಈ ಮಧ್ಯೆ ಉಲ್ಲಾಸ್‌ಗೌಡ ಮದುವೆ ನಿಶ್ಚಯವಾಗಿದ್ದ ಯುವತಿ ರಕ್ಷಿತಾಳಿಗೆ ಯುವಕ ಕಿರುಕುಳ ನೀಡುತ್ತಿದ್ದ. ರಕ್ಷಿತಾ ಜತೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ಯುವಕನಿಗೆ ಮೆಸೇಜ್ ಮಾಡಿದ್ದ, ಅಲ್ಲದೆ ಈ ಮದುವೆ ನಿಲ್ಲಿಸುವುದಾಗಿ ಬೆದರಿಕೆ ಹಾಕಿದ್ದ ಎನ್ನಲಾಗಿದೆ.

ಮರು ಸಿಂಚನ ಮತ್ತೆ ಚುರುಕು

ಪುಟ 0➔ ಮರು ಸಿಂಚನ ಕಾರ್ಯಕ್ರಮವನ್ನು ಮೊದಲ ಬಾರಿಗೆ 2023-24ನೇ ಶೈಕ್ಷಣಿಕ ವರ್ಷದಲ್ಲಿ ಪರಿಚಯಿಸಲಾಗಿತ್ತು. ನಂತರ 2025-26ನೇ ಸಾಲಿನಲ್ಲೂ ಯೋಜನೆ ವಿಸ್ತರಿಸಿ ಅನುಷ್ಠಾನಗೊಳಿಸಲಾಗಿತ್ತು. ಆದರೆ ಚಾಟಿಗಾತಿ ಕಾರ್ಯ, ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿನ ವ್ಯತ್ಯಯ, ದಸರಾ ರಜೆ ವಿಸ್ತರಣೆ ಸೇರಿದಂತೆ ವಿವಿಧ ಕಾರಣಗಳಿಂದ ಯೋಜನೆಯ ಅನುಷ್ಠಾನ ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಇಲಾಖೆ ತೀರ್ಮಾನಿಸಿದ್ದು, ಪೂರ್ವ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ.

27 ಶೈಕ್ಷಣಿಕ ಜಿಲ್ಲೆಗಳಲ್ಲಿ ಅನುಷ್ಠಾನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿರಂತರವಾಗಿ ಉತ್ತಮ ಫಲಿತಾಂಶ ದಾಖಲಿಸುತ್ತಿರುವ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಶೈಕ್ಷಣಿಕ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ 27 ಶೈಕ್ಷಣಿಕ ಜಿಲ್ಲೆಗಳಲ್ಲಿ ಮರು ಸಿಂಚನ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ನಿಗದಿತ ಕಲಿಕಾ ಫಲಿತಾಂಶ ಸಾಧಿಸಲು ವಿಫಲವಾದ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ವಿಷಯವಾರು ಹೆಚ್ಚುವರಿ ಬೋಧನೆ ನೀಡುವ ಮೂಲಕ ಕಲಿಕಾ ಅಂತರವನ್ನು ಕಡಿಮೆ ಮಾಡಲು ಇಲಾಖೆ ಯೋಜಿಸಿದೆ.

3.83 ಲಕ್ಷ ವಿದ್ಯಾರ್ಥಿಗೆ ಲಾಭ

ಪುಟ 0➔ ಪ್ರತಿ ವಿಷಯಕ್ಕೆ ಕನಿಷ್ಠ 50 ಗಂಟೆಗಳ ಹೆಚ್ಚುವರಿ ಬೋಧನೆ ನಡೆಸಲಾಗುವುದು. ಮರು ಸಿಂಚನ ಯೋಜನೆ ಅಡಿಯಲ್ಲಿ ಒಟ್ಟು 3,83,119 ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದು, ಅವರಲ್ಲಿ 6ನೇ ತರಗತಿಯ 95,513 ವಿದ್ಯಾರ್ಥಿಗಳು, 7ನೇ ತರಗತಿಯ 95,894 ವಿದ್ಯಾರ್ಥಿಗಳು, 8ನೇ ತರಗತಿಯ 76,300 ವಿದ್ಯಾರ್ಥಿಗಳು, 9ನೇ ತರಗತಿಯ 61,229 ವಿದ್ಯಾರ್ಥಿಗಳು ಹಾಗೂ 10ನೇ ತರಗತಿಯ 54,183 ವಿದ್ಯಾರ್ಥಿಗಳು ಹೀಗೆ ಐದು ತರಗತಿಗಳ ವಿದ್ಯಾರ್ಥಿಗಳಿಗೆ ವಿಷಯವಾರು ಕಲಿಕಾ ಬಲವರ್ಧನೆ ನೀಡಲಾಗುತ್ತದೆ.

20,614 ಶಾಲೆಗಳಲ್ಲಿ ಮರು ಸಿಂಚನ: ರಾಜ್ಯದ 155 ಶೈಕ್ಷಣಿಕ ಬ್ಲಾಕ್‌ಗಳ ವ್ಯಾಪ್ತಿಯ 16,536 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 4,078 ಸರ್ಕಾರಿ ಪ್ರೌಢಶಾಲೆಗಳು ಸೇರಿದಂತೆ ಒಟ್ಟು 20,614 ಶಾಲೆಗಳಲ್ಲಿ ಮರು ಸಿಂಚನ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ. ಅಭ್ಯಾಸ ಪುಸ್ತಕಗಳ ಮುದ್ರಣ ಮತ್ತು ವಿತರಣೆಗೆ 6.21 ಕೋಟಿ ರೂ.ಗೂ ಅಧಿಕ ಅನುದಾನವನ್ನು ರಾಜ್ಯ ಸರ್ಕಾರ ಮೀಸಲಿಟ್ಟಿದೆ.

ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರದ ಸಿದ್ಧತೆ

ಪುಟ 0➔ **ಹೆಚ್ಚಲಿದೆ ನಿರ್ಬಂಧ:** ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದ ಬಳಿಕ ಹೊಸ ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆ ಯೋಜನೆಗಳಿಗೆ ಅವಕಾಶ ಇರುವುದಿಲ್ಲ, ಹೊಸ ಉಷ್ಣ ವಿದ್ಯುತ್ ಸ್ಥಾವರಗಳು, ಅತ್ಯಧಿಕ ಮಾಲಿನ್ಯ ಉಂಟುಮಾಡುವ ಕೈಗಾರಿಕೆಗಳು ಹಾಗೂ ಬೃಹತ್ ಕಟ್ಟಡ ಮತ್ತು ಪಟ್ಟಣ ನಿರ್ಮಾಣ ಯೋಜನೆಗಳಿಗೂ ನಿಷೇಧ ಅಥವಾ ಕಠಿಣ ನಿರ್ಬಂಧ ಎದುರಾಗಲಿದೆ. 20 ಸಾವಿರ ಚದರ ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ನಿರ್ಮಾಣ ಪ್ರದೇಶ ಹೊಂದಿರುವ ಹೊಸ ಕಟ್ಟಡ ಯೋಜನೆಗಳು ಮತ್ತು ವಿಸ್ತರಣಾ ಕಾಮಗಾರಿಗಳ ಮೇಲೂ ನಿಯಂತ್ರಣ ವಿಧಿಸುವ ಪ್ರಸ್ತಾವವಿದೆ. ಅಂತಿಮ ಅಧಿಸೂಚನೆಯು ಪರಿಸರ ಸಂರಕ್ಷಣಾ ಕಾಯ್ದೆಯಲ್ಲಿ ಪಶ್ಚಿಮಘಟ್ಟದ ರಕ್ಷಣೆಗೆ ಹೆಚ್ಚಿನ ಕಾನೂನು ಬಲ ಒದಗಿಸಲಿದೆ.

ಮಮತಾಗೆ ಕೊಕ್

ಪುಟ 0➔ ಸೋಮವಾರ ಸಂಜೆ 4 ಗಂಟೆ ಸುಮಾರಿಗೆ ಅಖಿಲ ಭಾರತ ತೃಣಮೂಲ ಕಾಂಗ್ರೆಸ್‌ನ ವಿಶೇಷ ಅಧಿವೇಶನ ಹೆಸರಿನಲ್ಲಿ ಸಭೆ ನಡೆಯಿತು. ಕೋಲ್ಕತ್ತಾ ಮಹಾನಗರ ಪಾಲಿಕೆ ಸೇರಿದಂತೆ ಬಿಧಾನನಗರ, ಉತ್ತರಪಾರಾ, ಶ್ರೀರಾಮಪುರ ಮತ್ತು ಡಮ್ಡಮ್ ನಗರ ಸ್ಥಳೀಯ ಸಂಸ್ಥೆಗಳ ಸುಮಾರು 40 ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಇದು ಅಖಿಲ ಭಾರತ ತೃಣಮೂಲ ಕಾಂಗ್ರೆಸ್‌ನ ವಿಶೇಷ ಅಧಿವೇಶನ. ಸಭೆಯಲ್ಲಿ ಹತ್ತು ಸದಸ್ಯರ ಸಮಿತಿ ರಚಿಸಲಾಗಿದೆ ಎಂದು ಮಾಜಿ ತೃಣಮೂಲ ಶಾಸಕ ದೇಬಾಶಿಶ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ರತ್ನಬ್ರತ ಬ್ಯಾನರ್ಜಿ ಅವರೊಂದಿಗೆ ಸಂದೀಪನ್ ಸಾಹಾ ಹಾಗೂ ಮಮತಾ ಬ್ಯಾನರ್ಜಿ ಅವರ ಆಪ್ತರಾಗಿದ್ದ ಕೋಲ್ಕತಾದ ಮಾಜಿ ಮೇಯರ್ ಫಿರ್ಹಾದ್ ಹಕೀಂ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು ಎನ್ನಲಾಗಿದೆ. ಅರೂಪ್ ರಾಯ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಹತ್ತು ಸದಸ್ಯರ ಸಮಿತಿಯ ಇತರರಿಗೆ ವಿವಿಧ ಜವಾಬ್ದಾರಿಗಳನ್ನು ನೀಡಲಾಗಿದೆ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಹಳೆಯ ತೃಣಮೂಲ ಅಥವಾ ಹೊಸ ತೃಣಮೂಲ ಎಂಬುದಿಲ್ಲ, ನಾವೇ ತೃಣಮೂಲ ಕಾಂಗ್ರೆಸ್ ಎಂದು ಅವರು ಪ್ರತಿಪಾದಿಸಿದ್ದಾರೆ. ಸಭೆಯಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆರವುಗೊಳಿಸುವ ನಿರ್ಣಯವನ್ನು ಅಂಗೀಕರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಗ್ನಿ ಅನಾಹುತಕ್ಕೆ 15 ಜನ ಬಲಿ

ಪುಟ 0➔ ಪಕ್ಕದ ಕಟ್ಟಡದ ಮೂಲಕ ಗೋಡೆ ಒಡೆದು ಒಳ ಪ್ರವೇಶಿಸಿ ಸಿಲುಕಿದ್ದವರನ್ನು ರಕ್ಷಿಸಲು ಕಾರ್ಯಾಚರಣೆ ನಡೆಸಲಾಯಿತು. ಅವಘಡದ ಬಳಿಕ ಒಟ್ಟು 22 ಮಂದಿಯನ್ನು ಲಖನೌನ ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯದ ಟ್ರಾಮಾ ಕೇಂದ್ರಕ್ಕೆ ದಾಖಲಿಸಲಾಯಿತು. ಅವರಲ್ಲಿ 15



ಮಂದಿಯನ್ನು ವೈದ್ಯರು ಮೃತರೆಂದು ಘೋಷಿಸಿದ್ದು, ಏಳು ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ. ಕಟ್ಟಡದಿಂದ ಜಿಗಿದ ಪರಿಣಾಮ ಇಬ್ಬರು ಮಕ್ಕಳಿಗೆ ಗಾಯಗಳಾಗಿದ್ದು, ಚಿಕಿತ್ಸೆ ಮುಂದುವರಿದಿದೆ.

ತನಿಖೆಗೆ ಆದೇಶ: ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಘಟನೆಯ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ, ಅಗ್ನಿ ಸುರಕ್ಷತಾ ನಿಯಮಗಳ ಉಲ್ಲಂಘನೆ ನಡೆದಿದೆಯೇ ಎಂಬುದನ್ನು ತನಿಖೆ ಮಾಡಲಾಗುತ್ತಿದೆ.

ಸಂತಾಪ, ಪರಿಹಾರ ಘೋಷಣೆ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಲಿಗಢ್ ಕಾರ್ಯಕ್ರಮ ಮೊಟಕುಗೊಳಿಸಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪ್ರಧಾನಿ , ರಾಷ್ಟ್ರಪತಿ , ಉಪರಾಷ್ಟ್ರಪತಿ ಸೇರಿದಂತೆ ಹಲವು ನಾಯಕರು ಸಂತಾಪ ಸೂಚಿಸಿದ್ದಾರೆ. ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಿಸಲಾಗಿದೆ.

ಸಂಘದ ನಿತ್ಯಶಾಖೆಗೆ ಬಂದರೆ ಉತ್ತರ ಸಿಗುವುದು

• **ಶಿವಮೊಗ್ಗ:** ರಾಷ್ಟ್ರೀಯ ಸ್ವಯಂಸೇವಕ ಸಂಘ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತದೆ. ಸಂಘದಲ್ಲಿ ಪ್ರಶ್ನೋತ್ತರ ಎಂಬುದು ಅವಿಭಾಜ್ಯ ಅಂಗ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಹೇಳಿದರು.



ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಹೇಳಿಕೆ

ನಗರದ ಖಾಸಗಿ ಹೋಟೆಲ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿ ವರ್ಷ ನಿಮಿತ್ತ ಆಯೋಜಿಸಿದ್ದ ಪ್ರಮುಖ ನಾಗರಿಕರ ಗೋಷ್ಠಿಯ ಸಂವಾದದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಸಂಘದ ನಿತ್ಯಶಾಖೆಗೆ ಬಂದರೆ ಉತ್ತರ ಎಂಬುದು ದೊರಕುತ್ತದೆ. ಮಾಧ್ಯಮದ ಬಳಿ ಉತ್ತರ ಸಿಗುವುದಿಲ್ಲ ಎಂದರು.

ಸಂಘ ಸಂವಿಧಾನದತ್ತ, ಪಾರದರ್ಶಕ: ಬ್ರಿಟೀಷರ ಕಾಲದಲ್ಲಿ ಸಂಘದ ನೊಂದಣಿ ಚರ್ಚೆ ನಡೆದಿಲ್ಲ. 1947ರಲ್ಲಿ ಸ್ವಾತಂತ್ರ್ಯ ಬಂದು 1950ರಲ್ಲಿ ಗಣರಾಜ್ಯ ರೂಪುಗೊಂಡು ನಮ್ಮದೇ ಸಂವಿಧಾನ ಅಸ್ತಿತ್ವಕ್ಕೆ ಬಂದಿತು. ಸಂವಿಧಾನದ ವಿಧಿ 19 ಸ್ವಾತಂತ್ರ್ಯದ ಬಗ್ಗೆ ತಿಳಿಸುತ್ತದೆ. ಅದರ ಪರಿಚ್ಛೇದ 19(1)(ಎ) ಅಭಿವ್ಯಕ್ತಿ ಸ್ವಾತಂತ್ರ್ಯ, (ಬಿ) ಒಟ್ಟುಸೇರುವುದು, (ಸಿ) ಒಕ್ಕೂಟ ರಚನೆಯ ಬಗ್ಗೆ ತಿಳಿಸುತ್ತದೆ. 19(1) (ಸಿ) ಒಕ್ಕೂಟ ರಚಿಸುವುದು ಎಂದು ತಿಳಿಸಿದೆ. ಅದಕ್ಕೆ ನೊಂದಣಿ ಕಡ್ಡಾಯವೆಂದಿಲ್ಲ, ಅದರ ಆಧಾರದಲ್ಲಿ ಸಂಘ ನಡೆದುಕೊಂಡು ಬಂದಿದೆ ಎಂದು ಪದ್ಮಾರ್ ಸ್ಪಷ್ಟ ಮಾಹಿತಿ ನೀಡಿದರು.

ಚೆಕ್ ಹಸ್ತಾಂತರ...



ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ 2024-25ನೇ ಸಾಲಿನ ನಿವ್ವಳ ಲಾಭದಲ್ಲಿ 143.12 ಕೋಟಿ ರೂ.ಗಳ ಲಾಭಾಂಶ ಹಾಗೂ ಸಂಸ್ಥೆಯ ವತಿಯಿಂದ 3 ಕೋಟಿ ರೂ.ಗಳ ಚೆಕ್ ಅನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗಾಗಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸೋಮವಾರ ಹಸ್ತಾಂತರಿಸಿದರು. ಈ ವೇಳೆ ನಿಗಮದ ಎಂಡಿ ಖುಷ್ಬೂ ಗೋಯೆಲ್ ಇದ್ದರು.

ಧರ್ಮಸ್ಥಳದಲ್ಲಿ ಶಾಸಕರ ಆಣೆ ಪ್ರಮಾಣ ಸಮಂಜಸವಲ್ಲ: ನಳಿನ್

• **ಮಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆಗಿರುವುದು ಸರಿಯಲ್ಲ. ಈ ಬಗ್ಗೆ ತನಿಖೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಅಡ್ಡ ಮತದಾನದ ಪತ್ತೆಗೆ ಧರ್ಮಸ್ಥಳದಲ್ಲಿ ಶಾಸಕರ ಆಣೆ ಪ್ರಮಾಣ ವಿಚಾರಕ್ಕೆ ಸಂಬಂಧಿಸಿ ರಾಜಕಾರಣದಲ್ಲಿ ದೇವರ ಹೆಸರು ತರುವುದು, ಪ್ರಮಾಣ ಮಾಡುವುದು ಸಮಂಜಸವಲ್ಲ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು ಹೇಳಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಟಿಕೆಟ್ ನೀಡಿ ಗೆಲ್ಲಿಸಿರುವ ಪಕ್ಷಕ್ಕೆ ನಿಷ್ಠೆಯನ್ನು ತೋರಬೇಕಾದ ಶಾಸಕರು ಅಡ್ಡಮತದಾನ ಮಾಡಿರುವುದು ಸರಿಯಲ್ಲ. ಈ ಬಗ್ಗೆ ನೋವಿನಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 'ಧರ್ಮಸ್ಥಳದಲ್ಲಿ ಶಾಸಕರನ್ನು ಕರೆಯುತ್ತೇನೆ, ಅಲ್ಲಿ ಬಿಜೆಪಿಯ ಎಲ್ಲಾ ಶಾಸಕರು ಆಣೆ-ಪ್ರಮಾಣ ಮಾಡಬೇಕು' ಎಂದು ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಪಕ್ಷ ನಡೆಯುತ್ತಿರುವುದು ವಿಶ್ವಾಸ ಹಾಗೂ ನಂಬಿಕೆಯ ಮೇಲೆ. ಅವರ ನೋವು ಸಹಜವಾದದ್ದು, ಆದ್ದರಿಂದ ಈ ಬಗ್ಗೆ ಆಂತರಿಕವಾಗಿ ತನಿಖೆ ನಡೆಸುವಂತೆ ನಾನು ವಿನಂತಿ ಮಾಡುತ್ತೇನೆ ಎಂದರು.

ಬಿಜೆಪಿ ಶಾಸಕರಿಂದ ನಡೆದ ಅಡ್ಡಮತದಾನ ವಿಚಾರ ಬಹಿರಂಗಗೊಳ್ಳಬೇಕಾದ ವಿಷಯವಲ್ಲ. ಆಂತರಿಕವಾಗಿ ತನಿಖೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಅಂತಹವರನ್ನು ಹುಡುಕುವ ಶಕ್ತಿ ಬಿಜೆಪಿಗಿದೆ. ಪಕ್ಷಕ್ಕೆ ದ್ರೋಹ ಎಸಗಿದವರನ್ನು ಕಠಿಣವಾದ ಶಿಕ್ಷೆಗೆ ಗುರಿಪಡಿಸುವಲ್ಲಿ ವಿಜಯೇಂದ್ರ ಅವರೊಂದಿಗೆ ನಾನು ಇರುತ್ತೇನೆ. ಈಗಾಗಲೇ ಆಂತರಿಕ ತನಿಖೆಗಾಗಿ ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಆ ತನಿಖೆ ಪೂರ್ಣವಾಗಲಿ. ಆ ಬಳಿಕ ಇಂತಹ ಯೋಚನೆಗಳನ್ನು ಮಾಡಲಿ ಎಂದರು.

ಕಿರುಸುದ್ದಿ

ಪೊಲೀಸ್ ನೇಮಕಾತಿಗೆ ಅರ್ಜಿ

• **ಬೆಂಗಳೂರು :** ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 1,600 ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ ಡಿಎಆರ್) ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಜು.22 ಕೊನೆ ದಿನ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಉಳಿದ ವೃಂದದ 1,421 ಹಾಗೂ ಸ್ಥಳೀಯ ವೃಂದದ 179 ಹುದ್ದೆಗಳಿಗೆ ಪ್ರತ್ಯೇಕವಾದ ಅರ್ಜಿ ಆಹ್ವಾನಿಸಲಾಗಿದೆ. ಸೆ.6ರಂದು ಪ್ರತ್ಯೇಕವಾಗಿಯೇ ಲಿಖಿತ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ದ್ವಿತೀಯ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಋಣಾತ್ಮಕ ಮೌಲ್ಯಮಾಪನ ಇರುತ್ತದೆ. ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಐದನೇ ವೃತ್ತವನ್ನು ಶೇಡ್ ಮಾಡುವುದು ಕಡ್ಡಾಯ. ಇದಕ್ಕೆ ಹೆಚ್ಚುವರಿಯಾಗಿ ಐದು ನಿಮಿಷ ಸಮಯ ನೀಡಲಾಗುತ್ತದೆ. ಒಂದು ವೇಳೆ ಐದನೇ ವೃತ್ತವನ್ನು ಶೇಡ್ ಮಾಡದೇ ಇದ್ದಲ್ಲಿ ಪ್ರತಿ ಪ್ರಶ್ನೆಗೆ 0.25 ಅಂಕ ಕಡಿತಗೊಳಿಸಲಾಗುತ್ತದೆ ಎಂದು ವಿವರಿಸಿದರು.

ಯೋಧರ ಕಲ್ಯಾಣ ನಿಧಿಗೆ ಕರಿಬಸಮ್ಮ ₹10 ಲಕ್ಷ ದೇಣಿಗೆ

• **ದಾವಣಗೆರೆ:** ದೇಶ ಕಾಯುವ ಯೋಧರ ಕಲ್ಯಾಣ ನಿಧಿಗೆ ನಿವೃತ್ತ ಶಿಕ್ಷಕಿ, ದಯಾಮರಣ ಹೋರಾಟಗಾರ್ತಿ ಎಚ್.ಬಿ.ಕರಿಬಸಮ್ಮ 10 ಲಕ್ಷ ರೂ. ದೇಣಿಗೆ ನೀಡಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಧನಸಹಾಯದ ಚೆಕ್ ಅನ್ನು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರಿಗೆ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಕರಿಬಸಮ್ಮ,, ಸುಮಾರು 50 ವರ್ಷಗಳ ಹಿಂದೆ ಕೇವಲ ರೇಡಿಯೋಗಳಷ್ಟೇ ಇದ್ದ ಕಾಲದಲ್ಲಿ ಗಡಿಯಲ್ಲಿ ಕಠಿಣ ಪರಿಸ್ಥಿತಿಯಲ್ಲಿ ದೇಶ ಕಾಯುವ ಸೈನಿಕರ ಕಷ್ಟಗಳ ಬಗ್ಗೆ ಕೇಳಿದ್ದೆ. ಅಂದಿನಿಂದಲೇ ದೇಶಕ್ಕಾಗಿ ನಾನೇನಾದರೂ ಸೇವೆ ಮಾಡಬೇಕೆಂಬ ಭಾವನೆ ನನ್ನಲ್ಲಿ ಮೂಡಿತ್ತು. ನಂತರದ ದಿನಗಳಲ್ಲಿ ದಯಾಮರಣದ ಹೋರಾಟಕ್ಕೆ ಧುಮುಕಿದಾಗ ಹಣದ ಅವಶ್ಯಕತೆ ಎದುರಾಯಿತು. ದಾವಣಗೆರೆಯ ಅನೇಕ ಗಣ್ಯರು ಸಹಾಯ ಮಾಡಲು ಮುಂದೆ ಬಂದರೂ, ಯಾರಿಂದಲೂ ನಯಾಪೈಸೆ ಸ್ವೀಕರಿಸದೆ ಮನೆ ಮಾರಿದಾಗ ಬಂದ ಹಣದಲ್ಲಿ 6 ಲಕ್ಷ ರೂ.ಗಳನ್ನು ಪಿಎಫ್ ನಿಧಿಗಾಗಿ ಮೀಸಲಿಟ್ಟಿದ್ದೆ. ಆ ಹಣವನ್ನು ಹಾಗೆಯೇ ಉಳಿಸಿಕೊಂಡು ಮತ್ತು ನನ್ನ ಪಿಂಚಣಿ ಹಣ ಹಾಗೂ ಬಡ್ಡಿಯೂ ಸೇರಿ ಒಟ್ಟು 10 ಲಕ್ಷ ರೂ.ಗಳನ್ನು ಸಂಪೂರ್ಣವಾಗಿ ದೇಶದ ಸೈನಿಕರ ನಿಧಿಗೆ ನೀಡಲು ನಿರ್ಧರಿಸಿದೆ ಎಂದು ತಿಳಿಸಿದರು.

6 ಜನರ ಹತ್ಯೆ ಪ್ರಕರಣ: ಆರೋಪಿ ಬಂಧನ

• **ವಿಜಯಪುರ:** ಕೊಲೆ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿ, ಬಂಧಿಸಿರುವ ಘಟನೆ ನಗರ ಹೊರವಲಯ ಇಟ್ಟಂಗಿಹಾಳ ಬಳಿ ನಡೆದಿದೆ. ಚಡಚಣ ತಾಲೂಕಿನ ಗೋವಿಂದಪುರದಲ್ಲಿ 6 ಜನರ ಹತ್ಯಾಕಾಂಡ ಪ್ರಕರಣದ ಮತ್ತೊಬ್ಬ ಮುಖ್ಯ ಆರೋಪಿ ಮಹೇಶ್ ತಳವಾರ್ ಈತನನ್ನು ಬಂಧಿಸಲು ಹೋದಾಗ, ಆರೋಪಿ ಮಹೇಶ ಪೊಲೀಸರ ಮೇಲೆ ಹಲ್ಲೆ ಮಾಡಿದ್ದಾನೆ. ಆಗ ಪೊಲೀಸರು ಎರಡು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಕೆ ನೀಡಿದ್ದಾರೆ. ಆದರೂ ಆರೋಪಿ ಓಡಿ ಹೋಗಲು ಯತ್ನಿಸಿದಾಗ ಕಾಲಿಗೆ ಗುಂಡು ಹಾರಿಸಿ ಮಹೇಶನ ಬಂಧನ ಮಾಡಿದ್ದಾರೆ.

ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ

ಪ್ರತಿಭಾವಂತರಿಗೆ ಅವಕಾಶ

• **ಬೆಂಗಳೂರು:** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಸ್ಕೌಟ್ ಕಾರ್ಯಕ್ರಮವನ್ನು 3 ವರ್ಷಗಳಿಗೆ ಸೀಮಿತಗೊಳಿಸದೇ, ಇದನ್ನು ಹೆಚ್ಚಿನ ಅವಧಿಗೆ ವಿಸ್ತರಿಸಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಸಲಹೆ ನೀಡಿದರು.



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಬ್ರಿಟಿಷ್ ಕೌನ್ಸಿಲ್ ಸಹಯೋಗದೊಂದಿಗೆ ಅತ್ಯುತ್ತಮ ಪ್ರತಿಭಾವಂತ ಪದವಿಪೂರ್ವ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ SCOUT-2.0 ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡಿ ಮಾತನಾಡಿದರು.

ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಭೇಟಿ ಮಾಡಿರುವುದಕ್ಕೆ ಸಂತೋಷವಾಗಿದೆ. ಕರ್ನಾಟಕ ಎಂದರೆ ಬೆಂಗಳೂರು ಮಾತ್ರವಲ್ಲ, ಚಾಮರಾಜನಗರದಿಂದ ಬೀದರ್‌ವರೆಗೆ ಎಲ್ಲಾ ಗ್ರಾಮೀಣ ಪ್ರದೇಶದವರೆಗೆ ಎಲ್ಲಾ ಭಾಗದ ವಿದ್ಯಾರ್ಥಿಗಳು ಇದ್ದಾರೆ. ಎಲ್ಲಾ ವಿವಿಗಳು ಈ ಜವಾಬ್ದಾರಿ ವಹಿಸಿಕೊಂಡಿರುವುದು ಸಂತೋಷದ ವಿಚಾರ. ಪ್ರಟೀಷರು ಇಲ್ಲಿ ಆಳ್ವಿಕೆ ಮಾಡಿದ್ದರೂ ಅವರೊಂದಿಗೆ ಈ ಸಹಯೋಗ ಹಳೆಯದಾಗಿದೆ ಎಂದರು. ಜ್ಞಾನಗಳು, ಆಲೋಚನೆಗಳ ವಿನಿಮಯ ಮುಂದುವರಿಸುತ್ತಿದ್ದೇವೆ. ಈ ಕಾರ್ಯಕ್ರಮದ ಮೂಲಕ ಕರ್ನಾಟಕ ಸರ್ಕಾರದ ಜೊತೆಗೆ ಕೈಜೋಡಿಸಿರುವ ಬ್ರಿಟಿಷ್ ಕೌನ್ಸಿಲ್‌ಗೆ ಧನ್ಯವಾದ ತಿಳಿಸುತ್ತೇನೆ. ನಾನು ಅಯ್ಯೊಂದಲ್ಲಿ ಶಿಕ್ಷಣವಿಲ್ಲ. ಶಿಕ್ಷಣ ಎಲ್ಲರಿಗೂ ಅತಿಮುಖ್ಯವಾದುದು. ಈ ವಿದ್ಯಾರ್ಥಿಗಳು ನಮ್ಮ ರಾಯಭಾರಿಗಳು. ನಾಯಕರುಗಳನ್ನು ತಯಾರು ಮಾಡುವವನೇ ನಿಜವಾದ ನಾಯಕ. ಇಲ್ಲಿರುವ ವಿದ್ಯಾರ್ಥಿಗಳು ನಾಯಕರುಗಳೇ. ನೀವೆಲ್ಲರೂ ಸರಿಯಾದ ಹಾದಿಯಲ್ಲಿದ್ದೀರಿ. ನೀವು ಕರ್ನಾಟಕದ ಪ್ರತಿನಿಧಿಯಾಗಿದ್ದು, ನಿಮ್ಮ ಭವಿಷ್ಯ ಬದಲಿಸಿಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದರು.

ಕರ್ನಾಟಕ ಹಾಗೂ ಬೆಂಗಳೂರು ಪ್ರತಿಭಾನ್ವಿತರ ಕೇಂದ್ರ: ಕರ್ನಾಟಕ ಹಾಗೂ ಬೆಂಗಳೂರು ಪ್ರತಿಭಾನ್ವಿತರ ಕೇಂದ್ರ. ಇಡೀ ವಿಶ್ವ ನಮ್ಮ ಕಡೆ ನೋಡುತ್ತಿದೆ. ಕರ್ನಾಟಕದ ಮೂಲಕ ಭಾರತವನ್ನು ನೋಡಲಾಗುತ್ತಿದೆ. ನೀವು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಎಂದು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಕಾಲದಲ್ಲಿ ನಾವು ಕಷ್ಟಪಟ್ಟು ಓದಬೇಕಿತ್ತು. ಈಗ ಎಲ್ಲಾ ಮಾಹಿತಿ ನಿಮ್ಮ ಬೆರಳತುದಿಯಲ್ಲಿವೆ. ಈಗ ಶಿಕ್ಷಕರು ವಿದ್ಯಾರ್ಥಿಗಳಿಂದಲೇ ಪಾಠ ಮಾಡಿಸುವ ಮಟ್ಟಿಗೆ ಕಾಲ ಬದಲಾವಣೆಯಾಗಿದೆ. ಪ್ರತಿಯೊಬ್ಬರು ಸಮರ್ಥರು. ನೀವೆಲ್ಲರೂ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡುತ್ತಿದ್ದೀರಿ. ಈ ಸ್ಕೌಟ್ ಕಾರ್ಯಕ್ರಮದಲ್ಲಿ ನಿಮ್ಮ ಆಲೋಚನೆ ದೂರದೃಷ್ಟಿಯಾಗಿರಬೇಕು. ನಿಮ್ಮ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ ಎಂದು ತಿಳಿಸಿದರು. ವಿವಿಗಳ ಉಪಕುಲಪತಿಗಳು ಇನ್ನಷ್ಟು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ವಿದ್ಯಾರ್ಥಿಗಳ ಪ್ರತಿಭೆಗೆ ಅನುಗುಣವಾಗಿ ಅವರನ್ನು ಗುರುತಿಸಿ, ಅವರಿಗೆ ಅವಕಾಶ ಕಲ್ಪಿಸಬೇಕು. ಕಳೆದ ವರ್ಷ ಗ್ರಾಮೀಣ ಭಾಗದ ಮಕ್ಕಳು ಉತ್ತಮ ಸಾಧನೆ ಮಾಡಿದ್ದನ್ನು ನೋಡಿದ್ದೇವೆ ಎಂದು ಹೇಳಿದರು.

ಉದ್ಯೋಗಿಗಳಾಗಬೇಡಿ, ಉದ್ಯೋಗದಾತರಾಗಿ: ಸಿಎಂ ಕಿವಿಮಾತು

ಇದು ಕೇವಲ ಪದವಿ ಪಡೆಯುವ ಕಾರ್ಯಕ್ರಮವಲ್ಲ, ನೀವು ಕನಸು ಕಾಣಬೇಕು, ಆ ಕನಸು ನನಸಾಗಿಸಿಕೊಳ್ಳಲು ಹಂಬಲಿಸಬೇಕು. ಅದಕ್ಕಾಗಿ ಬದ್ಧರಾಗಿರಬೇಕು, ಶಿಸ್ತಿನ ಪರಿಶ್ರಮ ಹಾಕಬೇಕು. ನೀವು ನಿಮ್ಮ ಜೀವನದಲ್ಲಿ ಯಾವುದೇ ಹಂತಕ್ಕೆ ಹೋದರೂ ನಿಮ್ಮ ಮೂಲವನ್ನು ಮಾತ್ರ ಮರೆಯಬಾರದು. ನೀವು ನಿಮ್ಮ ಮೂಲವನ್ನು ಮರೆತರೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ಉದ್ಯೋಗಿಗಳಾಗುವುದಕ್ಕಿಂತ ಉದ್ಯೋಗದಾತರಾಗುವುದು ನಿಮ್ಮ ಗುರಿಯಾಗಲಿ ಎಂದು ಸಲಹೆ ನೀಡಿದರು.

> ನಮ್ಮ ಸರ್ಕಾರ ಹಾಗೂ ವಿವಿಗಳು ಈ ಕಾರ್ಯಕ್ರಮ ವಿಸ್ತರಣೆ ಮಾಡಲು ಸಿದ್ಧವಿದೆ. ನಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಸಿಗಬೇಕು. ಇಲ್ಲಿಂದ ಬ್ರಿಟನ್‌ಗೆ ಹೋಗಿ ಅಲ್ಲೇ ನೆಲೆಸಬೇಡಿ, ಅಲ್ಲಿ ವ್ಯಾಸಂಗ ಮಾಡಿ ಭಾರತಕ್ಕೆ ಮರಳಿ, ಇಲ್ಲಿ ಕೆಲಸ ಮಾಡಿ. ಇಲ್ಲಿಗೆ ಬಂದು ನೀವು ನಿಮ್ಮ ಕ್ಷೇತ್ರದಲ್ಲಿ ಬೆಳೆಯಿರಿ.
> ■ ಡಿ.ಕೆ.ಶಿವಕುಮಾರ್, ಸಿಎಂ

ಸಮಸ್ಯೆಗಳಿಗೆ ತ್ವರಿತ ಸ್ಪಂದಿಸಬೇಕು: ಡಿಸಿಎಂ

ಖಾಲಿ ಹುದ್ದೆ ಭರ್ತಿ, ಬಡ್ತಿ ಪ್ರಕ್ರಿಯೆ ಚುರುಕುಗೊಳಿಸಿ

ಜೇಷ್ಠತಾ ಪಟ್ಟಿ ಶೀಘ್ರ ಪ್ರಕಟಿಸಿ

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ವೇಗಗೊಳಿಸಬೇಕು. ಅಧಿಕಾರಿ ಮತ್ತು ಸಿಬ್ಬಂದಿಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ವಿಳಂಬ ಉಂಟಾಗದಂತೆ, ಜೇಷ್ಠತಾ ಪಟ್ಟಿಯನ್ನು ಶೀಘ್ರ ಪ್ರಕಟಿಸಿ, ನಿಯಮಾನುಸಾರ ಪಾರದರ್ಶಕವಾಗಿ ಬಡ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.



• **ಬೆಂಗಳೂರು :** ಕಂದಾಯ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಸಹಾಯಕ ಆಯುಕ್ತರಿಗೆ (ಎಸಿ) ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಕಂದಾಯ ಇಲಾಖೆಯ ವಿವಿಧ ಯೋಜನೆಗಳು, ಆಡಳಿತಾತ್ಮಕ ಪ್ರಗತಿ ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನದ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಗ್ರ ಪರಿಶೀಲನೆ ನಡೆಸಿದ ಅವರು, ಬಾಕಿ ಉಳಿದಿರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ನಿರ್ದೇಶಿಸಿದರು. ಪ್ರಮುಖವಾಗಿ ಭೂಮಾಪಕರ ಸಮಸ್ಯೆಗಳ ಕುರಿತು ಗಮನ ಹರಿಸಬೇಕು. ಭೂಮಾಪಕರ ಸಭೆಯನ್ನು ಕರೆದು ಅವರ ಅಹವಾಲುಗಳು ಹಾಗೂ ಬೇಡಿಕೆಗಳನ್ನು ಆಲಿಸಬೇಕು. ಭೂಮಾಪಕರ ಸೇವಾ ಹಾಗೂ ವ್ಯಕ್ತಿಪರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಂಡು, ತ್ವರಿತವಾಗಿ ಇತ್ಯರ್ಥಪಡಿಸಬೇಕು ಎಂದು ಸಚಿವರು ಸೂಚಿಸಿದರು.

ಜನರಿಗೆ ಸೇವೆ ನೀಡುವಲ್ಲಿ ವಿಳಂಬ ಬೇಡ: ಇ-ಪೌತಿ ಖಾತೆ ಸೇರಿದಂತೆ ಇಲಾಖೆಯ ಎಲ್ಲಾ ಆನ್‌ಲೈನ್ ಮತ್ತು ಸಾರ್ವಜನಿಕ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ನಾಗರಿಕರು ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಸೇವೆಗಳ ವಿತರಣೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆ ಕಾಪಾಡಬೇಕು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಭೂ ದಾಖಲೆ, ಖಾತೆ ಬದಲಾವಣೆ, ಸರ್ವೇ ಕಾರ್ಯ, ಮ್ಯುಟೇಷನ್ ಹಾಗೂ ಇತರೆ ಕಂದಾಯ ಸೇವೆಗಳ ವಿಲೇವಾರಿಯಲ್ಲಿ ವಿಳಂಬ ಕಡಿಮೆ ಮಾಡುವ ನಿಟ್ಟಿನಲ್ಲಿ ನಿರಂತರ ಮೇಲ್ವಿಚಾರಣೆ ನಡೆಸಬೇಕು.

ಇಲಾಖೆಯ ಎಲ್ಲಾ ಕಾರ್ಯಗಳ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಗುರಿ ಸಾಧನೆಯತ್ತ ಗಮನ ಹರಿಸಬೇಕು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ಆಡಳಿತಾತ್ಮಕ ಕಾರ್ಯಗಳಿಗೆ ಮತ್ತಷ್ಟು ವೇಗ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನೌಕರರಿಗೆ ವೈದ್ಯಕೀಯ ತಪಾಸಣೆ

• **ಬೆಂಗಳೂರು :** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಆರೋಗ್ಯದ ಹಿತದೃಷ್ಟಿಯಿಂದ 40 ವರ್ಷ ಮೀರಿದ ಎಲ್ಲಾ ಸರ್ಕಾರಿ ನೌಕರರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ (ಕೆಎಎಸ್‌ಎಸ್) ಯೋಜನೆಯ ಅಡಿಯಲ್ಲಿ ವಾರ್ಷಿಕ ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಲ್ಲಿ ನೋಂದಾಯಿತರಾಗಿರುವ ನೌಕರರು ಮಾತ್ರ ವರ್ಷಕ್ಕೊಮ್ಮೆ ಈ ಉಚಿತ ತಪಾಸಣೆಗೆ ಅರ್ಹರಾಗಿದ್ದಾರೆ. ಯೋಜನೆಯಿಂದ ಹೊರಗುಳಿದವರಿಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ, ಹಾಗೆಯೇ ಸರ್ಕಾರಿ ನೌಕರರಿಗೆ ಮಾತ್ರ ಉಚಿತ ವೈದ್ಯಕೀಯ ತಪಾಸಣೆ ಇರಲಿದ್ದು, ನೌಕರರ ಕುಟುಂಬದ ಅವಲಂಬಿತ ಸದಸ್ಯರಿಗೆ ಈ ಸೌಲಭ್ಯ ಇರುವುದಿಲ್ಲ. ಸರ್ಕಾರಿ ಆಸ್ಪತ್ರೆಗಳು ಮತ್ತು ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯ ಅಡಿಯಲ್ಲಿ ನೋಂದಾಯಿತವಾಗಿರುವ ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಈ ತಪಾಸಣೆಗಳನ್ನು ಮಾಡಿಸಿಕೊಳ್ಳಬಹುದು. ಸರ್ಕಾರವು ವೈದ್ಯಕೀಯ ತಪಾಸಣೆಗೆ ಪುರುಷ ನೌಕರರಿಗೆ 2 ಸಾವಿರ ರೂ. ಮತ್ತು ಮಹಿಳಾ ನೌಕರರಿಗೆ 2,200 ರೂ. ಸಂಚಿತ ದರಗಳನ್ನು ನಿಗದಿಪಡಿಸಿದೆ. ಈ ತಪಾಸಣೆಯು ಸಾಮಾನ್ಯ ದೈಹಿಕ ಪರೀಕ್ಷೆಗಳು, ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ, ಇಸಿಜಿ, ಎಕ್ಸ್ ರೇ, ಲಿಪಿಡ್ ಪ್ರೊಫೈಲ್ ಮತ್ತು ಲಿವರ್ ಮತ್ತು ಕಿಡ್ನಿ ಕಾರ್ಯನಿರ್ವಹಣೆ ಪರೀಕ್ಷೆ ಸೇರಿದಂತೆ ಅತ್ಯಗತ್ಯ ವೈದ್ಯಕೀಯ ಪರೀಕ್ಷೆಗಳನ್ನು ಒಳಗೊಂಡಿದೆ.

ಆಧುನಿಕ ಜೀವನಶೈಲಿಯ ಒತ್ತಡದಿಂದಾಗಿ ಮಧುಮೇಹ ಮತ್ತು ರಕ್ತದೊತ್ತಡದಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಇದರಿಂದ ಹೃದಯಾಘಾತ ಮತ್ತು ಪಾರ್ಶ್ವವಾಯುವಿನ ರೀತಿಯ ಗಂಭೀರ ಸಮಸ್ಯೆಗಳು ಉಂಟಾಗುತ್ತಿರುವುದನ್ನು ಗಮನಿಸಿ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮುನ್ನೆಚ್ಚರಿಕಾ ಆರೋಗ್ಯ ತಪಾಸಣೆ ಮಾದರಿಯಲ್ಲಿ ಈ ಸೌಲಭ್ಯವನ್ನು ಜಾರಿಗೆ ತಂದಿದೆ. ರಾಜ್ಯದಲ್ಲಿ ಕೆಎಎಸ್‌ಎಸ್ ಯೋಜನೆಗೆ 3,76,955 ನೌಕರರು ಒಳಪಟ್ಟಿದ್ದು, 23,081 ನೌಕರರು ಹೊರಗುಳಿದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರ ನಿರ್ಧಾರ ಬದಲಿಸಲಿ

• **ಶಿವಮೊಗ್ಗ :** ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಧರ್ಮಸ್ಥಳ ಮಂಜುನಾಥನ ಭಕ್ತಿಯನ್ನು ಒರೆಗೆ ಹಚ್ಚುವ ಕೆಲಸ ಬೇಡ. ಈ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷರು ತಮ್ಮ ನಿರ್ಧಾರ ಬದಲಾಯಿಸುವಂತೆ ಮಾಜಿ ಡಿಸಿಎಂ ಹಾಗೂ ರಾಷ್ಟ್ರ ಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಹೇಳಿದರು.



ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸತ್ಯಾಸತ್ಯತೆಯನ್ನು ಪರಿಶೀಲಿಸಲು ಇರುವ ಸ್ಥಳ ದೇವಸ್ಥಾನ. ಅದರಲ್ಲೂ ಧರ್ಮಸ್ಥಳ ಜನರ ನಂಬಿಕೆಯ ಸ್ಥಳವೂ ಆಗಿದೆ. ಹಾಗೆಂದು ಚುನಾವಣೆಯಲ್ಲಿ ನಡೆದ ಭ್ರಷ್ಟಾಚಾರವನ್ನು ಅಂತಹ ಸ್ಥಳಕ್ಕೆ ತೆಗೆದುಕೊಂಡು ಹೋಗುವುದು ಒಳ್ಳೆಯದಲ್ಲವೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರಗೆ ಕಿವಿ ಮಾತು ಹೇಳಿದರು.

ಕಮಿಷನ್ ರಾಜಕಾರಣ ರಾಜ್ಯದಲ್ಲಿ ಹೆಚ್ಚಳ: ಅಶೋಕ


• **ಬೆಂಗಳೂರು:** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಅಭಿವೃದ್ಧಿಗಿಂತ ಕಮಿಷನ್ ರಾಜಕಾರಣವೇ ಹೆಚ್ಚಾಗಿದೆ. ಇದೀಗ ಅದಾನಿ ಯೋಜನೆಗಳ ವಿಷಯದಲ್ಲಿಯೂ ಅನೇಕ ಅನುಮಾನಗಳು ಮೂಡಿವೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು.



ಪದ್ಮನಾಭನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದ ಯೋಜನೆಗಳನ್ನು ಘೋಷಿಸುವ ಕಾಂಗ್ರೆಸ್ ಸರ್ಕಾರ, ವಾಸ್ತವದಲ್ಲಿ ಕಮಿಷನ್ ವಸೂಲಿಗಾಗಿಯೇ ಆಡಳಿತ ನಡೆಸುತ್ತಿದೆ ಎಂಬ ಅನುಮಾನ ಜನರಲ್ಲಿ ಮೂಡಿದೆ. ಅದಾನಿ ಸಂಸ್ಥೆಯ ಯೋಜನೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರು ಚುನಾವಣೆಗೂ ಮುನ್ನ ಒಂದು ಮಾತು ಹೇಳಿ, ಅಧಿಕಾರಕ್ಕೆ ಬಂದ ಬಳಿಕ ಮತ್ತೊಂದು ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದರು. ಭಾನುವಾರ ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಕಾರ್ಯಕ್ರಮದಿಂದಾಗಿ ನಗರದಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗಿ ನೀಟ್ ಪರೀಕ್ಷೆಗೆ ತೆರಳುತ್ತಿದ್ದ ಸಾವಿರಾರು ವಿದ್ಯಾರ್ಥಿಗಳು ಹಾಗೂ ಪೋಷಕರು ಸಂಕಷ್ಟ ಅನುಭವಿಸಿದ್ದಾರೆ ಎಂದರು.

ನೆಕ್ಕಂಟಿ ನಾಗರಾಜ್‌ಗೆ ಹೈ ಎಚ್ಚರಿಕೆ

• **ಬೆಂಗಳೂರು :** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಪ್ರಕರಣದ ಆರೋಪಿ ಮಾಜಿ ಸಚಿವ ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಸಿಬಿಐ ತನಿಖೆಗೆ ಸರಿಯಾಗಿ ಸಹಕರಿಸದಿದ್ದರೆ ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಯಲ್ಲಿ ನೀಡಲಾಗಿರುವ ಮಧ್ಯಂತರ ರಕ್ಷಣೆಯನ್ನು ರದ್ದುಪಡಿಸುವುದಾಗಿ ಹೈಕೋರ್ಟ್ ಎಚ್ಚರಿಸಿದೆ.



ನಿರೀಕ್ಷಣಾ ಜಾಮೀನು ಕೋರಿ ನೆಕ್ಕಂಟಿ ನಾಗರಾಜ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ಮತ್ತು ಮಾಜಿ ಸಚಿವ ಬಿ ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ಸತ್ರ ನ್ಯಾಯಾಲಯ ಜ.14ರಂದು ನೀಡಿರುವ ಜಾಮೀನು ರದ್ದುಗೊಳಿಸಬೇಕು ಎಂದು ಕೋರಿ ಸಿಬಿಐ ಸಲ್ಲಿಸಿರುವ ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಪೀಠದಲ್ಲಿ ಏಕ ವಿಚಾರಣೆ ನಡೆಯಿತು. ಸಿಬಿಐ ಪರ ವಕೀಲ ಪಿ ಪ್ರಸನ್ನ ಕುಮಾರ್ ಅವರು ನೆಕ್ಕಂಟಿ ನಾಗರಾಜ್ ತನಿಖೆಗೆ ಸರಿಯಾಗಿ ಸಹಕರಿಸುತ್ತಿಲ್ಲ, ಆದ್ದರಿಂದ, ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು ನೆಕ್ಕಂಟಿ ನಾಗರಾಜ್ ಜೂ.23ರಂದು ಸಿಬಿಐ ಮುಂದೆ ಹಾಜರಾಗಬೇಕು ಮತ್ತು ಸಿಬಿಐ ಪ್ರಶ್ನೆಗಳಿಗೆ ಉತ್ತರಿಸಬೇಕು. ತನಿಖೆಗೆ ಸರಿಯಾಗಿ ಸಹಕರಿಸದಿದ್ದರೆ ಮಧ್ಯಂತರ ರಕ್ಷಣೆ ರದ್ದುಪಡಿಸಲಾಗುವುದು ಎಂದು ಎಚ್ಚರಿಸಿತು.

ನಾಗೇಂದ್ರ ಅವರ ಅರ್ಜಿಯಲ್ಲಿ ವಾದ ಮಂಡಿಸಿದ ಪ್ರಸನ್ನ ಕುಮಾರ್ ಅವರು ನಿಗಮದ ಬ್ಯಾಂಕ್ ಖಾತೆಯಿಂದ ಮುಂಬೈನ ಇಬ್ಬರು ಮಹಿಳೆಯರಿಗೆ 2.50 ಕೋಟಿ ರೂ. ವರ್ಗಾವಣೆಯಾಗಿದೆ. ಮಹಿಳೆಯರಲ್ಲಿ ಒಬ್ಬರು ತನ್ನನ್ನು ಬಿ.ನಾಗೇಂದ್ರ ಅವರ ಪತ್ನಿ ಎಂದು ಹೇಳಿಕೊಂಡಿದ್ದಾರೆ. ಇದು ಲಭ್ಯವಾಗಿರುವ ದಾಖಲೆಗಳಲ್ಲೂ ಕಂಡುಬಂದಿದೆ. ಆರೋಪಿಗಳ ಮೊಬೈಲ್‌ನಲ್ಲಿ ಕೆಲವು ವಿಡಿಯೋಗಳು ಪತ್ತೆಯಾಗಿವೆ. ಇದರಲ್ಲಿ ಹಣದ ಕಂತೆ ಎಣಿಸುತ್ತಿರುವ ದೃಶ್ಯಗಳಿವೆ. ಅಲ್ಲಿ ನೆಕ್ಕಂಟಿ ನಾಗರಾಜ್ ಮತ್ತಿತರು ಕಂಡು ಬರುತ್ತಾರೆ. ಈ ಬಗ್ಗೆ ಕೇಳಿದರೆ ಆರೋಪಿಗಳು ವಿಚಾರಣೆಯಲ್ಲಿ ಬಾಯಿ ಬಿಡುತ್ತಿಲ್ಲ ಎಂದು ಆಕ್ಷೇಪಿಸಿದರು.

ಈ ಹಿನ್ನೆಲೆಯಲ್ಲಿ ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸಬೇಕಾಗಿದೆ. ಆದ್ದರಿಂದ, ಅವರಿಗೆ ನೀಡಿರುವ ಜಾಮೀನು ರದ್ದುಗೊಳಿಸಬೇಕು ಎಂದು ಪೀಠಕ್ಕೆ ಮನವಿ ಮಾಡಿದರು.

ರೈತರ ಆದಾಯ ವೃದ್ಧಿಗೆ ಸಿಎಸ್‌ಐಆರ್ ಕ್ರಮ | ವಾರಗಳ ಕಾಲ ಉಚಿತ ಆಹಾರ ಸಂಸ್ಕರಣೆ ತರಬೇತಿ

ರೈತರ ಹೊಲದಲ್ಲಿಯೇ ಆಹಾರ ಸಂಸ್ಕರಣೆ ತರಬೇತಿ

• ಅನುಪಾ ನಾಯಕ್

• **ಬೆಂಗಳೂರು:** ರೈತರು ಬೆಳೆದ ಹಣ್ಣು ಅಥವಾ ತರಕಾರಿಗಳನ್ನು ಸಂಸ್ಕರಿಸಿದ ಪದಾರ್ಥಗಳಾಗಿ ಮಾರಾಟ ಮಾಡಿದರೆ ಹೆಚ್ಚಿನ ಲಾಭವನ್ನು ರೈತರು ಪಡೆಯಬಹುದು. ಆದರೆ, ರೈತರಿಗೆ ತಾವು ಬೆಳೆದ ಆಹಾರ ಪದಾರ್ಥವನ್ನು ಯಾವ ರೀತಿ ಸಂಸ್ಕರಿಸಬಹುದು ಎನ್ನುವ ಮಾಹಿತಿಯ ಕೊರತೆ ಇರುತ್ತದೆ. ಇದಕ್ಕೆ ಸಿಎಸ್‌ಐಆರ್-ಸಿಎಫ್‌ಟಿಆರ್‌ಐನ ಎಂಜಿನಿಯರ್‌ಗಳು ಉತ್ತಮ ಪರಿಹಾರವನ್ನು ಕಂಡುಕೊಂಡಿದ್ದಾರೆ.



ದಿಗಂತ ವಿಶೇಷ

> ಒಂದು ಊರಿನಲ್ಲಿ ಸಾಮಾನ್ಯವಾಗಿ ಒಂದೇ ಬೆಳೆಯನ್ನು ಹಲವರು ಬೆಳೆಯುತ್ತಿರುತ್ತಾರೆ. ಹಾಗಾಗಿ ನಾವು ಒಬ್ಬರು ರೈತರು ತಮ್ಮ ಊರು, ಯಾವ ಪದಾರ್ಥವನ್ನು ಹೆಚ್ಚು ಬೆಳೆಯುತ್ತಾರೆ ಎಂದು ಈಮೇಲ್ ಮೂಲಕ ತಿಳಿಸಬೇಕು. ಅನಂತರ ನಾವು ಒಂದು ವಾರಗಳ ಕಾಲ ತರಬೇತಿ ನೀಡುತ್ತೇವೆ. ರೈತರು ಹಣ್ಣು ಅಥವಾ ತರಕಾರಿಗಳಿಗೆ ಮೌಲ್ಯವರ್ಧನೆ ಮಾಡಲು ಆರಂಭಿಸಿದರೆ ಮಾತ್ರ ರೈತರ ಆದಾಯ ಹೆಚ್ಚಾಗಲು ಸಾಧ್ಯವಾಗುತ್ತದೆ.
> ■ ಪುನೀತ್ ಕುಮಾರ್, ಸಿಎಫ್‌ಟಿಆರ್‌ಐ ಎಂಜಿನಿಯರ್

ರೈತರು ಸ್ಥಳೀಯವಾಗಿ ಬೆಳೆಯುವ ಹಣ್ಣುಗಳು ಮತ್ತು ತರಕಾರಿಗಳನ್ನು ಕಚ್ಚಾ ರೂಪದಲ್ಲಿ ಮಾರಾಟ ಮಾಡುವುದರೊಂದಿಗೆ, ಅದರಿಂದ ತಿರುಳು, ರಸಗಳು, ಪಾನೀಯಗಳು, ಪೂರ್ವಸಿದ್ಧ ಉತ್ಪನ್ನಗಳು, ನಿರ್ಜಲೀಕರಣಗೊಂಡ ಉತ್ಪನ್ನಗಳು, ಉಪ್ಪಿನಕಾಯಿ, ಜಾಮ್ ಮುಂತಾದ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಬಹುದು. ಆ ಮೂಲಕ ರೈತರು ಆದಾಯವನ್ನು ವೃದ್ಧಿಸಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಸಿಎಸ್ ಐಆರ್ -ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ ಮೈಸೂರಿನ ಎಂಜಿನಿಯರ್‌ಗಳು ಅಭಿವೃದ್ಧಿಪಡಿಸಿದ ಮೊಬೈಲ್ ಆಹಾರ ಸಂಸ್ಕರಣೆ ಮತ್ತು ಪ್ರದರ್ಶನ ಘಟಕ ಹೊಂದಿದ ಬಸ್‌ನಲ್ಲಿ ರೈತರ ಊರಿಗೆ ಬಂದು ವಿವಿಧ ಆಹಾರ ಪದಾರ್ಥಗಳ ಬಗ್ಗೆ ಉಚಿತವಾಗಿ ತರಬೇತಿ ನೀಡುತ್ತಾರೆ. ಆ ಮೂಲಕ ರೈತರಿಗೆ ಸಂಸ್ಕರಿಸಿದ ಆಹಾರ ತಯಾರಿಸುವ ವಿಧಾನ ಬಗ್ಗೆ ತರಬೇತಿ ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ.

ಬಸ್‌ನಲ್ಲಿರುವ ಯಂತ್ರಗಳು: ಟೊಮೆಟೊ ಸಂಸ್ಕರಣೆಗಾಗಿ ಜಾಕೆಟೆಡ್ ಕೆಟಲ್, ಪಲ್ಪ್ ಫಿಲ್ಲರ್, ಪ್ಯಾಕಿಂಗ್ ಮೆಷಿನ್, ಸೆಂಟ್ರಿಫ್ಯೂಗಲ್ ಮೆಷಿನ್ ಹಾಗೂ ರಾಗಿ ಸಂಸ್ಕರಣೆಗೆ ಡೆಸ್ಟೋನರ್ ಹಾಗೂ ಪಲ್ವರ್ ಇಷ್ಟು ಯಂತ್ರಗಳನ್ನು ಒಂದೇ ಬಸ್‌ನಲ್ಲಿ ನೋಡಬಹುದಾಗಿದೆ. ಇದೇ ರೀತಿ ರೈತರು ಬೆಳೆದ ಇತರ ಬೆಳೆಗೆ ಬೇಕಾಗುವ ಯಂತ್ರವನ್ನು ಬದಲಾಯಿಸುತ್ತಾರೆ.

ಹೇಗೆ ಸಂಪರ್ಕಿಸಬೇಕು?: ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಮೈಸೂರು- ಆಹಾರ ತಂತ್ರಜ್ಞಾನ ಸಂಶೋಧನಾ ವೆಬ್‌ಸೈಟ್ www.cftri.res.in, ಸಂಸ್ಥೆಗೆ ದೂರವಾಣಿ ಸಂಖ್ಯೆ 0821-2514534 ಅಥವಾ ಇ ಮೈಲ್ ಐಡಿ: ttbdatcftridotres-dotin ಸಂದೇಶವನ್ನು ಕಳಿಸಿದರೆ ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಮೈಸೂರಿನ ಎಂಜಿನಿಯರ್‌ಗಳು ರೈತರು ತಿಳಿಸಿದ ಊರಿಗೆ ಬಂದು ಆಹಾರ ಪದಾರ್ಥ ಬಗ್ಗೆ ಉಚಿತವಾಗಿ ತರಬೇತಿಯನ್ನು ನೀಡುತ್ತಾರೆ.

ರೈತರ ಆದಾಯ ವೃದ್ಧಿಗೆ ಕ್ರಮ: ರೈತರ ಆದಾಯ ವೃದ್ಧಿಗಾಗಿ, ರೈತರು ಟೊಮೆಟೊ ಅಥವಾ ಇನ್ನಿತರ ಆಹಾರ ಪದಾರ್ಥಕ್ಕೆ ಮಾರುಕಟ್ಟೆಯಲ್ಲಿ ಅಧಿಕ ಬೆಲೆ ಇದ್ದಾಗ ಕಚ್ಚಾ ರೂಪದಲ್ಲಿ ಮಾರಾಟ ಮಾಡಬಹುದು. ಬೆಲೆ ಕಡಿಮೆ ಇದ್ದರೆ ಅದನ್ನು ಸಂಸ್ಕರಿಸಿ ಮಾರಾಟ ಮಾಡಬಹುದು ಎಂದು ಸಿಎಫ್‌ಟಿಆರ್‌ಐ ಎಂಜಿನಿಯರ್ ಪುನೀತ್ ಕುಮಾರ್ ಹೊಸದಿಗಂತಕ್ಕೆ ಹೇಳಿದರು.

CHANGE OF NAME

I, Smt. N. REKHA, W/o Anilkumar, age 49 years, R/at Chikkapura, Muthugadahalli Post, Mayasandra Hobli, Turuvekere Taluk, Tumkur District-572 221 do hereby declare that both the names i.e. RENUKAMMA N and N REKHA are one and the same and refers to me only, now I have changed my name from RENUKAMMA N to N REKHA, henceforth I shall be known and called as N REKHA for all purposes, vide affidavit dated 18-06-2026, sworn before Advocate and Notary RAJA RAVI CHANDRA .T.T at Turuvekere.

PUBLIC NOTICE

Under the instructions from my client The Branch Manager, M/s ShriramFinance Ltd, Hindupur Branch, Hindupur District, Andhra Pradesh. I issue the following notice to the general public. My clients intends to grant loan to Sri.S.Nagaraju S/o P.R.Shivappa, Aged about 47 Years, R/at Parasuramanahally Village, KasabaHobli, Bagepally Taluk, Chickballapur District, more fully described here under a security by way of Regd. Mortgage, as such if any body have any claims, charges, mortgages, sale agreements, court attachments, court disputes etc., shall be informed to the address mentioned below with in 7 days from the date of Notice other wise, later objections will not be bind on any claims in this regards.

SCHEDULE PROPERTIES

All that piece and parcel of commercial building shop bearing V.P.Katha No. 480/39, Property No. 152800102400120224, measuring East to West 9.144 meters and North to South 12.192meters, of Gantamvaripally Village, Gantamvaripally Grama Panchayath, Bagepally Taluk, bounded on the East by 20 feet Road, West by Property of Aswathappa, North by 20 feet Road, South by Vacant Site.

ADDRESS: C.M.Niranjana Swamy, B.S.c. L. L. M Advocate, 4th Cross, Gowripet, Kolar, Kolar-563101, Mob: 9448402783.

Your's Faithfully,
Advocate: C.M.Niranjana Swamy
Date: 22/06/2026
Place: Kolar.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ನಾಗರತ್ನ, ಕರ್ನಾಟಕ ಹೈಕೋರ್ಟ್‌ನಲ್ಲಿ ಸ್ಪೀಕಿಂಗ್ ಸ್ಪೋಕನ್ ಟು ಎಂಬ ಮಾನ್ಯ ಪ್ರಕ್ರಿಯೆ ಇದೆ. ಇದರ ಅನ್ವಯ ತೀರ್ಪಿನಲ್ಲಿನ ಗೊಂದಲಗಳನ್ನು ಸ್ಪಷ್ಟಪಡಿಸುವುದು, ಲೋಪಗಳನ್ನು ಸರಿಪಡಿಸುವುದು ಅಥವಾ ಅಗತ್ಯ ಅಂಶಗಳನ್ನು ಪರಿಶೀಲಿಸಲು ನ್ಯಾಯಾಲಯಕ್ಕೆ ಅವಕಾಶವಿದೆ ಎಂದು ತಿಳಿಸಿದರು. ಈ ಹಂತದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ಹೇಳಿದ ಪೀಠ, ತುರ್ತು ವಿಚಾರಣೆಯ ಮನವಿಯನ್ನು ನಿರಾಕರಿಸಿತು.

> ▸ ತೀರ್ಪಿನ ಬಳಿಕ ಮತ್ತೆ ಪ್ರಕರಣ ಪಟ್ಟಿ ಮಾಡಿದ್ದಕ್ಕೆ ಅರ್ಜಿದಾರರ ಆಕ್ಷೇಪ


ಮೂರು ಸ್ಥಳಗಳ ಹಕ್ಕು ಪ್ರತಿಪಾದನೆ

ಹನುಮಂತನ ಜನ್ಮಸ್ಥಳದ ಕುರಿತು 2021ರಿಂದ ವಿವಾದ ನಡೆಯುತ್ತಿದೆ. ಆಂಧ್ರಪ್ರದೇಶದ ತಿರುಮಲದಲ್ಲಿರುವ ಅಂಜನಾದ್ರಿಯೇ ಹನುಮನ ಜನ್ಮಸ್ಥಳ ಎಂದು ತಿರುಮಲ ತಿರುಪತಿ ದೇವಸ್ಥಾನ ಪ್ರತಿಪಾದಿಸಿದೆ. ಮತ್ತೊಂದೆಡೆ, ಕರ್ನಾಟಕದ ಹಂಪಿ ಸಮೀಪದ ಕಿಷ್ಕಿಂಧಾ ಪ್ರದೇಶದಲ್ಲಿರುವ ಅಂಜನಾದ್ರಿಯೇ ನಿಜವಾದ ಜನ್ಮಭೂಮಿ ಎಂದು ಶ್ರೀ ಹನುಮದ್ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೇಳಿದೆ. ಕರ್ನಾಟಕದ ರಾಮಚಂದ್ರಾಪುರ ಮಠವು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣವೇ ಹನುಮನ ಜನ್ಮಸ್ಥಳ ಎಂದು ಪ್ರತಿಪಾದಿಸಿದೆ.

ಕತಾರ್‌ನ ಅನಿಲ ಸ್ಥಾವರದಲ್ಲಿ ಭಾರೀ ಸ್ಫೋಟ

ಭಾರತೀಯರು ಸೇರಿ 13 ಸಾವು

• ದುಬೈ: ಕತಾರ್‌ನಲ್ಲಿ ನಡೆದ ಅನಿಲ ಸ್ಥಾವರ ಸ್ಫೋಟದಲ್ಲಿ ಭಾರತೀಯ ಮತ್ತು ಪಾಕಿಸ್ತಾನಿ ಪ್ರಜೆಗಳು ಸೇರಿದಂತೆ 13 ಜನರು ಮೃತಪಟ್ಟಿದ್ದು, 66 ಮಂದಿ ಗಾಯಗೊಂಡಿದ್ದಾರೆ ಎಂದು ಕತಾರ್ ಇಂಧನ ಸಚಿವ ಸಾದ್ ಅಲ್-ಕಾಬಿ ಸೋಮವಾರ ತಿಳಿಸಿದ್ದಾರೆ. ಕತಾರ್‌ನ ದೇಶೀಯ ಇಂಧನ ಮೂಲಸೌಕರ್ಯದಲ್ಲಿ ಬರ್ಜಾನ್ ಅನಿಲ ಸೌಲಭ್ಯವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಈ ಸ್ಥಾವರವು ದಿನಕ್ಕೆ ಸುಮಾರು 1.4 ಶತಕೋಟಿ ಸ್ಟ್ಯಾಂಡರ್ಡ್ ಕ್ಯೂಬಿಕ್ ಅಡಿ ಮಾರಾಟ ಅನಿಲವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಪ್ರಾಥಮಿಕವಾಗಿ ವಿದ್ಯುತ್ ಉತ್ಪಾದನೆ ಘಟಕಗಳಿಗೆ ಶಕ್ತಿ ತುಂಬಲು ಬಳಸಲಾಗುತ್ತದೆ. ಕತಾರ್ ಈ ಸೌಲಭ್ಯದಲ್ಲಿ ಅಗಾಧವಾದ ಬಹುಪಾಲು ಪಾಲನ್ನು ಹೊಂದಿದ್ದರೆ, ಇಂಧನ ದೈತ್ಯ ಎಕ್ಸಾನ್‌ಮೊಬಿಲ್ ಅಲ್ಪ ಪ್ರಮಾಣದ ಪಾಲನ್ನು ಹೊಂದಿದೆ. ಈ ವರ್ಷದ ಆರಂಭದಲ್ಲಿ ಮಾರ್ಚ್‌ನಲ್ಲಿ ಇರಾನಿನ ಕ್ಷಿಪಣಿಯು ರಾಸ್ ಲಫಾನ್‌ಗೆ ಅಪ್ಪಳಿಸಿದ ನಂತರ ಈ ಸೌಲಭ್ಯದಲ್ಲಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಕ್ಷಿಪಣಿ ದಾಳಿಯಿಂದ ಭಾರೀ ಬೆಂಕಿ ಕಾಣಿಸಿಕೊಂಡಿತ್ತು. ಭದ್ರತಾ ಕಾಳಜಿ ಮತ್ತು ಪ್ರಾದೇಶಿಕ ಯುದ್ಧಗಳಿಗೆ ಸಂಬಂಧಿಸಿದ ಅಡೆತಡೆಗಳಿಂದಾಗಿ ಉತ್ಪಾದನಾ ಚಟುವಟಿಕೆಗಳನ್ನು ಅಂದಿನಿಂದ ಸ್ಥಗಿತಗೊಳಿಸಲಾಗಿತ್ತು. ಇದನ್ನು ಸ್ಥಳೀಯ ವಿದ್ಯುತ್ ಉತ್ಪಾದನೆಗೆ ಮತ್ತು ಅರೇಬಿಯಾ ಪರ್ಯಾಯ ದ್ವೀಪದ ಮರುಭೂಮಿ ಪ್ರದೇಶಗಳಲ್ಲಿನ ಉಪ್ಪುನೀರಿನ ಸಂಸ್ಕರಣಾ ಘಟಕಗಳಿಗೆ ವಿದ್ಯುತ್ ನೀಡಲು ಕತಾರ್ ಬಳಸುತ್ತಿತ್ತು. ಕತಾರ್ ಬಹುಪಾಲು ಎಲ್ಲಾ ಸ್ಥಾವರವನ್ನು ಹೊಂದಿದೆ.



ಸಹಾಯವಾಣಿ: ದೋಹಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ಘಟನೆ ಬಗ್ಗೆ ಸಂತಾಪ ವ್ಯಕ್ತಪಡಿಸಿದೆ. ಭಾರತೀಯ ಪ್ರಜೆಗಳು ಮತ್ತು ಅವರ ಕುಟುಂಬಗಳಿಗೆ ತುರ್ತುಸಹಾಯವಾಣಿ ಸಂಖ್ಯೆಗಳನ್ನು ಸಕ್ರಿಯಗೊಳಿಸಿದೆ. ರಾಯಭಾರ ಕಚೇರಿಯನ್ನು +974-55647502, +974-55384683 ಅಥವಾ doha@mea.gov.in. ಇಮೇಲ್ ಮೂಲಕ ಸಂಪರ್ಕಿಸಬಹುದು.

ಸಂಪಾದಕೀಯ

ಪಾದಚಾರಿಗಳ ಹಕ್ಕು ರಕ್ಷಣೆ

ಸುರಕ್ಷಿತವಾದ ಹಾಗೂ ನಿಗದಿಪಡಿಸಲ್ಪಟ್ಟ ಪಾದಚಾರಿ ಮಾರ್ಗ(ಫುಟ್‌ಪಾತ್)ದಲ್ಲಿ ಸಂಚರಿಸುವುದು ಪ್ರತಿಯೊಬ್ಬ ಪಾದಚಾರಿಯ ಹಕ್ಕು ಎಂಬುದಾಗಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪು ನಮ್ಮ ಸ್ಥಳೀಯಾಡಳಿತಗಳು ಕಡೆಗಣಿಸಿರುವ ಅತ್ಯಂತ ಮಹತ್ವದ ವಿಷಯವೊಂದರತ್ತ ಗಮನ ಸೆಳೆದಿದೆ. ರಸ್ತೆಯಿರುವುದು ಕೇವಲ ವಾಹನಗಳಿಗಷ್ಟೇ ಅಲ್ಲ, ನಡೆದಾಡುವ ಪಾದಚಾರಿಗಳೂ ಸೂಕ್ತ ವ್ಯವಸ್ಥೆಯಿರಬೇಕು ಎಂಬ ಮೂಲಭೂತ ಅಂಶವನ್ನು ಇದು ಎತ್ತಿ ತೋರಿದೆ. ಕೋಟ್ಯಂತರ ಭಾರತೀಯರಿಗೆ ಪ್ರತಿನಿತ್ಯವೂ ನಡಿಗೆಯೆಂಬುದು ಜೀವನಶೈಲಿಯಷ್ಟೇ ಅಲ್ಲ, ಅದು ಅನಿವಾರ್ಯ ಅವಶ್ಯಕತೆಯಾಗಿದೆ. ಹಾಗಾಗಿ ಅಡೆತಡೆರಹಿತ ರಸ್ತೆಗಳನ್ನು ನಿರ್ಮಿಸುವ ಜತೆಗೇ ಪಾದಚಾರಿಗಳಿಗಾಗಿ ಪ್ರತ್ಯೇಕ ಪಾದಚಾರಿ ಮಾರ್ಗ ರಚಿಸುವುದೂ ಅಗತ್ಯವಾಗಿದೆ. ಮುಖ್ಯವಾಗಿ ಪಟ್ಟಣಗಳಲ್ಲಿ, ನಗರಗಳಲ್ಲಿ, ಗ್ರಾಮೀಣ ಮಾರುಕಟ್ಟೆ ಪ್ರದೇಶಗಳಲ್ಲಿ ಇದು ಅಗತ್ಯವಾಗಿದೆ. ನಗರ, ಪಟ್ಟಣಗಳಲ್ಲಿ ಬಹುತೇಕವಾಗಿ ಪಾದಚಾರಿ ಮಾರ್ಗಗಳು ಇರುತ್ತವಾದರೂ ಅದನ್ನು ಸಣ್ಣಪುಟ್ಟ ಅಂಗಡಿಗಳು, ಅಂಗಡಿಗಳ ಸಾಮಾನು ಸರಂಜಾಮುಗಳು, ಕಟ್ಟಡ ನಿರ್ಮಾಣ ಸಾಮಗ್ರಿಗಳು ಅತಿಕ್ರಮಿಸಿರುತ್ತವೆ. ಹಲವೆಡೆಗಳಲ್ಲಿ ಫುಟ್‌ಪಾತ್‌ನಲ್ಲಿ ವಾಹನಗಳನ್ನು ಪಾರ್ಕ್ ಮಾಡುವುದೂ ಇದೆ. ಫುಟ್‌ಪಾತ್‌ನಲ್ಲೇ ವಾಹನಗಳನ್ನ ಓಡಿಸುವ ದುಸ್ಸಾಹಸಿಗಳೂ ಕಡಿಮೆಯೇನಿಲ್ಲ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲೇ ನಡೆಯಬೇಕಾದ ಪರಿಸ್ಥಿತಿ ಎದುರಾಗುವಂತಾಗುತ್ತದೆ. ಇದು ಅವರನ್ನು ಅಪಾಯಕ್ಕೆ ದೂಡುತ್ತದೆ.



ಇದು ಕಡೆಗಣಿಸುವಂತಹ ಕ್ಷುಲ್ಲಕ ವಿಷಯವಲ್ಲ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಪ್ರಾಧಿಕಾರದ 2024ರ ವರದಿಯ ಪ್ರಕಾರ 36,526 ಮಂದಿ ಪಾದಚಾರಿಗಳು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪಿದ್ದರು. ಅಂದರೆ ರಸ್ತೆ ದುರಂತಗಳಲ್ಲಿ ಸಾವಿಗೀಡಾಗುತ್ತಿರುವವರಲ್ಲಿ ಶೇ. 20.6ರಷ್ಟು ಪಾದಚಾರಿಗಳು. ನಗರಗಳ ರಸ್ತೆಗಳಲ್ಲಿ ವಾಹನಗಳೇ ಅಧಿಕವಾಗಿ ಪ್ರಾಧಾನ್ಯತೆ ಪಡೆಯುತ್ತವಾದರೂ, 2019ರ ಸಮೀಕ್ಷೆಯೊಂದರ ಪ್ರಕಾರ ರಸ್ತೆಯನ್ನು ಉಪಯೋಗಿಸುವವರಲ್ಲಿ ಶೇ.63 ರಷ್ಟು ಮಂದಿ ಪಾದಚಾರಿಗಳು. ಪ್ರತಿದಿನ 54 ಲಕ್ಷ ಜನರು ವಾಹನಗಳಲ್ಲಿ ಸಂಚರಿಸುವವರಾದರೆ 4.5 ಕೋಟಿ ಜನರು ಪಾದಚಾರಿಗಳಾಗಿ ಸಂಚರಿಸುತ್ತಿರುತ್ತಾರೆ. ವಾಹನಚಾಲಕರು ಪಾದಚಾರಿಗಳನ್ನು ಉಪದ್ರವಿಗಳೆಂಬಂತೆ ಪರಿಗಣಿಸುತ್ತಾರೆ ಎಂದು ನ್ಯಾಯಾಲಯವು ಅಭಿಪ್ರಾಯಿಸಿದ್ದು, ಪಾದಚಾರಿಗಳ ಸುರಕ್ಷೆಗಾಗಿ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ರಸ್ತೆ ಸುರಕ್ಷಾ ಸಮಿತಿಗಳನ್ನು ರಚಿಸುವಂತೆ ಸರಕಾರಗಳಿಗೆ ಸೂಚನೆ ನೀಡಿರುವುದು ಸೂಕ್ತ ಕ್ರಮವಾಗಿದೆ.

ನಗರವೊಂದು ವಾಹನಗಳ ಸುರಕ್ಷಿತ ಸಂಚಾರಕ್ಕಷ್ಟೇ ಅನುಕೂಲಕರವಾಗಿರಬೇಕಾದುದಲ್ಲ, ಕಾಲ್ನಡಿಗೆಯಲ್ಲಿ ಸಂಚರಿಸುವ ಪ್ರತಿಯೊಬ್ಬ ನಾಗರಿಕನ ಸುರಕ್ಷೆಯನ್ನೂ ಪಾಲಿಸುವಂತಾಗಬೇಕು.

ಏಕರೂಪವಾಗಿ ಉಳಿಯುವುದು

ನೈವ ಪರಂ ನ ವಿನಶ್ಯತಿ ತನುರಪಿ ಯಾ ಶ್ರೀರ್ನಿವೇಶಿತಾ ಸತ್ಸು ।
ಅವಿಶಿಷ್ಟತೇ ಹಿಮಾಂಶೋಃ ನೈವ ಕಲಾ ಯಾ ಸ್ಥಿತಾ ಶಂಭೌ ॥ -ಸುಭಾಷಿತಾವಳಿ

ಸ್ವಲ್ಪವಾದರೂ ಸರಿ, ಸಜ್ಜನರಿಗೆ ದಾನ ಮಾಡಿದ್ದಷ್ಟೇ ಶಾಶ್ವತವಾಗಿ ಉಳಿಯುವುದು. ಶಿವನ ಶಿರಸ್ಸಿನಲ್ಲಿದ್ದ ಅರೆಕೋರೆಯಾದ ಚಂದ್ರನ ಕಲೆ ಮಾತ್ರ ಹೆಚ್ಚು ಕಡಿಮೆಯಾಗದೆ ಏಕರೂಪವಾಗಿ ಉಳಿಯುವುದು-ಎಂಬುದು ಶ್ಲೋಕಾರ್ಥ.

ಮನುಷ್ಯನಾದವನು ದಾನ ಮಾಡ ಬೇಕು. ದಾನವೆಂಬುದು ಮನುಕುಲದ ಉನ್ನತಿಯನ್ನುಂಟು ಮಾಡುತ್ತದೆ. ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸದಾಚಾರವೆಂದರೆ ದಾನ... ಇತ್ಯಾದಿ.

ದಾನದ ಹಿರಿಮೆಯನ್ನು ಪ್ರಸ್ತುತ ಶ್ಲೋಕ ಪ್ರತಿಪಾದಿಸುತ್ತದೆ. 'ದಾನಾಯ ಲಕ್ಷ್ಮೀ' ಸಂಪತ್ತು ದಾನಕ್ಕಾಗಿ ಇರುವಂಥದ್ದು ಎಂಬುದು ಸೂಕ್ತಿಯ ಸಾರ. ದಾನವು ಪ್ರೀತಿಪೂರ್ವಕ ಮಾತಿನಿಂದ ಕೂಡಿರಬೇಕು ಎಂಬುದನ್ನು 'ದಾನಂ ಪ್ರಿಯವಾಕ್ ಸಹಿತಮ್' ಎಂಬ ಮಾತು ತಿಳಿಸುತ್ತದೆ. ದಾನವೇ ಜಗತ್ತಿನಲ್ಲಿ ಉತ್ತಮ ಆಧಾರ. ದಾನವು ದಾರಿದ್ರ್ಯದ ನಿವಾರಕ. ದಾನವು ಸ್ವರ್ಗದ ಮೆಟ್ಟಿಲು. ದಾನದಿಂದ ಶಾಂತಿಯೂ ಸಿಗುತ್ತದೆ, ಸುಖವೂ ಸಿಗುತ್ತದೆ. ದಾನ ಮಾಡುವಾಗ ಯೋಗ್ಯರನ್ನು ಹುಡುಕಿ, ಯೋಗ್ಯ ರೀತಿಯಲ್ಲಿ , ಯೋಗ್ಯವಾದದ್ದನ್ನು ಕೊಡಬೇಕು ಎಂಬ ಎಚ್ಚರವಿರಬೇಕು.



ಯಾವುದನ್ನು ದಾನ ನೀಡುತ್ತೇವೆ, ಎಷ್ಟನ್ನು ದಾನ ಮಾಡುತ್ತೇವೆ ಎಂಬುದಕ್ಕಿಂತ ಹೇಗೆ ಮಾಡುತ್ತೇವೆ, ಯಾವ ಭಾವನೆಯಿಂದ ದಾನ ಮಾಡುತ್ತೇವೆ ಎಂಬುದು ಮುಖ್ಯವಾಗುತ್ತದೆ.

ಸ್ವಲ್ಪವೇ ಆದರೂ ಯೋಗ್ಯರೆನಿಸಿದವರಿಗೆ, ಸಜ್ಜನರಿಗೆ ದಾನ ಮಾಡಬೇಕು. ಯಾರಿಗೆ ತೀರಾ ಅವಶ್ಯಕತೆ ಇದೆ ಎಂಬುದನ್ನು ತಿಳಿದು ಅವರಿಗೆ ಅವಶ್ಯಕತೆಯುಳ್ಳದ್ದನ್ನೇ ದಾನ ಮಾಡಿದರೆ ಅದು ಶಾಶ್ವತವಾಗಿ ಉಳಿಯುತ್ತದೆ. ಪೂರ್ಣ ಪ್ರಯೋಜನಕ್ಕೆ ಬರುತ್ತದೆ. ಸತ್ಪಾತ್ರದ ಆಶ್ರಯದಲ್ಲಿ ದಾನ ಕ್ರಿಯೆ ನಡೆಯಬೇಕು.

ಅನರ್ಹರಿಗೆ , ಅಯೋಗ್ಯರಿಗೆ ದಾನ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ, ದಾನಮಾಡಿದವನೂ, ಪಡೆದವನೂ ಇಬ್ಬರೂ ಸತ್ಪ್ರಯೋಜನದಿಂದ ವಂಚಿತರಾಗುತ್ತಾರೆ. ಆದ್ದರಿಂದಲೇ ಯಾರಿಗೆ ದಾನ ಮಾಡಬೇಕು? ಹೇಗೆ ದಾನ ಮಾಡಬೇಕು? ಯಾವುದನ್ನು ದಾನ ಮಾಡಬೇಕು? ಎಲ್ಲಿ ದಾನ ಮಾಡಬೇಕು? ಎಷ್ಟು ದಾನ ಮಾಡಬೇಕು... ಇತ್ಯಾದಿ ವಿಚಾರಗಳ ಕುರಿತು ಹಿರಿಯರು ಸಾಕಷ್ಟು ವಿಚಾರವನ್ನು ತಿಳಿಸಿದ್ದಾರೆ. ಇವುಗಳನ್ನೆಲ್ಲ ಸರಿಯಾಗಿ ತಿಳಿದುಕೊಂಡು ದಾನಕ್ರಿಯೆಯಲ್ಲಿ ತೊಡಗುವುದು ಉತ್ತಮವಾದದ್ದು, ನಾವು ಮಾಡುವ ದಾನಕ್ಕೆ ಶಾಶ್ವತ ಬೆಲೆ ಬರಬೇಕು; ಸದ್ವಿನಿಯೋಗವಾಗಬೇಕು. ಆಗ ಅದು ನಮ್ಮನ್ನು ಒಂದೇ ರೀತಿಯಲ್ಲಿ ಇರಲು ಕಾರಣವಾಗುತ್ತದೆ.

ಚಂದ್ರನಿಗೆ ವಿರಳತೆ ಇದೆ. ಅವನೆಂದೂ ಏಕ ರೀತಿ ಇರುವುದಿಲ್ಲ, ವೃದ್ಧಿ-ಕ್ಷಯವೆಂಬುದು ಚಂದ್ರನ ಗುಣ ಧರ್ಮ. ಆದರೆ ಅವನ ಒಂದು ಕಲೆ ಶಿವನ ಜಟೆಯನ್ನು ಅಲಂಕರಿಸಿದೆ. ಅದಕ್ಕೆ ವೃದ್ಧಿ- ಕ್ಷಯಗಳಿಲ್ಲ, ಏಕರೂಪವಾಗಿರುತ್ತದೆ. ಅದಕ್ಕೆ ಸಜ್ಜನರಾದ ಶಿವನನ್ನು ಆಶ್ರಯಿಸಿರುವುದು. ಸದಾ ಕಾಲವೂ ಏಕಪ್ರಕಾರವಾಗಿ ಇರುವುದಕ್ಕೆ ಗುಣಾಢ್ಯನಾದ ಶಿವನ ಸಾಮೀಪ್ಯವೇ ಕಾರಣ.

ನಾವು ಕೂಡ ಗುಣವಂತರ ಒಡನಾಟ ಮಾಡಿ ಅವರ ನಡೆ-ನುಡಿಗಳನ್ನು ಅಳವಡಿಸಿಕೊಂಡರೆ ವಿರಳತೆಯಿಲ್ಲದ ನೆಮ್ಮದಿಯ ಬದುಕನ್ನು ಕಂಡುಕೊಳ್ಳಬಹುದು.

ಮುಸುಕಿನಲ್ಲೇ ಕೆಲಸ ಮಾಡುವ ಅಸಾಮಾನ್ಯ ದೈತ್ಯ ಕಂಪನಿಗಳು

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಕಳೆದ ವಾರದ ಅಂಕಣದಲ್ಲಿ ಹೆಚ್ಚಿನ ಜನರು ಹೆಸರೇ ಕೇಳರದ, ಆದರೆ ಜಾಗತಿಕ ಉದ್ಯಮವೊಂದನ್ನೇ ಹೆಚ್ಚೂಕಡಿಮೆ ತಮ್ಮ ಏಕಸ್ವಾಮ್ಯದಿಂದ ನಿಯಂತ್ರಿಸುವ ಕೆಲವು ಕಂಪನಿಗಳ ಬಗ್ಗೆ ಬರೆದಿದ್ದೆ. ಆದರೆ ಏಕಸ್ವಾಮ್ಯವಿಲ್ಲದಿದ್ದರೂ ಉದ್ಯಮವೊಂದನ್ನು ನಿಯಂತ್ರಿಸುವ, ಸಂಪೂರ್ಣ ನಿಯಂತ್ರಣವೆಂದೇನೂ ಇಲ್ಲದಿದ್ದರೂ ಆ ಉದ್ಯಮಕ್ಕೆ ಗಣನೀಯ ಕೊಡುಗೆಯನ್ನು ನೀಡಿದ, ಲಕ್ಷಾಂತರ ಜನರಿಗೆ ಉದ್ಯೋಗ ನೀಡಿರುವ, ಆದರೂ ಜಗತ್ತು ಅವುಗಳ ಹೆಸರನ್ನೇ ಕೇಳರದ ಕೆಲವೊಂದು ಕಂಪನಿಗಳಿವೆ. ಇವು ನಮ್ಮೆಲ್ಲರ ದೈನಂದಿನ ಜೀವನದಲ್ಲೂ ಅತ್ಯಂತ ನಿಕಟಪಾತ್ರವೊಂದನ್ನು ವಹಿಸಿದ್ದರೂ, ನಮಗದರ ಅರಿವೇ ಇಲ್ಲದಂತೆ ಸಾಗಿದ್ದೇವೆ ಎಂದರೆ ನಂಬುತ್ತೀರಾ?

ಸಂಪೂರ್ಣ ಕೈಗಾರಿಕೆಯೊಂದರ ಮೇಲೆ ಸದ್ದಿಲ್ಲದ ಪ್ರಭಾವ ಬೀರುವ, ರಾಷ್ಟ್ರಗಳನ್ನೇ ನಿರ್ಮಿಸುವ, ಲಕ್ಷಾಂತರ ಜನರಿಗೆ ಆಹಾರವನ್ನು ನೀಡುವ, ಜಾಗತಿಕ ವ್ಯಾಪಾರಕ್ಕೇ ಬೆನ್ನೆಲುಬಾಗಿರುವ ಮತ್ತು ಶತಕೋಟಿ ಡಾಲರ್ ಮೌಲ್ಯದ ಯೋಜನೆಗಳನ್ನು ಕಾರ್ಯಗತಗೊಳಿಸುವ ಕೆಲವು ಕಂಪನಿಗಳ ಬಗ್ಗೆ ಮಾಹಿತಿ, ಈ ವಾರದಲ್ಲಿ. ಇವರೆಲ್ಲರೂ ವ್ಯಾಪಾರ ಜಗತ್ತಿನ ಅದೃಶ್ಯ ದೈತ್ಯರು. ಕೆಲವು ಕಂಪನಿಗಳು ಖಾಸಗಿ ಒಡೆತನದಲ್ಲಿವೆ, ಇನ್ನು ಕೆಲವು ಕುಟುಂಬ-ನಿಯಂತ್ರಿತವಾಗಿವೆ, ಮತ್ತೆ ಕೆಲವು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಬಿ-ಟು-ಸಿ ಅಂದರೆ ಬ್ಯುಸಿನೆಸ್ ಟು ಕಸ್ಟಮರ್ ಬದಲಿಗೆ ಬಿ-ಟು-ಬಿ ಅಂದರೆ ಕಂಪನಿಯಿಂದ ಕಂಪನಿಗೆ ಮಾರಾಟ ಮಾಡುತ್ತಾ, ತೆರೆಮರೆಯಲ್ಲಿ ಕಾರ್ಯನಿರ್ವಹಿಸುತ್ತವೆ. ನಮ್ಮಗೇ ಗೊತ್ತಿಲ್ಲದಂತೆ ಜೀವನದ ಮೇಲೆ ಅವುಗಳ ಪ್ರಭಾವವು ಅನೇಕ ಗ್ರಾಹಕಬಳಕೆಯ ಬ್ರ್ಯಾಂಡ್‌ಗಳಿಗಿಂತಲೂ ಹೆಚ್ಚಾಗಿರುತ್ತದೆ. ಉದಾಹರಣೆಗೆ ಕಾರ್ಗಿಲ್. ಅಲ್ಲಲ್ಲ, ನಮ್ಮ ಪಾಕಿಸ್ತಾನದ ಗಡಿಯಬಳಿಯಿರುವ ಕೆ ಅಕ್ಷರದಿಂದ ಪ್ರಾರಂಭವಾಗುವ ಕಾರ್ಗಿಲ್ ಎಂಬ ಹಳ್ಳಿಯಲ್ಲ, ಬದಲಿಗೆ ಸಿ ಅಕ್ಷರದಿಂದ ಪ್ರಾರಂಭವಾಗುವ, ವಿಶ್ವದ ಆಹಾರ ಪೂರೈಕೆಯ ಹಿಂದಿರುವ ಅಮೆರಿಕನ್ ಕಂಪನಿ ಕಾರ್ಗಿಲ್. 1865ರಲ್ಲಿ ಸ್ಥಾಪನೆಯಾದ ಕಾರ್ಗಿಲ್ ವಿಶ್ವದ ಅತಿದೊಡ್ಡ ಖಾಸಗಿ ಕಂಪನಿಗಳಲ್ಲೊಂದು. ಹೆಚ್ಚಿನ ಜನರು ಕಾರ್ಗಿಲ್ ಎಂಬ ಹೆಸರಿನ ಲೇಬಲ್ ಇರುವ ಉತ್ಪನ್ನವನ್ನು ಎಂದಿಗೂ ಖರೀದಿಸಿರುವುದಿಲ್ಲ, ಆದರೂ ಅದರ ಪೂರೈಕೆ ಸರಪಳಿಗಳ ಮೂಲಕ ಹಾದುಹೋಗುವ ಆಹಾರವನ್ನು ಅವರು ಸೇವಿಸಿರುವ ಸಾಧ್ಯತೆ 85%ಗೂ ಹೆಚ್ಚು. ಈ ಕಂಪನಿಯು ತನ್ನನ್ನು ಧಾನ್ಯ ವ್ಯಾಪಾರ, ಪಶು ಆಹಾರ, ಖಾದ್ಯ ತೈಲಗಳು, ಆಹಾರ ಪದಾರ್ಥಗಳು ಮತ್ತು ಕೃಷಿ ಸರಕುಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದೆ. ಪ್ರಪಂಚದಾದ್ಯಂತ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತದೆ, ಸಂಗ್ರಹಿಸುತ್ತದೆ, ಸಾಗಿಸುತ್ತದೆ, ಸಂಸ್ಕರಿಸುತ್ತದೆ ಮತ್ತು ಮಾರಾಟ ಮಾಡುತ್ತದೆ.

ಕೋಚ್ ಇಂಡಸ್ಟ್ರೀಸ್ (Koch) ಎಂಬ ಮತ್ತೊಂದು ಅಮೆರಿಕನ್ ದೈತ್ಯ ವಿಶ್ವದ ಅತಿದೊಡ್ಡ ಖಾಸಗಿ ಕಂಪನಿಗಳಲ್ಲೊಂದು. ಎಂದಿಗೂ ಜಾಹೀರಾತುಗಳಲ್ಲಿ ಕಾಣಸಿಗದ ಈ ಕಂಪನಿ ಮೂಲತಃ ರಾಸಾಯನಿಕಗಳು, ಸಂಸ್ಕರಣೆ, ಪಶುಪಾಲನಾ ಉತ್ಪನ್ನಗಳ ಉತ್ಪಾದನೆ, ವಿದ್ಯುಚ್ಛಕ್ತಿ, ಕಾಗದದ ಉತ್ಪನ್ನಗಳು ಮತ್ತು ಲಾಜಿಸ್ಟಿಕ್ಸ್‌ನಂತಹ ಕೈಗಾರಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಸುಮಾರು ಒಂದು ಲಕ್ಷದ ಇಪ್ಪತ್ತು ಸಾವಿರ ಜನರಿಗೆ ನೇರವಾಗಿ ಕೆಲಸ ಕೊಟ್ಟಿರುವ ಈ ಕುಟುಂಬ ನಿಯಂತ್ರಿತ ಕಂಪನಿ ಕೈಗಾರಿಕಾ ವಸ್ತುಗಳಿಂದ ಹಿಡಿದು ದಿನಂದಿನ ಜೀವನದಲ್ಲಿ ಬಳಕೆಯಾಗುವ ಗ್ರಾಹಕ ಸರಕುಗಳವರೆಗೆ ಎಲ್ಲವನ್ನೂ ತಯಾರಿಸುತ್ತದೆ. ಇದರ ಅನೇಕ ಉತ್ಪನ್ನಗಳು ಇತರ ವ್ಯವಹಾರಗಳು ಬಳಸುವ ಮಧ್ಯಂತರ ಘಟಕಗಳಾಗಿರುವುದರಿಂದ, ಅಗಾಧ ಆರ್ಥಿಕ ಹೆಜ್ಜೆಗುರುತನ್ನು ಹೊಂದಿದ್ದರೂ, ಸಾಮಾನ್ಯ ಗ್ರಾಹಕರಿಗೆ ಈ ಕಂಪನಿಯ ಇರುವಿಕೆಯೇ ಗಮನಕ್ಕೆ ಬರಲಿಕ್ಕಿಲ್ಲ.

ಗಗನಚುಂಬಿ ಕಟ್ಟಡಗಳು, ವಿಮಾನ ನಿಲ್ದಾಣಗಳು, ಅಣೆಕಟ್ಟುಗಳು ಮತ್ತು ವಿದ್ಯುತ್ ಸ್ಥಾವರಗಳನ್ನು ನಾವೆಲ್ಲರೂ ನೋಡುತ್ತೇವೆ. ಅವುಗಳ ಮೇಲಿರುವ ಒಡೆತನದ ಕಂಪನಿಯ ಹೆಸರುಗಳನ್ನು ನೋಡಿ ಗುರುತಿಸುತ್ತಾರೆ. ಆದರೆ ಅವುಗಳನ್ನು ನಿಜವಾಗಿಯೂ ನಿರ್ಮಿಸುವ ಕಂಪನಿಗಳ ಬಗ್ಗೆ ಯೋಚಿಸಲು ಹೋಗುವುದೇ ಇಲ್ಲ. ವರ್ಜೀನಿಯಾದ ರೆಸ್ಟನ್‌ನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಬೆಕ್ಟೆಲ್ ವಿಶ್ವದ ಅತಿದೊಡ್ಡ ಎಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣಸಂಸ್ಥೆಗಳಲ್ಲೊಂದು. ನೂರಾಇಪ್ಪತ್ತೈದು ವರ್ಷಗಳ ಇತಿಹಾಸವಿರುವ, ಅಷ್ಟು ವರ್ಷಗಳಲ್ಲಿ ಕುಟುಂಬದಿಂದಲೇ ನಿಯಂತ್ರಿತವಾಗಿ ಉಳಿದುಕೊಂಡು, ಯಾವುದೇ ಸ್ಟಾಕ್ ಮಾರುಕಟ್ಟೆಯಲ್ಲಿ ಲಿಸ್ಟ್ ಮಾಡಿಕೊಳ್ಳದೇ ಯಾವ ಹೂಡಿಕೆದಾರರಿಗೂ ನಷ್ಟವನ್ನುಂಟುಮಾಡದೇ ಹಲವುಪಟ್ಟು ಬಿಲಿಯನ್‌ಗಟ್ಟಲೆ ಮೊತ್ತದ ಪ್ರಾಜೆಕ್ಟುಗಳನ್ನು ನಿರ್ವಹಿಸಿ, ಕಠಮಾನದಿಂದಲೂ ಲಾಭವನ್ನು ಗಳಿಸುತ್ತಲೇ ಬಂದಿದೆ. ವಿಮಾನ ನಿಲ್ದಾಣಗಳು, ಹೆದ್ದಾರಿಗಳು, ರೈಲು ವ್ಯವಸ್ಥೆಗಳು, ಪರಮಾಣು ಸ್ಥಾವರಗಳು, ಇಂಧನ ಸಂಸ್ಕರಣಾ ಘಟಕಗಳು ಮತ್ತು ಗಣಿಗಾರಿಕೆ ಕಾರ್ಯಾಚರಣೆಗಳು ಸೇರಿದಂತೆ ಇದುವರೆಗೆ ಕೈಗೊಂಡ ಕೆಲವು ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾಗವಹಿಸಿದೆ. ನಮ್ಮ ಅಂಬಾನಿಯವರ ಒಡೆತನದ, ವಿಶ್ವದ ಅತೀದೊಡ್ಡ ತೈಲ ಸಂಸ್ಕರಣಾ ಘಟಕ ಜಾಮ್‌ನಗರದಲ್ಲಿರುವುದು ಗೊತ್ತಲ್ಲ, ಅದರ ವಿನ್ಯಾಸ ಮತ್ತು ನಿರ್ಮಾಣ ಎರಡೂ ಬೆಕ್ಟೆಲ್ಲಿನದ್ದೇ. ಆಧುನಿಕ ಜಗತ್ತಿನ ಅದ್ಭುತವಾದ ಹೂವರ್ ಅಣೆಕಟ್ಟು, ಇಂಗ್ಲಿಷ್ ಕಾಲುವೆಯ ನೀರಿನಡಿಯಲ್ಲಿ ಕಟ್ಟಿರುವ ಚಾನೆಲ್ ಟನಲ್ ರೈಲು ದಾರಿ, ಚೆರ್ನೋಬಿಲ್ ಸ್ಥಾವರದ ಮೇಲಿನ ಛಾವಣಿ, ಮೊದಲ ಗಲ್ಫ್ ಯುದ್ಧದಲ್ಲಿ ಕುವೈತಿನಲ್ಲಿ ಹತ್ತಿ ಉರಿಯುತ್ತಿದ್ದ ತೈಲಬಾವಿಗಳ ಬೆಂಕಿಯನ್ನು ಆರಿಸುವಿಕೆ ಮತ್ತು ಮರುನಿರ್ಮಾಣ, ಜುಬೈಲ್ ಎಂಬ ಕೈಗಾರಿಕಾ ಮಹಾನಗರದ ನಿರ್ಮಾಣ ಮುಂತಾದ ಮೆಗಾ ಪ್ರಾಜೆಕ್ಟುಗಳನ್ನು ಮಾಡಿರುವ ಈ ಕಂಪನಿಯ ಹೆಸರು ಗೊತ್ತಿದ್ದವರಿಗಷ್ಟೇ ಗೊತ್ತು.

ಅನೇಕ ಜನರು ಬಾಷ್ ಅನ್ನು ವಿದ್ಯುತ್ ಉಪಕರಣಗಳು ಅಥವಾ ಗೃಹೋಪಯೋಗಿ ಉಪಕರಣಗಳ ತಯಾರಕ ಎಂದಷ್ಟೇ ತಿಳಿದಿದ್ದಾರೆ. ಆದರೆ, ಈ ಜರ್ಮನ್ ಕಂಪನಿ ವಿಶ್ವದ ಅತ್ಯಂತ ಪ್ರಭಾವಶಾಲಿ ಕೈಗಾರಿಕಾ ತಂತ್ರಜ್ಞಾನ ಸಂಸ್ಥೆಗಳಲ್ಲೊಂದು ಎಂಬುದು ಹೆಚ್ಚಿನವರ ಗಮನಕ್ಕೆ ಬಂದಿರುವುದಿಲ್ಲ. ಬಾಷ್ ವಿಶ್ವಾದ್ಯಂತ ಆಟೋಮೊಬೈಲ್ ತಯಾರಕರಿಗೆ ಅತ್ಯಂತ ಸೂಕ್ಷ್ಮ ಮತ್ತು ನಿರ್ಣಾಯಕ ಭಾಗಗಳನ್ನು ಪೂರೈಸುತ್ತದೆ. ಬ್ರೇಕಿಂಗ್ ಸಿಸ್ಟಮ್‌ಗಳು ಮತ್ತು ಇಂಧನ ಇಂಜೆಕ್ಷನ್ ತಂತ್ರಜ್ಞಾನಗಳಿಂದ ಹಿಡಿದು, ಸೆನ್ಸರುಗಳು ಮತ್ತು ಎಲೆಕ್ಟ್ರಾನಿಕ್ಸ್‌ಗಳವರೆಗೆ, ಲೆಕ್ಕವಿಲ್ಲದಷ್ಟು ವಾಹನಗಳು ಬಾಷ್‌ನ ಪೇಟೆಂಟ್‌ಯುಕ್ತ ತಂತ್ರಜ್ಞಾನಗಳನ್ನು ಅವಲಂಬಿಸಿವೆ.

ಇದೇ ರೀತಿಯ ಇನ್ನೊಂದು ದೈತ್ಯ ಮೆರ್ಸ್ಕ್ (Maersk). ಜಾಗತಿಕ ವ್ಯಾಪಾರದ ಅಪಧಮನಿಯಾಗಿ ಕೆಲಸ ಮಾಡುವ ಈ ಕಂಪನಿಯ ಪೂರೈಕೆ ಸರಪಳಿಯ ಮೂಲಕವೇ ನಾವು ಖರೀದಿಸುವ ಬಹುತೇಕ ವಸ್ತುಗಳು ಪ್ರಯಾಣಿಸಿರುತ್ತವೆ. ಜಾಗತಿಕ ವ್ಯಾಪಾರದ ಗಮನಾರ್ಹ ಭಾಗವು ಒಂದಲ್ಲಾ ಒಂದು ಹಂತದಲ್ಲಿ ಡೆನ್ಮಾರ್ಕ್‌ನ ಮಾರ್ಸ್ಕ್ ಜಾಲದ ಮೂಲಕವೇ ಹಾದುಹೋಗಿರುತ್ತದೆ. ವಿಶ್ವದ ಅತಿದೊಡ್ಡ ಕಂಟೇನರ್ ಶಿಪ್ಪಿಂಗ್ ಮತ್ತು ಲಾಜಿಸ್ಟಿಕ್ಸ್ ಕಂಪನಿಗಳಲ್ಲಿ ಒಂದಾಗಿರುವ ಮೆರ್ಸ್ಕ್, ದೇಶಗಳ ಅಲ್ಲದೆ ಖಂಡಗಳ ನಡುವೆ ಸರಕುಗಳನ್ನು ಸಾಗಿಸಲು ಸಹಾಯ ಮಾಡುತ್ತದೆ. ಏಷ್ಯಾದ ಎಲೆಕ್ಟ್ರಾನಿಕ್ಸ್ ಆಗಿರಲಿ, ಯುರೋಪಿನ ಯಂತ್ರೋಪಕರಣಗಳಾಗಿರಲಿ ಅಥವಾ ಅಮೆರಿಕದ ಕೃಷಿ ಉತ್ಪನ್ನಗಳಾಗಿರಲಿ, ಈ ಕಂಪನಿಯು ಜಾಗತಿಕ ವಾಣಿಜ್ಯವಲಯದಲ್ಲಿ ನಿರ್ಣಾಯಕ ಕೊಂಡಿಯಾಗಿ ರೂಪುಗೊಳ್ಳುತ್ತದೆ. ರಸ್ತೆಯಲ್ಲಿ ಆಗಾಗ ಟ್ರಕ್ಕುಗಳ ಮೇಲೆ ಕೂತಿರುವ ದೈತ್ಯಗಾತ್ರದ ಮೆರ್ಸ್ಕ್ ಹೆಸರು ಕಂಟೈನರುಗಳನ್ನು ನೋಡಿದ್ದು ಬಿಟ್ಟರೆ, ಹೆಚ್ಚಿನ ಗ್ರಾಹಕರು ಈ ಹೆಸರನ್ನು ಎಂದಿಗೂ ಗಮನಿಸಿರುವುದಿಲ್ಲ. ಬ್ರಿಟನ್‌ನ ಜಾನ್ ಸ್ವೈರ್ ಸನ್ಸ್, ಹಡಗು ಸಾಗಣೆ, ವಾಯುಯಾನ, ಪಾನೀಯಗಳು ಮತ್ತು ಆಸ್ತಿಯಲ್ಲಿ ಪ್ರಭಾವ ಹೊಂದಿರುವ ಕಡಮಾನಗಳನ್ನು ಹೊಂದಿರುವ ಸಂಘಟನೆ. ಯುಎಇಯ ಡಿಪಿ ವರ್ಲ್ಡ್, ಜಾಗತಿಕವಾಗಿ ಅತ್ಯಂತ ಪ್ರಭಾವಶಾಲಿ ಬಂದರು ನಿರ್ವಹಣೆ ಮತ್ತು ಲಾಜಿಸ್ಟಿಕ್ಸ್ ಕಂಪನಿಗಳಲ್ಲೊಂದು. ಲೂಯಿ ವಿಟಾನ್ ಬ್ರ್ಯಾಂಡಿನ ಬಗ್ಗೆ ಎಲ್ಲರಿಗೂ ಗೊತ್ತಿದ್ದರೂ, ಅದರ ಮಾಲೀಕರಾದ ಅರ್ನಾಲ್ಟ್ ಕುಟುಂಬದ ಬಗ್ಗೆ ಯಾರಿಗೂ ಹೆಚ್ಚು ಗೊತ್ತಿರಲಿಕ್ಕಿಲ್ಲ, ಹಾಗೆಯೇ ಗುಚ್ಚಿ, ವೈಎಸ್ಎಲ್, ಬೆಲೆನ್ಸಿಯಾಗ, ಬೊಟೆಗ ವೆನೆಟ, ಅಲೆಕ್ಸಾಂಡರ್ ಮೆಕ್‌-ಕ್ವೀನ್ ಮುಂತಾದ ಪ್ರಸಿದ್ಧ ಬ್ರ್ಯಾಂಡುಗಳ ಬಗ್ಗೆ ಗೊತ್ತಿರುವ ಯಾರಿಗೂ ಅದರ ಹೋಲ್ಡಿಂಗ್ ಕಂಪನಿಯಾದ ಫ್ರೆಂಚ್ ದೈತ್ಯ ಕೆರಿಂಗ್ ಬಗ್ಗೆಯಾಗಲೀ, ಮತ್ತದರ ಮಾಲೀಕರಾದ ಪಿನಾಲ್ಟ್ ಕುಟುಂಬದ ಬಗ್ಗೆ ತಿಳಿದಿರಲಿಕ್ಕಿಲ್ಲ.

ಇವೆಲ್ಲವೂ ಹೊರಗೆಲ್ಲೂ ಕಾಣಿಸಿಕೊಳ್ಳಲು ಬಯಸದ, ಗೌಜುಗದ್ದಲದಿಂದ ದೂರವೇ ಇದ್ದು ಅತ್ಯಂತ ಖಾಸಗಿಯಾಗಿ ಬದುಕಲಿಚ್ಛಿಸುವ ಜನರಿಂದ ನಡೆಸಲ್ಪಡುವ ಖಾಸಗಿ ಕಂಪನಿಗಳು. ಆದರೂ ಈ ಕಂಪನಿಗಳ ಮಾಲೀಕರು ಆಯಾ ದೇಶದ ಪ್ರಧಾನಿ ಅಥವಾ ಅಧ್ಯಕ್ಷರಿಗೆ ರಾತ್ರಿ ಹನ್ನೆರಡಕ್ಕೂ ಫೋನಾಯಿಸಿ ನಿದ್ದೆಯಿಂದ ಎಬ್ಬಿಸಬಲ್ಲಷ್ಟು ಬಲಿಷ್ಠರು. ಈ ಕಂಪನಿಗಳು ಒಂದುವೇಳೆ ಸ್ಟಾಕ್ ಮಾರ್ಕೆಟ್ಟಿನಲ್ಲಿ ಲಿಸ್ಟ್ ಆಗಿದ್ದಿದ್ದರೆ ನಿಸ್ಸಂದೇಹವಾಗಿ ಫಾರ್ಚೂನ್ 100 ಕಂಪನಿಗಳ ಪಟ್ಟಿಯಲ್ಲಿ ಕಂಡುಬರುತ್ತಿದ್ದವು. ಪ್ರತಿಯೊಂದು ಕಂಪನಿಯೂ ಲಕ್ಷಕ್ಕೂ ಹೆಚ್ಚು ಜನರಿಗೆ ನೇರ ಉದ್ಯಮ ಕಲ್ಪಿಸಿಕೊಟ್ಟಂತವು. ಸಾಮಾಜಿಕ ಮಾಧ್ಯಮದಲ್ಲಿ ವಿರಳವಾಗಿ ಕಾಣಿಸಿಕೊಂಡು, ತಮ್ಮ ವ್ಯವಹಾರದಲ್ಲಿ ಅಸಾಧಾರಣ ಪ್ರಾಬಲ್ಯ ಸಾಧಿಸುವ ಇಂತಹ ಕಂಪನಿಗಳು ನಿಜಕ್ಕೂ ಮಾನ್ಯಯೋಗ್ಯ ಹಾಗೂ ವ್ಯವಹಾರ ಚತುರತೆಯ ಪಾಠ ಕಲಿಸಬಲ್ಲ ರತ್ನಗಳು.

ಪರಿಸರದ ಉಳಿವಿಗಾಗಿ ಗೋವು ಅತ್ಯವಶ್ಯಕ

ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com



ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ಬಹಳ ಮುಂಚಿತವಾಗಿಯೇ ಗ್ರಹಿಸುವ ಶಕ್ತಿಯನ್ನು ಭಾರತೀಯ ಗೋತಳಿಗಳು ಹೊಂದಿವೆ. ಮನೆಯ ಸದಸ್ಯರಲ್ಲಿ ಯಾರಿಗಾದರೂ ಅನಾರೋಗ್ಯವಾದಾಗ ಅಥವಾ ಮನೆಯ ಹಿರಿಯರ ಮೃತ್ಯುವಾದಾಗ ಆ ಮನೆಯಲ್ಲಿರುವ ಗೋವುಗಳು ಅದಕ್ಕೆ ಸ್ಪಂದಿಸಿ ಅನ್ನ, ಆಹಾರ ಮತ್ತು ನೀರನ್ನು ಬಿಟ್ಟ ಉದಾಹರಣೆಗಳು ಸಾಕಷ್ಟು ಕಂಡುಬರುತ್ತವೆ. 1993, ಸೆಪ್ಟೆಂಬರ್ 30ರಂದು ಮಹಾರಾಷ್ಟ್ರದ ಲಾತೂರ್ ಜಿಲ್ಲೆಯಲ್ಲಿ ಭೂಕಂಪ ಸಂಭವಿಸಿ ಅಪಾರ ಪ್ರಮಾಣದ ಹಾನಿಯಾದದ್ದು ಮರೆಯಲಾಗದ ಒಂದು ದುರಂತ. ಈ ದುರಂತಕ್ಕೆ ಕಾರಣವಾದ ಭೂಕಂಪ ಸಂಭವಿಸುವ ಕೆಲ ದಿನಗಳ ಮೊದಲು ಆ ಭಾಗದ ದೇವನಿ ತಳಿಯ ಗೋವುಗಳು ಯಾವುದೇ ಕಾರಣವಿಲ್ಲದೆ ಕೆನೆಯುವುದು, ಕೂಗುವುದು ಮತ್ತು ಸುಮ್ಮಸುಮ್ಮನೆ ಕುಣಿದಾಡುತ್ತಿದ್ದವು. ಅರ್ಥಾತ್ ಭೂಮಿಯಲ್ಲಿ ಏನೋ ಬದಲಾವಣೆ ಬರಲಿದೆ ಎಂಬುದು ಮಾನವನಿಗೆ ಅರಿವಾಗುವ ಮೊದಲೇ ಅವುಗಳ ಒಳಗಣ್ಣಿಗೆ ಗೋಚರವಾಗಿತ್ತು ಎನ್ನುವುದು ದಾಖಲಾದ ಸಂಗತಿ. ಹಾಗೆಯೇ ಕೆಲವು ವರ್ಷಗಳ ಹಿಂದೆ ಘಟಿಸಿದ ಭೀಕರ ಸುನಾಮಿಯ ಸಂದರ್ಭದಲ್ಲಿ ತಮಿಳುನಾಡಿನ ಗೋತಳಿಗಳಾದ ಬರಗೂರು, ಅಂಬ್ಲಾಚೆರಿ ಮತ್ತು ಕಂಗಾಯಂ ಸೇರಿದಂತೆ ಉಳಿದೆಲ್ಲಾ ಗೋವುಗಳು ಕೂಡಾ ತಮ್ಮ ವಿಚಿತ್ರ ವರ್ತನೆಗಳಿಂದ ವಾತಾವರಣದ ಬದಲಾವಣೆಗಳನ್ನು ಗುರುತಿಸಿದ್ದು ದಾಖಲಾಗಿದೆ.

ಭೂಮಿಯ ಅಯಸ್ಕಾಂತೀಯ ಪ್ರದೇಶದ ಬಗ್ಗೆ ಗೋವುಗಳಿಗೆ ಪ್ರಜ್ಞೆ ಇರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಇವು ಪ್ರಜ್ಞಾಪೂರ್ವಕವಾಗಿ ಉತ್ತರ ದಕ್ಷಿಣಾಭಿಮುಖವಾಗಿಯೇ ಹೆಚ್ಚು ಹೊತ್ತು ಕಾಲ ಕಳೆಯುತ್ತವೆ. ಇವು ವಿಶ್ರಮಿಸುತ್ತಿರುವಾಗ ಇಲ್ಲವೇ ಮೇಯುವಾಗ ತಮ್ಮ ದೇಹವು ಉತ್ತರ ಮತ್ತು ದಕ್ಷಿಣ ದಿಕ್ಕಿನತ್ತಲೇ ಇರುವಂತೆ ನೋಡಿಕೊಳ್ಳುತ್ತವೆ. ಉತ್ತರ ಮತ್ತು ದಕ್ಷಿಣ ಧ್ರುವವನ್ನು ಗುರುತಿಸುವ ಕಂಪಾಸ್‌ನ ಮುಳ್ಳಿನಂತೆಯೇ ಇವು ವರ್ತಿಸುತ್ತವೆ. ಇದಕ್ಕೆ ಇವುಗಳಿಗೆ ಭೂಮಿಯ ಅಯಸ್ಕಾಂತ ಭೂಪ್ರದೇಶದ ಪ್ರಜ್ಞೆ ಇರುವುದೇ ಕಾರಣ ಎಂಬುದಾಗಿ ಸಂಶೋಧಕರು ಅಭಿಪ್ರಾಯಿಸಿದ್ದಾರೆ. ಅಂತರ್ಜಾಲಾತಾಣ ಗೂಗಲ್‌ನ ಅರ್ಥ್ ಸಾಫ್ಟ್‌ವೇರ್ ನೆರವಿನಿಂದ ಭೂಮಿಯ ವಿವಿಧ ಭಾಗಗಳಲ್ಲಿ ಸೆರೆ ಹಿಡಿದಿರುವ ಗೋವುಗಳ ಚಿತ್ರಗಳು ಈ ವಾದವನ್ನು ಪುಷ್ಟೀಕರಿಸುತ್ತವೆ.

ಚೀನಾ, ಜಪಾನ್ ಮತ್ತು ಪೂರ್ವ ಏಷ್ಯಾದ ಇತರ ದೇಶಗಳಲ್ಲಿ ಗೋವುಗಳಂತೆ ವಿವಿಧ ಸಮುದ್ರ ಜೀವಿಗಳನ್ನು ಸಹ ಅಪಾರ ಪ್ರಮಾಣದಲ್ಲಿ ತಿನ್ನಲಾಗುತ್ತಿದೆ. ಇಂಡೋನೇಷ್ಯಾದಲ್ಲೂ ಸಹ ಅಪಾರ ಪ್ರಮಾಣದಲ್ಲಿ ಜಲಚರ ಜೀವಿಗಳನ್ನು ಇಂದಿಗೂ ಭಕ್ಷಿಸಲಾಗುತ್ತಿದೆ. ಹಲವು ವರ್ಷಗಳ ಹಿಂದೆ ಇದೇ ಇಂಡೋನೇಷ್ಯಾದಲ್ಲಿ ಸುನಾಮಿ ಕಾಣಿಸಿಕೊಂಡು ಅಪಾರ ಪ್ರಮಾಣದ ಪ್ರಾಣ ಹಾನಿ ಸಂಭವಿಸಿದ್ದನ್ನು ನಾವು ಕಂಡಿದ್ದೇವೆ. ಇದಕ್ಕೂ ಮುಂಚೆ ಇಂಡೋನೇಷ್ಯಾದ ಆಸುಪಾಸಿನಲ್ಲಿ ಮತ್ತು ಇದಕ್ಕೆ ಅಂಟಿಕೊಂಡಿರುವ ಹಿಂದೂ ಮಹಾಸಾಗರದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಮೀನುಗಳನ್ನು ಹಿಡಿಯಲಾಗಿತ್ತು. ಇಂತಹ ಸಮುದ್ರದಲ್ಲಿ ಇರುವ ಜೀವಿಗಳು ಸಮುದ್ರದ ಅಡಿಯಲ್ಲಿರುವ ಭೂಮಿಯ ಸಮತೋಲನವನ್ನು ಕಾಪಾಡುವುದನ್ನು ವೈಜ್ಞಾನಿಕರು ದೃಢಪಡಿಸಿದ್ದರು. ಇಂತಹ ಜೀವಿಗಳನ್ನು ಯಥೇಚ್ಛವಾಗಿ ಭಕ್ಷಿಸಿದಾಗ ಅವುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಪ್ರಕೃತಿ ವಿಕೋಪ ಉಂಟಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಹಾಗಾಗಿ ಸಮುದ್ರದ ಈ ಜೀವಿಗಳ ಸಂಖ್ಯೆ ಕಡಿಮೆಯಾದಾಗ ಸುನಾಮಿ ಕಾಣಿಸಿಕೊಂಡು ಸಮುದ್ರದ ದಡದಲ್ಲಿ ವಾಸಿಸುವವರನ್ನು ಅದು ನುಂಗಿ ಹಾಕಿದೆ ಎಂಬುದಾಗಿ ವಿಶ್ವದ ಖ್ಯಾತ ಸಮುದ್ರ ವಿಜ್ಞಾನಿಗಳು ಅಭಿಪ್ರಾಯಿಸಿದ್ದರು. ಇದರಿಂದ ನಮಗೆ ತಿಳಿಯುವುದೇನೆಂದರೆ ಪ್ರಪಂಚದಲ್ಲಿ ಆಗುವ ಪ್ರಾಕೃತಿಕ ವಿಪತ್ತುಗಳ ಮೂಲ ಹಿಂಸೆ ಎಂಬುದು. ಹಾಗೆಯೇ ಪ್ರಪಂಚದಲ್ಲಿ ಸಂಭವಿಸುತ್ತಿರುವ ಭೂಕಂಪ, ಜ್ವಾಲಾಮುಖಿ ಮತ್ತು ಸುನಾಮಿಯಂತಹ ವಿಪತ್ತುಗಳನ್ನು ಅಧ್ಯಯನ ಮಾಡಿದಂತಹ ವಿಶ್ವದ ಖ್ಯಾತ ವೈಜ್ಞಾನಿಕರ ಸಂಶೋಧನೆಯಿಂದ ತಿಳಿದುಬರುವುದೇನೆಂದರೆ ಭೂಮಿ ಹಾಗೂ ಸಮುದ್ರದಲ್ಲಿರುವ ಜೀವಿಗಳನ್ನು ದೊಡ್ಡ ಪ್ರಮಾಣದಲ್ಲಿ ನಾಶ ಮಾಡಿದಾಗ ಇಂತಹ ವಿಪತ್ತುಗಳು ಮುಂದೊಂದು ದಿನ ಮಾನವನನ್ನೇ ನುಂಗಿ ಹಾಕುತ್ತವೆ ಎಂದು. ಇದಕ್ಕೆ ಸಾಕ್ಷಿಯೆಂಬಂತೆ ಲಾತೂರ್ ಭೂಕಂಪವಾದ ನಂತರ ದೆಹಲಿಯಲ್ಲಿ ನಡೆದ ಚಿಂತನಾ ಸಭೆಯಲ್ಲಿ ಆ ಪ್ರದೇಶದ ಸುತ್ತ ಮುತ್ತ ಪ್ರತಿನಿತ್ಯ ನಡೆಯುತ್ತಿರುವ ಗೋವುಗಳ ಹತ್ಯೆಯ ಪರಿಣಾಮವೇ ಪ್ರಕೃತಿ ವಿಕೋಪ ಹಾಗೂ ನೆರೆ ಹಾವಳಿಯಂತಹ ಅನಾಹುತಕ್ಕೆ ಕಾರಣ ಎಂದು ಅಭಿಪ್ರಾಯಿಸಲಾಯಿತು. ಇದರೊಂದಿಗೆ ಕಸಾಯಿಖಾನೆಯಲ್ಲಿ ಪ್ರತಿ ನಿತ್ಯ ಹತ್ಯೆಯಾಗುವ ಗೋವುಗಳ ಆಕ್ರಂದನವು ಭೂಕಂಪಕ್ಕೆ ಪ್ರಮುಖ ಕಾರಣ ಎಂಬುದಾಗಿ ಉತ್ತರ ಕಾಶಿ ಮತ್ತು ಲಾತೂರಿನ ಭೂಕಂಪನದ ಅಧ್ಯಯನದ ವರದಿ ಸಹ ದೃಢಪಡಿಸಿತ್ತು.

ಮತ್ತೊಂದೆಡೆ ವಿಶ್ವ ಸಂಸ್ಥೆಯು ಪರಿಸರ ವರದಿಯೊಂದನ್ನು ಬಹಿರಂಗ ಪಡಿಸಿದೆ. ಅದರ ಪ್ರಕಾರ ಪ್ರಸ್ತುತ ಜಗತ್ತಿನಲ್ಲಿ ಮಾಂಸ ತಯಾರಿಕೆಯ ಬೇರೆ ಬೇರೆ ಹಂತಗಳಲ್ಲಿ ಬಿಡುಗಡೆಯಾಗುವ ಹಸಿರು ಮನೆ ಅನಿಲ ಜಗತ್ತಿನ ಒಟ್ಟು ವಾಹನಗಳು ಹಾಗೂ ಕೈಗಾರಿಕೆಗಳು ಉಗುಳುವ ವಿಷಾನಿಲಕ್ಕಿಂತಲೂ ಹೆಚ್ಚಾಗಿದೆ. ಮಾಂಸಾಹಾರ ತಯಾರಿಕೆ ಸಂದರ್ಭದಲ್ಲಿ ಬಿಡುಗಡೆಯಾಗುವ ಮಿಥೇನ್ ಜಾಗತಿಕ ತಾಪಮಾನಕ್ಕೆ ಕಾರಣವಾಗುವ ಇಂಗಾಲದ ಡೈ ಆಕ್ಸೈಡ್‌ಗಿಂತ 23 ಪಟ್ಟು ಹೆಚ್ಚು ಅಪಾಯಕಾರಿಯಾಗಿದೆ ಎಂಬುದು ವರದಿಯಿಂದ ಬಹಿರಂಗವಾಗಿತ್ತು. ಒಬ್ಬ ಮನುಷ್ಯ ಮಾಂಸಾಹಾರವನ್ನು ತ್ಯಜಿಸಿದನೆಂದರೆ ಆತ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಸುಮಾರು 1.5 ಟನ್‌ಗಳಷ್ಟು ಇಂಗಾಲದ ಡೈ ಆಕ್ಸೈಡ್ ಎಂಬ ವಿಷಾನಿಲದ ಉತ್ಪಾದನೆಯನ್ನು ತಡೆದಂತಾಗುತ್ತದೆ. ಕೆಲವರು ಮಾಂಸಾಹಾರ ಸೇವಿಸುತ್ತಿರುವುದರಿಂದ ಅತ್ಯಧಿಕ ಮಂದಿ ಹೆಚ್ಚಿನ ಪ್ರಮಾಣದಲ್ಲಿ ಮಿಥೇನ್, ನೈಟ್ರಸ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್‌ನಂತಹ ವಿಷಾನಿಲವನ್ನು ಕುಡಿಯುವಂತಾಗಿದೆ. ಹಾಗೆಯೇ ಮತ್ತೊಂದು ಅಧ್ಯಯನದ ಪ್ರಕಾರ ಮಾಂಸಕ್ಕಾಗಿ ಪ್ರತಿ ವರ್ಷ ವಿಶ್ವದಾದ್ಯಂತ ಸುಮಾರು 2,500 ಕೋಟಿಗೂ ಹೆಚ್ಚು ಪ್ರಾಣಿಗಳನ್ನು ಕೊಲ್ಲಲಾಗುತ್ತಿದೆ. ಅಮೆರಿಕಾ ಒಂದರಲ್ಲೇ ಒಬ್ಬ ವ್ಯಕ್ತಿ ಒಂದು ವರ್ಷದಲ್ಲಿ ಸುಮಾರು 90 ಪ್ರಾಣಿಗಳನ್ನು ತಿನ್ನುತ್ತಿದ್ದಾನೆ. ಇವರೆಲ್ಲರೂ ಮಾಂಸಾಹಾರವನ್ನು ತ್ಯಜಿಸಿದರೆ ಮುಂದಿನ ಪೀಳಿಗೆಗೂ ನಾವು ಈ ಭೂಮಿಯನ್ನು ಉಳಿಸಬಹುದಾಗಿದೆ.

ಭಾರತೀಯ ಗೋವಿನ ಉತ್ಪನ್ನವಾದ ಸಗಣಿ ಅಥವಾ ಗೋಮಯ ಅಣುವಿಕಿರಣವನ್ನು ತಡೆಗಟ್ಟುತ್ತದೆಂದು ಜಪಾನಿನ ವಿಜ್ಞಾನಿಗಳು ಸಂಶೋಧನೆಯ ಮೂಲಕ ಬಹಳ ಹಿಂದೆಯೇ ದೃಢಪಡಿಸಿದ್ದಾರೆ. ಗೋಮಯ ತೀವ್ರತರ ಅಣುವಿಕಿರಣ ವಿರೋಧಿಯಾದ್ದರಿಂದ ಇಂದಿನ ವಾತಾವರಣದಲ್ಲಿ ಕಾರ್ಖಾನೆಗಳ ತ್ಯಾಜ್ಯದ ಮೂಲಕ ಪರಿಸರದಲ್ಲಿ ಹರಡಿಕೊಳ್ಳುವ ವಿಕಿರಣ ಇತ್ಯಾದಿಗಳಿಗೆ ಗೋಮಯ ಪರಿಣಾಮಕಾರಿ ಉತ್ತರವಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ಹಾಗೆಯೇ ಸಗಣಿಯಿಂದ ಸಾರಿಸಿದ ನೆಲ ಅಥವಾ ಗೋಡೆ ಉಷ್ಣ ಶೀತಗಳನ್ನು ನಿಯಂತ್ರಿಸುತ್ತದೆ ಮತ್ತು ಹಾನಿಕಾರಕಗಳ ಪ್ರವೇಶವನ್ನು ತಡೆಯುತ್ತದೆ ಎಂಬುದು ದೃಢಪಟ್ಟಿದೆ. ಗೋಡೆಗೆ ಮತ್ತು ಛಾವಣಿಗೆ ಸಗಣಿಯ ಲೇಪನ ಮಾಡಿದರೆ ಅದು ರೇಡಿಯೇಷನ್‌ನ್ನು ತಡೆದು ನಿಲ್ಲಿಸುವುದು ಸಾಬೀತಾಗಿದೆ. ಅಷ್ಟೇ ಅಲ್ಲದೆ ಮಿಂಚು ಹೊಡೆಯುವುದರಿಂದ ಆಗುವ ದುಷ್ಪರಿಣಾಮವನ್ನು ತಪ್ಪಿಸುತ್ತದೆ ಎಂಬುದನ್ನು ವೈಜ್ಞಾನಿಕರು ಕಂಡುಕೊಂಡಿದ್ದಾರೆ.

ಜಪಾನ್‌ನ ಮೇಲೆ 1945ರಲ್ಲಿ ಅಮೆರಿಕಾ ಅಣುಬಾಂಬ್ ಹಾಕಿದಾಗ ಉಂಟಾದ ಅಣುವಿಕಿರಣದಿಂದ ಜಪಾನ್ ದೇಶ ಇಂದಿಗೂ ಪೂರ್ತಿ ಚೇತರಿಸಿಕೊಂಡಿಲ್ಲ, ಆದರೆ ಭಾರತೀಯ ಗೋವಿನ ಸಗಣಿಯನ್ನು ಸಾರಿಸಿದರೆ ವಿಕಿರಣದ ತೊಂದರೆಯನ್ನು ನಿವಾರಿಸಿಕೊಳ್ಳಬಹುದೆಂದು ತಿಳಿದು ಆ ಮೂಲಕ ಪ್ರಯತ್ನಿಸಿ ಜಪಾನ್‌ನ ಅನೇಕ ಕಡೆ ಅಂದಿನಿಂದ ಇಂದಿನವರೆಗೂ ಗೋಮಯವನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಅಷ್ಟೇ ಅಲ್ಲದೆ ಸಗಣಿಯ ನೀರಿನಲ್ಲಿ ಬಟ್ಟೆಯನ್ನು ನೆನೆಸಿ ಒಣಗಿಸಿ ಧರಿಸುವ ಕಾರಣದಿಂದ ಅಣುವಿಕಿರಣದಿಂದ ರಕ್ಷಿತರಾಗುತ್ತಿದ್ದಾರೆ. ಗೋಮಯದ ಬೂದಿಯನ್ನು ನೀರಿನಲ್ಲಿ ಕದಡಿ ದುರ್ಗಂಧ ಬರುವ ವಸ್ತುವಿನ ಮೇಲೆ ಎರಚಿದರೆ ದುರ್ಗಂಧ ನಾಶವಾಗುವುದನ್ನು ಅರಿತು ಕಾರ್ಯಪ್ರವರ್ತರಾಗಿದ್ದಾರೆ. ಒಮ್ಮೆ ರಷ್ಯಾದ ಅಣು ಕೇಂದ್ರದಲ್ಲಿ ರೇಡಿಯೋ ಆ್ಯಕ್ಟಿವ್ ದ್ರವ್ಯವು ಸೋರಿಕೆಯಾದಾಗ ಅಣುವಿಕಿರಣದಿಂದ ರಕ್ಷಿಸಿಕೊಳ್ಳಲು, ಸುತ್ತಮುತ್ತಲಿನ ಹಳ್ಳಿಗರು ಆಕಳ ಸಗಣಿಯನ್ನು ತಮ್ಮ ಗುಡಿಸಲುಗಳಿಗೆ ಮೆತ್ತಿ ಸಂರಕ್ಷಿಸಿಕೊಂಡದ್ದು ದಾಖಲಾಗಿದೆ. ನಂತರ ಪರೀಕ್ಷಿಸಿದಾಗ ಹಳ್ಳಿಯ ಜನರಿಗೆ ಅದು ರಕ್ಷಣೆ ನೀಡಿದ್ದು ಸತ್ಯವೆಂದು ತಿಳಿದು ಬಂದಿದೆ.

ಮತ್ತೊಂದು ಸಮೀಕ್ಷೆಯ ಪ್ರಕಾರ ಒಂದು ಗೋವಿನಿಂದ ಪ್ರತಿವರ್ಷ 4500 ಲೀಟರ್ ಬಯೋಗ್ಯಾಸ್ ದೊರೆಯುತ್ತದೆ. ಈ ಬಯೋಗ್ಯಾಸ್‌ನ ಬಳಕೆಯಿಂದ 6 ಕೋಟಿ 80 ಲಕ್ಷ ಟನ್ ಕಟ್ಟಿಗೆ ಉರುವಲಾಗಿ ಬಳಸುವುದು ತಪ್ಪುತ್ತಿದೆ. ಅಷ್ಟು ಕಟ್ಟಿಗೆ ಪಡೆಯಲು 14 ಕೋಟಿ ಮರಗಳು ಉಳಿದು ಪರಿಸರ ಸಂರಕ್ಷಣೆಯಾಗುತ್ತಿದೆ. ಇನ್ನೊಂದು ಅಚ್ಚರಿಯ ವಿಚಾರವೇನೆಂದರೆ 2005ರ ಆಗಸ್ಟ್ 31 ರಂದು ಅಮೆರಿಕದ ವಾಷಿಂಗ್ಟನ್ ಡಿ.ಸಿ.ಯಲ್ಲಿ ನಡೆದ ಅಮೆರಿಕನ್ ಕೆಮಿಕಲ್ ಸೊಸೈಟಿಯ ಸಭೆಯಲ್ಲಿ ಮಂಡನೆಯಾದ ವರದಿಯಲ್ಲಿ, ವಿಶ್ವದಲ್ಲಿ ಹೆಚ್ಚುತ್ತಿರುವ ತಾಪಮಾನಕ್ಕೆ ಕಾರಣವಾಗುವ ಅನಿಲಗಳ ಹೊರಸೂಸುವಿಕೆ ಮತ್ತು ಜಗತ್ತನ್ನು ಶಾಖದ ಮಾರಿಯಿಂದ ರಕ್ಷಿಸಬೇಕೆಂದರೆ ನಮ್ಮಲ್ಲಿರುವ ಈಗಿನ ಏಕೈಕ ಅಸ್ತ್ರವೆಂದರೆ 'ಗೋವು' ಎಂದು ಅಭಿಪ್ರಾಯಿಸಲಾಗಿದೆ. ಇಷ್ಟು ಸಾಕಲ್ಲವೇ ಧರ್ಮಾತೀತವಾಗಿ ಗೋಸಂತತಿಯನ್ನು ಉಳಿಸಿ ಬೆಳೆಸಲು..?

ಆರೆಸ್ಸೆಸ್ ಬಗ್ಗೆ ಅನವಶ್ಯ ವಿವಾದ

▸ ರಾಮ್ ಮಾಧವ್



ಕರ್ನಾಟಕ ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರು ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗ್ವತ್ ಅವರಿಗೆ ಬರೆದ ಪತ್ರವು ಕಳೆದ ಕೆಲ ದಿನಗಳಿಂದ ದೊಡ್ಡ ಸುದ್ದಿ ಮಾಡುತ್ತಿದೆ. ''ದೇಶದ ಯಾವ ಕಾನೂನಿನಡಿಯಲ್ಲಿ ಆರೆಸ್ಸೆಸ್ ಕಾರ್ಯಾಚರಿಸುತ್ತಿದೆ?'' ಎಂದು ಪ್ರಶ್ನಿಸಿರುವ ಅವರು, ''ಆರೆಸ್ಸೆಸ್ ತನ್ನ ಕಾನೂನು ಸ್ಥಾನಮಾನ , ನೋಂದಣಿ ಮತ್ತು ಪದಾಧಿಕಾರಿಗಳ ವಿವರ, ದೇಣಿಗೆ, ವೆಚ್ಚ, ತೆರಿಗೆ, ಸಾರ್ವಜನಿಕ ಚಟುವಟಿಕೆಗೆ ಪಡೆದಿರುವ ಅನುಮತಿ ಮೊದಲಾದವುಗಳ ವಿವರ ನೀಡಬೇಕು'' ಎಂದು ಸೂಚಿಸಿದ್ದಾರೆ. ಭಾಗ್ವತ್‌ರವರು ಈ ಪತ್ರವನ್ನು 'ರಾಜಕೀಯ' ಎಂದು ತಿರಸ್ಕರಿಸಿ ಉತ್ತರ ನೀಡಲು ನಿರಾಕರಿಸಿದ್ದಾರೆ. ''ಇದೊಂದು ರಾಜಕೀಯ. ಇಂತಹ ಗಿಮಿಕ್‌ಗಳನ್ನು ಈ ಹಿಂದೆಯೂ ಬಹಳಷ್ಟು ಬಾರಿ ಸಂಘದ ವಿರುದ್ಧ ಪ್ರಯತ್ನಿಸಲಾಗಿದೆ'' ಎಂದು ಅವರು ಹೇಳಿದ್ದಾರೆ.

ಟಿವಿ ಸಂದರ್ಶನವೊಂದರಲ್ಲಿ ಖರ್ಗೆಯವರು, ಆರೆಸ್ಸೆಸ್ ಈ ನೆಲದ ಕಾನೂನಿಗೆ ಬದ್ಧವಾಗಿರಬೇಕು ಎಂದಷ್ಟೇ ತಾನು ಹೇಳುತ್ತಿರುವುದಾಗಿ ನುಡಿದರು. ಆರೆಸ್ಸೆಸ್ ಯಾವ ಕಾನೂನನ್ನು ಉಲ್ಲಂಘಿಸಿದೆ ಎಂದು ಟಿವಿ ಸಂದರ್ಶನಕಾರರು ಪ್ರಶ್ನಿಸಿದಾಗ ಅವರಲ್ಲಿ ಉತ್ತರವಿರಲಿಲ್ಲ. ಆರೆಸ್ಸೆಸ್ ಯಾವ ಕಾನೂನಿನಡಿಯಲ್ಲಿ ಕಾರ್ಯಾಚರಿಸುತ್ತಿದೆಯೆಂದು ತನಗೆ ಗೊತ್ತಿಲ್ಲ ಎಂದು ಹಾರಿಕೆಯ ಉತ್ತರ ನೀಡಿದರು. ಸಂವಿಧಾನದ 19 (1) (A) ವಿಧಿಯು ''ದೇಶದ ಎಲ್ಲಾ ನಾಗರಿಕರೂ ಸಂಘ ಅಥವಾ ಒಕ್ಕೂಟ ಅಥವಾ ಸಹಕಾರ ಸಂಘಗಳನ್ನು ಸ್ಥಾಪಿಸುವ ಅಧಿಕಾರವನ್ನು ಹೊಂದಿದ್ದಾರೆ'' ಎಂದು ಸ್ಪಷ್ಟವಾಗಿ ಹೇಳುತ್ತದೆ. ಈ ಸಂವಿಧಾನದ ವಿಧಿಯಡಿಯಲ್ಲಿ ಆರೆಸ್ಸೆಸ್ ಕೂಡಾ ಈ ದೇಶದಲ್ಲಿ ತನ್ನ ಚಟುವಟಿಕೆಗಳನ್ನು ಮುಕ್ತವಾಗಿ ನಡೆಸಲು ಅಧಿಕಾರ ಹೊಂದಿದೆ. ಇಂತಹ ಸಂಘಗಳು ನೋಂದಣಿ ಮಾಡುವುದು ಕಡ್ಡಾಯ ಎಂದು ಸಂವಿಧಾನವು ಎಲ್ಲಿಯೂ ಹೇಳಿಲ್ಲ, ಸರಕಾರದಿಂದ ಅನುದಾನ ಪಡೆಯುವ ಅಥವಾ ವಾಣಿಜ್ಯಕ ಚಟುವಟಿಕೆಗಳಲ್ಲಿ ತೊಡಗಿರುವ ಸಂಘಗಳು ಮಾತ್ರ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಇದಾವುದೂ ಆರೆಸ್ಸೆಸ್‌ಗೆ ಅನ್ವಯವಾಗುವುದಿಲ್ಲ.

ಆರೆಸ್ಸೆಸ್ ತನ್ನ ನೋಂದಣಿ ಪತ್ರ ತೋರಿಸಬೇಕೆಂದು ಖರ್ಗೆಯವರು ಹೇಳುತ್ತಿರುವುದು ಕ್ಷುಲ್ಲಕವಾಗಿದೆ.

> ಸಂಘದ ನೋಂದಣಿ ಬಗ್ಗೆ ಪ್ರಶ್ನೆ ಎತ್ತುತ್ತಿದ್ದಾರೆಂದರೆ ಒಂದೋ ಅದು ಅವರ ಅಜ್ಞಾನದಿಂದ ಅಥವಾ ರಾಜಕೀಯ ದುರುದ್ದೇಶದಿಂದ.

ಆರೆಸ್ಸೆಸ್ ಕಳೆದ 100 ವರ್ಷಗಳಿಂದ ಈ ದೇಶದಲ್ಲಿ ಕಾರ್ಯಾಚರಿಸುತ್ತಿದೆ. ಅದರಲ್ಲೂ ಕಳೆದ 75 ವರ್ಷಗಳಿಂದ ಈ ದೇಶದ ಸಂವಿಧಾನದ ಅಡಿಯಲ್ಲೇ ಕಾರ್ಯಾಚರಿಸುತ್ತಿದೆ. ಗಾಂಧಿ ಹತ್ಯೆಯ ಕ್ಷುಲ್ಲಕ ಕಾರಣವೊಡ್ಡಿ ನೆಹರೂರವರು ಆರೆಸ್ಸೆಸ್ ನಿಷೇಧ ಹೇರಿದ್ದರಾದರೂ ಬಳಿಕ ಆರೆಸ್ಸೆಸ್‌ನ ಕಾರ್ಯವಿಧಾನ ಹಾಗೂ ಇನ್ನಿತರ ಚಟುವಟಿಕೆಗಳ ಅರಿವಾದ ಬಳಿಕ ಸರಕಾರವು ನಿಷೇಧ ಹಿಂತೆಗೆದುಕೊಂಡಿತ್ತು.



ಆರೆಸ್ಸೆಸ್ ದೇಶದ ಸಂವಿಧಾನ ಮತ್ತು ಕಾನೂನಿನಡಿಯಲ್ಲಿಯೇ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. 1963ರಲ್ಲಿ ನೆಹರೂ ಕಾಲಾವಧಿಯಲ್ಲೇ ಸಂಘವು ಗಣರಾಜ್ಯ ಪರೇಡ್‌ನಲ್ಲಿ ಭಾಗವಹಿಸಿತ್ತು. 1965ರ ಯುದ್ಧದ ಸಮಯದಲ್ಲಿ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಆರೆಸ್ಸೆಸ್ ಸರಸಂಘಚಾಲಕ ಶ್ರೀ ಗುರೂಜಿ ಅವರನ್ನು ಸಮಾಲೋಚನೆಗೆ ಕರೆಸಿಕೊಂಡಿದ್ದರು. 1973ರಲ್ಲಿ ಶ್ರೀ ಗುರೂಜಿಯವರು ತೀರಿಕೊಂಡಾಗ ಪ್ರಧಾನಿ ಇಂದಿರಾಗಾಂಧಿಯವರು ಸಂಸತ್ತಿನಲ್ಲಿ ಅವರಿಗೆ ಗೌರವ ಸಲ್ಲಿಸುತ್ತಾ, ''ನಾವು ದೇಶದ ಮಹಾನೀಯ ವ್ಯಕ್ತಿತ್ವದವರಾದ ಗೋಳ್ವಾಲ್ಕರ್‌ರನ್ನು ಕಳೆದುಕೊಂಡಿದ್ದೇವೆ. ತಮ್ಮ ವ್ಯಕ್ತಿತ್ವ ಮತ್ತು ತಮ್ಮ ಧ್ಯೇಯದಿಂದ ಅವರು ಗೌರವಾದರ ಹೊಂದಿದವರಾಗಿದ್ದಾರೆ'' ಎಂದು ಹೇಳಿದ್ದರು. ಈ ಪ್ರಧಾನಿಗಳಾರೂ ಆರೆಸ್ಸೆಸ್ ಏಕೆ ನೋಂದಣಿ ಮಾಡಿಕೊಂಡಿಲ್ಲವೆಂದು ಪ್ರಶ್ನಿಸಿರಲಿಲ್ಲ.

1961ರ ಆದಾಯ ತೆರಿಗೆ ಕಾಯ್ದೆಯಡಿಯಲ್ಲಿ ಆರೆಸ್ಸೆಸ್ಸನ್ನು ''Body of Individuals' ಎಂಬುದಾಗಿ ಮಾನ್ಯ ಮಾಡಲಾಗಿದೆ. ಕಂಪೆನಿಯಲ್ಲದ, ಸಾರ್ವಜನಿಕ ಟ್ರಸ್ಟ್ ಅಲ್ಲದ ಅಥವಾ ನೋಂದಾಯಿತ ಟ್ರಸ್ಟ್ ಅಲ್ಲದ 'ಅನೌಪಚಾರಿಕ ನಾಗರಿಕರ ಸಂಘಟನೆ' ಎಂದಿದರ ಅರ್ಥ. ಆರೆಸ್ಸೆಸ್ ತನ್ನ ದೇಣಿಗೆ ಸಂಗ್ರಹದ ಮಾದರಿಗೆ ಕೂಡ ವಿವರಣೆ ಹೊಂದಿದೆ. ಪ್ರತಿವರ್ಷ ವ್ಯಾಸಪೂರ್ಣಿಮೆಯ ದಿನದಂದು ಅಥವಾ ಇನ್ನಾವುದೋ ನಿರ್ದಿಷ್ಟ ಪವಿತ್ರ ದಿನದಂದು 'ದಕ್ಷಿಣೆ ದಿನ'ವನ್ನು ಆಚರಿಸಲಾಗುವುದು ಹಾಗೂ ಸ್ವಯಂಸೇವಕರು ಸ್ವಯಂಪ್ರೇರಿತವಾಗಿ ಸಲ್ಲಿಸುವ ದಕ್ಷಿಣೆಯನ್ನು ಸ್ವೀಕರಿಸುವುದು ಎಂದು ಹೇಳಲಾಗಿದೆ. ಹೀಗೆ ಸ್ವಯಂಪ್ರೇರಿತವಾಗಿ ದಕ್ಷಿಣೆ ನೀಡುವುದನ್ನು 'ಗುರುದಕ್ಷಿಣೆ' ಎಂದು ಕರೆಯಲಾಗುತ್ತಿದ್ದು ಆದಾಯ ತೆರಿಗೆ ಕಾನೂನಿನ 'mutuality' ಕಲಮಿನಡಿ ಬರುತ್ತದೆ. mutuality ತತ್ವದ ಪ್ರಕಾರ ಕೆಲವು ವ್ಯಕ್ತಿಗಳ ಗುಂಪೊಂದು ಸಾಮಾನ್ಯ ಉದ್ದೇಶಕ್ಕೆ ಹಣ ಸಂಗ್ರಹಿಸಿದರೆ ಹಾಗೂ ಇಂಥ ಹಣವನ್ನು ಯಾವುದೇ ವಾಣಿಜ್ಯಕ ಉದ್ದೇಶಕ್ಕೆ ಬಳಸಲು ಯೋಜಿಸದಿದ್ದರೆ ಈ ಆದಾಯವು ತೆರಿಗೆ ವ್ಯಾಪ್ತಿಗೆ ಬರುವುದಿಲ್ಲ. ಈ mutuality ತತ್ವದ ಆಧಾರದಲ್ಲಿ ಕೇಂದ್ರೀಯ ನೇರ ತೆರಿಗೆ ಮಂಡಳಿಯು ತನ್ನ ಆದೇಶವೊಂದರಲ್ಲಿ ''ಸ್ವಯಂಸೇವಕರಿಂದ ಗುರುದಕ್ಷಿಣೆಯ ಮೂಲಕ ಸಂಗ್ರಹಿಸಲಾದ ಹಣದ ಮೇಲೆ ತೆರಿಗೆ ವಿಧಿಸುವಂತಿಲ್ಲ'' ಎಂದು ಹೇಳಿದೆ. 1994ರ ಪ್ರಕರಣವೊಂದರಲ್ಲಿ ಪಾಟ್ನಾ ಹೈಕೋರ್ಟ್ ಕೂಡಾ ಕೇಂದ್ರೀಯ ನೇರ ತೆರಿಗೆ ಮಂಡಳಿಯ ಆದೇಶವನ್ನು ಎತ್ತಿ ಹಿಡಿದಿದೆ.

ಹಲವಾರು ಧಾರ್ಮಿಕ ಮತ್ತು ಇನ್ನಿತರ ಸಂಘಟನೆಗಳು ಈ ದೇಶದಲ್ಲಿ ನೋಂದಣಿಯಾಗಿದ್ದರೂ ಮುಕ್ತವಾಗಿ ಕಾರ್ಯಾಚರಿಸುತ್ತಿವೆ. ಆರೆಸ್ಸೆಸ್‌ಗೆ ಸಂಬಂಧಿಸಿ ಹೇಳುವುದಾದರೆ, ಪ್ರಮುಖ ವ್ಯಕ್ತಿಗಳ ಗುಂಪು ಹೊರತುಪಡಿಸಿ ಉಳಿದಂತೆ ಎಲ್ಲಾ ಚಟುವಟಿಕೆಗಳು (ಅದರ ಆಸ್ಪತ್ರೆ, ಶಾಲೆ, ಸ್ವಯಂಸೇವಾ ಸಂಘಟನೆಗಳು ಮತ್ತು ಪರಿವಾರ ಸಂಘಟನೆಗಳು) ಸೂಕ್ತವಾದ ನೋಂದಾಯಿತ ಟ್ರಸ್ಟ್ ಮತ್ತು ಸಂಘಟನೆಗಳ ಮೂಲಕವೇ ಕಾರ್ಯಾಚರಿಸಲ್ಪಡುತ್ತವೆ. ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ಉದ್ದೇಶದಿಂದ 1925ರಲ್ಲಿ ಆರೆಸ್ಸೆಸ್ ಸ್ಥಾಪನೆಯಾಯಿತು. ಆಗ ವಿದೇಶಿ ಸರಕಾರದಡಿಯಲ್ಲಿ ನೋಂದಣಿ ಮಾಡಿಕೊಳ್ಳುವ ಪ್ರಶ್ನೆಯೇ ಬರಲಿಲ್ಲ, ಸ್ವಾತಂತ್ರ್ಯಾನಂತರದಲ್ಲಿ ಭಾರತೀಯ ಕಾನೂನಿನ ಪ್ರಕಾರ ಸಂಘವು ನೋಂದಣಿರಹಿತ ಸಂಘಟನೆಯಾಗಿಯೇ ಕಾರ್ಯಾಚರಿಸಿಕೊಂಡು ಬಂದಿದೆ. ಇದನ್ನು ಈವರೆಗಿನ ಎಲ್ಲಾ ಸರಕಾರಗಳೂ ಮಾನ್ಯ ಮಾಡಿವೆ. ಈಗ ಯಾರಾದರೂ ಈ ಕುರಿತಂತೆ ಪ್ರಶ್ನೆ ಎತ್ತುತ್ತಿದ್ದಾರೆಂದರೆ ಒಂದೋ ಅದು ಅವರ ಅಜ್ಞಾನದಿಂದ ಅಥವಾ ರಾಜಕೀಯ ದುರುದ್ದೇಶದಿಂದ.

ಕಿರುಸುದ್ದಿ

ರೈತರಿಂದ ಅರ್ಜಿ ಆಹ್ವಾನ

• **ದೊಡ್ಡಬಳ್ಳಾಪುರ:** ಕೃಷಿ ಇಲಾಖೆ ವತಿಯಿಂದ 2026–27ನೇ ಸಾಲಿನ ಸಿರಿಧಾನ್ಯಗಳಲ್ಲಿ ಆತ್ಮನಿರ್ಭರತೆ ಅಭಿಯಾನ ಯೋಜನೆಯಡಿ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಸಂಸ್ಕರಣಾ ಮತ್ತು ಪ್ಯಾಕೇಜಿಂಗ್ ಘಟಕವನ್ನು ಸ್ಥಾಪಿಸಲು ಅರ್ಹ ರೈತರಿಂದ ಹಾಗೂ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸಿರಿಧಾನ್ಯಗಳ ಸಂಸ್ಕರಣಾ ಘಟಕಗಳ ಸ್ಥಾಪನೆಯ ಮೂಲಕ ಕೊಯ್ಲಿನ ನಂತರದ ಮೂಲಸೌಕರ್ಯವನ್ನು ಬಲಪಡಿಸುವ ಮೂಲಕ ಮೌಲ್ಯವರ್ಧನೆಯನ್ನು ಹೆಚ್ಚಿಸಲು ಮತ್ತು ರೈತರ ಲಾಭದಾಯಕತೆ ಸುಧಾರಿಸುವುದು ಇದರ ಮೂಲ ಉದ್ದೇಶವಾಗಿದೆ. ರೈತರಿಗೆ ಯೋಜನಾ ವೆಚ್ಚದ ಶೇ.33ರಷ್ಟು (25 ಲಕ್ಷಗಳ ಗರಿಷ್ಠ ಮಿತಿಯೊಂದಿಗೆ) ಸಹಾಯಧನ ನೀಡಲಾಗುವುದು. ಅರ್ಥಿಕ ನೆರವು ಪಡೆಯಲು ಬ್ಯಾಂಕ್ ಸಾಲ ಕಡ್ಡಾಯವಾಗಿರುತ್ತದೆ. ಅರ್ಜಿ ಫಲಾನುಭವಿಗಳು ಕನಿಷ್ಠ 21 ವರ್ಷ ವಯೋಮಿತಿಯನ್ನು ಹೊಂದಿರಬೇಕು. ಯೋಜನಾ ವೆಚ್ಚದ ಶೇ.15ರಷ್ಟು ಸ್ವಂತ ಹೂಡಿಕೆಯನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುವ ಆಸಕ್ತರು ಅರ್ಜಿ ಸಲ್ಲಿಸಬಹುದು, ಜುಲೈ 24 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕು ಇವರನ್ನು ಸಂಪರ್ಕಿಸಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಖಾನೆಯಲ್ಲಿ ಆಕಸ್ಮಿಕ ಬೆಂಕಿ: ಅಪಾರ ನಷ್ಟ

• **ದೊಡ್ಡಬಳ್ಳಾಪುರ:** ತಾಲೂಕಿನ ಬಾಶೆಟ್ಟಿಹಳ್ಳಿ ಸಮೀಪದ ಕ್ಯಾಕ್ಟರಿ ಸರ್ಕಲ್ ಬಳಿ, ಕಾರ್ಖಾನೆಯೊಂದರಲ್ಲಿ ಅಗ್ನಿ ಅವಘಡ ಸಂಭವಿಸಿದೆ. ದೊಡ್ಡಬಳ್ಳಾಪುರ–ಬೆಂಗಳೂರು ನಡುವಿನ ರಾಜ್ಯ ಹೆದ್ದಾರಿ ಕ್ಯಾಕ್ಟರಿ ಸರ್ಕಲ್ ಬಳಿಯ ಖಾಸಗಿ ಕೆಮಿಕಲ್ ಕಾರ್ಖಾನೆಗೆ ಬೆಂಕಿ ತಗುಲಿದ್ದು, ವ್ಯಾಪಕವಾಗಿ ಹರಡಿದೆ. ಸುಮಾರು 20 ನಿಮಿಷಗಳ ಹಿಂದೆ ಬೆಂಕಿ ತಗುಲಿದ್ದು, ಕೆಮಿಕಲ್ ಡಬ್ಬಗಳು ಸ್ಫೋಟಗೊಂಡು ಅಪಾರ ನಷ್ಟ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದ್ದು, ಅಗ್ನಿ ಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಬೆಂಕಿ ವ್ಯಾಪಿಸದಂತೆ ನಂದಿಸಲು ಶ್ರಮಿಸಿದರು.

ಮಾದಕವಸ್ತುಗಳ ಬಗ್ಗೆ ಅರಿವು

• **ಆನೇಕಲ್:** ಇಂದಿನ ಯುವ ಪೀಳಿಗೆಯು ಮಾದಕ ವಸ್ತುಗಳ ದಾಸರಾಗುವುದನ್ನು ತಡೆಗಟ್ಟುವ ಮತ್ತು ಸಾರ್ವಜನಿಕ ಸುರಕ್ಷತೆ ಕಾಪಾಡುವ ನಿಟ್ಟಿನಲ್ಲಿ ಆನೇಕಲ್ ಪಟ್ಟಣದ ಶ್ರೀ ವಾಣಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯಗಳ ಕುರಿತು ವಿಶೇಷ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆನೇಕಲ್ ಪೊಲೀಸ್ ಠಾಣೆಯ ಪಿಎಸ್ಐ ಮುನಿರತ್ನ ಮಾತನಾಡಿ, ಮಾದಕ ವಸ್ತುಗಳ ಬಳಕೆ ಕೇವಲ ಆರೋಗ್ಯವನ್ನು ಮಾತ್ರವಲ್ಲದೆ ಉಜ್ವಲವಾದ ಭವಿಷ್ಯ ಮತ್ತು ಇಡೀ ಕುಟುಂಬವನ್ನು ನಾಶಪಡಿಸುತ್ತದೆ. ವಿದ್ಯಾರ್ಥಿಗಳು ಇಂತಹ ವ್ಯಸನಗಳಿಂದ ದೂರವಿದ್ದು, ತಮ್ಮ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಬೇಕು. ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ದೇಶ ಅಭಿವೃದ್ಧಿಗೆ ಕೊಡುಗೆ ನೀಡಬೇಕು, ಇನ್ನು ಮಾದಕ ದ್ರವ್ಯ ಜಾಲದ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ ತಕ್ಷಣ ಪೊಲೀಸರಿಗೆ ತಿಳಿಸಬೇಕು ಎಂದು ಕರೆ ನೀಡಿದರು. ಕಾಲೇಜಿನ ನಿರ್ದೇಶಕರಾದ ಚಂದ್ರಶೇಖರ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಇಂತಹ ಕಾರ್ಯಕ್ರಮಗಳು ಅತ್ಯಂತ ಅವಶ್ಯಕವಾಗಿದ್ದು, ಪೊಲೀಸ್ ಇಲಾಖೆಯ ಈ ಕ್ರಮ ಶ್ಲಾಘನೀಯ ಎಂದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಪ್ರೊಬೇಷನರಿ ಪಿಎಸ್ಐ ಈರಯ್ಯ ಪೂಜಾರ್, ಹೆಚ್.ಸಿ.ಗಳಾದ ನಂಜುಂಡಸ್ವಾಮಿ, ಕುಮಾರ್, ರಾಘವೇಂದ್ರ, ವಿಶ್ವಮೂರ್ತಿ ಹಾಗೂ 112 ತುರ್ತು ವಾಹನದ ಪಿಸಿಗಳಾದ ವಿಠ್ಠಲ್ ಮತ್ತು ರಾಕೇಶ್ ಹಾಗೂ ಕಾರ್ಯಕ್ರಮದಲ್ಲಿ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಜ್ಯೋತಿ ಆರ್. ಸೇರಿದಂತೆ ಕಾಲೇಜಿನ ಇತರೆ ಉಪನ್ಯಾಸಕರು ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿ ಜಾಗೃತಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

ಕಟ್ಟಡ ನಿರ್ಮಾಣದಲ್ಲಿ ರಾಜೀ ಇಲ್ಲ

• **ಬೆಂಗಳೂರು:** ಪೊಲೀಸ್ ಇಲಾಖೆ ಹಾಗೂ ಇತರೆ ಇಲಾಖೆಗಳಿಗಾಗಿ ನಿರ್ಮಾಣ ಮಾಡುತ್ತಿರುವ ವಸತಿ ಮತ್ತು ಕಚೇರಿ ಕಟ್ಟಡಗಳ ಗುಣಮಟ್ಟದಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೆ, ಅತ್ಯುತ್ತಮ ಗುಣಮಟ್ಟದೊಂದಿಗೆ ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಗೃಹಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸೋಮವಾರ ನಡೆದ ಕರ್ನಾಟಕ ರಾಜ್ಯ ಪೊಲೀಸ್ ಗೃಹ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಇಲಾಖೆಯ ಸಿಬ್ಬಂದಿಗಳ ಮಕ್ಕಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಮತ್ತು ಯಶಸ್ಸು ಸಾಧಿಸಲು ಅಗತ್ಯವಿರುವ ಮಾರ್ಗದರ್ಶನ ಹಾಗೂ ಸೌಲಭ್ಯಗಳನ್ನು ಒದಗಿಸುವಂತೆ ನಿರ್ದೇಶನ ನೀಡಿದರು.

ಪೊಲೀಸ್ ಗೃಹ–2025 ಯೋಜನೆ: ಪೊಲೀಸ್ ಸಿಬ್ಬಂದಿಗಳ ವಸತಿ ಸೌಲಭ್ಯಕ್ಕಾಗಿ ಹಮ್ಮಿಕೊಳ್ಳಲಾಗಿರುವ 2 ಸಾವಿರ ಕೋಟಿ ರೂ. ಬಜೆಟ್ ಪೊಲೀಸ್ ಗೃಹ–2025ರ ಯೋಜನೆಯ ಅಡಿ ಒಟ್ಟು 10,034 ವಸತಿ ಗೃಹಗಳನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ ಈಗಾಗಲೇ 3,496 ವಸತಿ ಗೃಹಗಳ ನಿರ್ಮಾಣ ಪೂರ್ಣಗೊಂಡಿದೆ ಹಾಗೂ 2,030 ಗೃಹಗಳ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಮೂಲಸೌಕರ್ಯ ಅಭಿವೃದ್ಧಿ: ಬೆಂಗಳೂರಿನಲ್ಲಿ ಅತ್ಯಾಧುನಿಕ ಕೇಂದ್ರ ಕಮಾಂಡ್ ಸೆಂಟರ್ ನಿರ್ಮಾಣ ಕಾರ್ಯ ಅಂತಿಮ ಹಂತ ತಲುಪಿದ್ದು, ಶೀಘ್ರದಲ್ಲೇ ಲೋಕಾರ್ಪಣೆಗೆ ಸಿದ್ಧವಾಗುತ್ತಿದೆ. ಇದರೊಂದಿಗೆ ವಿವಿಧ ಜಿಲ್ಲೆಗಳಲ್ಲಿ ಹೊಸ ಪೊಲೀಸ್ ಠಾಣೆಗಳು, ಡಿಪಿಒ ಕಚೇರಿಗಳು ಮತ್ತು ಎಫ್ಎಸ್ಎಲ್ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಯುವಕರಿಗೆ ಎಚ್ಚರಿಕೆ ಸಂದೇಶ | ತಾಲೂಕಿನ ವಿವಿಧ ಶಾಲೆಗಳಲ್ಲಿ ಪೊಲೀಸ್ ಜಾಗೃತಿ ಅಭಿಯಾನ

ಮಾದಕ ಜಾಲದ ವಿರುದ್ಧ ಪೊಲೀಸ್ ಕಹಳೆ

• **ದೊಡ್ಡಬಳ್ಳಾಪುರ:** ಮಾದಕ ವಸ್ತುಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ದೊಡ್ಡಬಳ್ಳಾಪುರ ತಾಲೂಕಿನ ವಿವಿಧ ಪೊಲೀಸ್ ಠಾಣೆಗಳ ಪೊಲೀಸರು ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದ್ದಾರೆ.

ದೊಡ್ಡಬಳ್ಳಾಪುರ ನಗರ, ಗ್ರಾಮಾಂತರ ಪೊಲೀಸ್ ಠಾಣೆ ವತಿಯಿಂದ ಖಾಸಗಿ ಕಾಲೇಜುಗಳಲ್ಲಿ, ದೊಡ್ಡಬೆಳವಂಗಲ ಪೊಲೀಸ್ ಠಾಣೆಯಿಂದ ದೊಡ್ಡಬೆಳವಂಗಲ ಸರ್ಕಾರಿ ಪಬ್ಲಿಕ್ ಶಾಲೆಯಲ್ಲಿ ಹಾಗೂ ಹೊಸಹಳ್ಳಿ ಪೊಲೀಸ್ ಠಾಣೆಯಿಂದ ಆರೂಢಿಯ ಅರವಿಂದ ಪ್ರೌಢಶಾಲೆಯಲ್ಲಿ ಜಾಗೃತಿ ಅಭಿಯಾನ ನಡೆಯಿತು.

ಖಾಸಗಿ ಕಾಲೇಜಿನಲ್ಲಿ ನಡೆದ ಜಾಗೃತಿ ಅಭಿಯಾನದಲ್ಲಿ ಮಾತನಾಡಿದ ಡಿವೈಎಸ್ಪಿ ಪಾಂಡುರಂಗ, ಯುವಜನರು ಮಾದಕ ವಸ್ತುಗಳ ದುಶ್ಚಟಕ್ಕೆ ಒಳಗಾಗದಂತೆ ಎಚ್ಚರಿಕೆ ನೀಡುವ ಜೊತೆಗೆ, ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಣಿಕೆಯನ್ನು ತಡೆಯಲು ವಿದ್ಯಾರ್ಥಿಗಳ ಸಹಕಾರ ಕೋರಿದರು.

ಮಾದಕ ವಸ್ತುಗಳ ಸೇವನೆಯಿಂದ ವ್ಯಕ್ತಿಯ ಆರೋಗ್ಯ, ಕುಟುಂಬ ಜೀವನ ಹಾಗೂ ಸಾಮಾಜಿಕ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವಕರು ಇಂತಹ ದುಶ್ಚಟಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಿರುವ ಹಿನ್ನೆಲೆಯಲ್ಲಿ, ಪೊಲೀಸ್ ಇಲಾಖೆ ಶಾಲಾ–ಕಾಲೇಜುಗಳು, ಸಾರ್ವಜನಿಕ ಸ್ಥಳಗಳು ಹಾಗೂ ವಿವಿಧ ಸಮುದಾಯಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅಭಿಯಾನದ ಭಾಗವಾಗಿ ಪೊಲೀಸರು ಸಾರ್ವಜನಿಕರಿಗೆ ಮಾದಕ ವಸ್ತುಗಳ ಅಪಾಯಗಳ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ.



ಗಾಂಜಾ, ಡ್ರಗ್ಸ್, ನಿಷೇಧಿತ ಮಾತ್ರೆಗಳು ಸೇರಿದಂತೆ ವಿವಿಧ ಮಾದಕ ವಸ್ತುಗಳ ಬಳಕೆಯಿಂದ ಉಂಟಾಗುವ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳ ಕುರಿತು ಅರಿವು ಮೂಡಿಸಲಾಗುತ್ತಿದೆ. ಮಾದಕ ವಸ್ತುಗಳ ಸೇವನೆಯಿಂದ ಯುವಕರಲ್ಲಿ ಏಕಾಗ್ರತೆ ಕಡಿಮೆಯಾಗುವುದು, ಆರೋಗ್ಯ ಹದಗೆಡುವುದು, ಅಪರಾಧ ಚಟುವಟಿಕೆಗಳಿಗೆ ತೊಡಗುವ ಸಾಧ್ಯತೆ ಹೆಚ್ಚಾಗುವುದು ಸೇರಿದಂತೆ ಹಲವು ದುಷ್ಪರಿಣಾಮಗಳು ಉಂಟಾಗುತ್ತವೆ. ಪಾಲಕರು ತಮ್ಮ ಮಕ್ಕಳ ಚಟುವಟಿಕೆಗಳ ಮೇಲೆ ಗಮನಹರಿಸುವಂತೆ ಹಾಗೂ ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಸಾರ್ವಜನಿಕರ ಸಹಕಾರ: ಇನ್ಸ್‌ಪೆಕ್ಟರ್ ಎಂ.ಬಿ.ನವೀನ್ ಕುಮಾರ್, ಅಮರೇಶ್ ಗೌಡ, ಕಲ್ಲಪ್ಪ ಎಸ್. ಕರಾತ, ಮುತ್ತುರಾಜ್ ಮಾತನಾಡಿ, ಮಾದಕ ವಸ್ತುಮುಕ್ತ ಸಮಾಜ ನಿರ್ಮಾಣಕ್ಕೆ ಕೇವಲ ಪೊಲೀಸ್ ಇಲಾಖೆಯ ಪ್ರಯತ್ನ ಸಾಕಾಗುವುದಿಲ್ಲ, ಸಾರ್ವಜನಿಕರು, ಪಾಲಕರು, ಶಿಕ್ಷಕರು ಹಾಗೂ ಯುವಕರು ಒಟ್ಟಾಗಿ ಕೈಜೋಡಿಸಬೇಕು. ಮಾದಕ ವಸ್ತುಗಳ ಮಾರಾಟ ಅಥವಾ ಬಳಕೆಯ ಬಗ್ಗೆ ಮಾಹಿತಿ ದೊರೆತರೆ ಕೂಡಲೇ ಪೊಲೀಸರಿಗೆ ತಿಳಿಸಬೇಕು ಎಂದು ಹೇಳಿದರು.

ಜಾಗೃತಿ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳಿಂದ ದೂರ ಉಳಿಯುವ ಕುರಿತು ಪ್ರತಿಜ್ಞೆ ಮಾಡಿಸಲಾಗುತ್ತಿದೆ. ಆರೋಗ್ಯಕರ ಜೀವನಶೈಲಿ, ಕ್ರೀಡೆ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಯುವಕರಿಗೆ ಸಲಹೆ ನೀಡಲಾಗುತ್ತಿದೆ. ಇದೇ ವೇಳೆ ಪೊಲೀಸರು ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಣಿಕೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ಕಾನೂನು ಬಾಹಿರವಾಗಿ ಮಾದಕ ವಸ್ತುಗಳನ್ನು ಮಾರಾಟ ಮಾಡುವವರು ಅಥವಾ ಸಾಗಿಸುವವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ. ಸಮಾಜದಲ್ಲಿ ಮಾದಕವಸ್ತುಗಳ ಹಾವಳಿ ಕಡಿಮೆ ಮಾಡಲು ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ಈ ಅಭಿಯಾನವು ಯುವಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೂ ಮಾದಕವಸ್ತುಮುಕ್ತ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ

ಮಾದಕ ವಸ್ತುಗಳ ವಿರುದ್ಧದ ಹೋರಾಟದಲ್ಲಿ ಸಾರ್ವಜನಿಕರ ಸಹಭಾಗಿತ್ವವೇ ಪ್ರಮುಖ ಶಕ್ತಿಯಾಗಿದ್ದು, ಪ್ರತಿಯೊಬ್ಬರೂ ಎಚ್ಚರಿಕೆಯಿಂದ ನಡೆದುಕೊಂಡು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಪೊಲೀಸರು ಕರೆ ನೀಡಿದರು.

ಬಹುಮಾನ ವಿತರಣೆ

ಹೊಸಹಳ್ಳಿ ಠಾಣಾ ವ್ಯಾಪ್ತಿಯ ಆರೂಢಿ ಅರವಿಂದ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದ್ದ ಮಾದಕ ದ್ರವ್ಯದ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ಪೋಕ್ಸೋ ಹಾಗೂ ಮೋಟಾರು ವಾಹನ ಕಾಯ್ದೆ ಬಗ್ಗೆ ಅರಿವು ಕಾರ್ಯಕ್ರಮ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ವೇಳೆ ವಿಜೇತ ಆದ ವಿದ್ಯಾರ್ಥಿಗಳಿಗೆ ಇನ್ಸ್‌ಪೆಕ್ಟರ್ ಅಮರೇಶ್ ಗೌಡ ಅವರು ಬಹುಮಾನ ವಿತರಿಸಿದರು. ಈ ವೇಳೆ ಮುಖ್ಯ ಶಿಕ್ಷಕ ಸುದರ್ಶನ್ ಬಾಬು ಇದ್ದರು.

ವಿಶೇಷ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ



• **ದೊಡ್ಡಬಳ್ಳಾಪುರ:** ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಹಾಡೋನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡತುಮಕೂರು ಗ್ರಾಮದ ಚನ್ನಕೇಶವ ದೇವಾಲಯದ ಕಲ್ಯಾಣಿ ಹತ್ತಿರ ವಿಶೇಷ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಾಸಂತಿ ಅಮರ್, ಯೋಜನಾ ನಿರ್ದೇಶಕ ವಿಠಲ ಕಾವಳೆ, ಸಹಾಯಕ ಯೋಜನಾಧಿಕಾರಿ ರವೀಂದ್ರ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ಮುಂಜುನಾಥ ಹರ್ತಿ ಅವರ ನೇತೃತ್ವದಲ್ಲಿ ಅಭಿಯಾನ ನಡೆಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಆವರಣದಲ್ಲಿನ ಬ್ಲಾಕ್‌ಸ್ಪಾಟ್‌ನಲ್ಲಿ ಕಸ ತೆರವುಗೊಳಿಸಲಾಯಿತು ಮತ್ತು ಕಲ್ಯಾಣಿ ಸ್ವಚ್ಛತೆ ಮಾಡಲಾಯಿತು ಹಾಗೂ ಸ್ವಚ್ಛತಾ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ಬೀದಿ ನಾಟಕ ನಡೆಸುವ ಮೂಲಕ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲಾಯಿಗೆ. ಹಾಡೋನಹಳ್ಳಿ ಗ್ರಾಮದಲ್ಲಿನ ಅಂಗಡಿ ಮಳಿಗೆ ಹಾಗೂ ಹೋಟೆಲ್ ಗಳ ಮಾಲೀಕರಿಗೆ ಹಾಗೂ ಸಾರ್ವಜನಿಕರಿಗೆ ಏಕ ಬಳಕೆ ಪ್ಲಾಸ್ಟಿಕ್ ಬಳಸದಂತೆ ಕರಪತ್ರ ವಿತರಿಸಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಪಿಡಿಒ ಆಯೇಷಾ, ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯರು, ಹಾಡೋನಹಳ್ಳಿ ಪ್ರೌಢಶಾಲಾ ಶಿಕ್ಷಕರು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು, ಸಾರ್ವಜನಿಕರು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿ



• **ದೇವನಹಳ್ಳಿ:** ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕುಂದಾಣ ಗ್ರಾಮ ಪಂಚಾಯಿತಿಯಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಜಿ.ಪಂ. ಉಪ ಕಾರ್ಯದರ್ಶಿ ಶಿವಕುಮಾರ್ ಚಾಲನೆ ನೀಡಿದರು.

ಸ್ವಚ್ಛತಾ ಕಾರ್ಯದಲ್ಲಿ ದೇವನಹಳ್ಳಿ ತಾ.ಪಂ. ಮುನಿರಾಜು ಪಾಲ್ಗೊಂಡಿದ್ದರು.

ಶಿವಕುಮಾರ್ ಮಾತನಾಡಿ, ಹಸಿ ಕಸ, ಒಣ ಕಸ ಸಂಗ್ರಹ ಮಾಡಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ವಚ್ಛತಾ ಸಿಬ್ಬಂದಿಗೆ ಸೂಚಿಸಿದರು. ಪ್ರತಿ ಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ಸ್ವಚ್ಛತಾ ವಾಹನ ಕಳಿಸಿ ಒಣ ಕಸ, ಹಸಿ ಕಸ ಸಂಗ್ರಹ ಮಾಡಿ ವಿಲೇವಾರಿ ಮಾಡಬೇಕು ಹಾಗೂ ಸಾರ್ವಜನಿಕರಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಬೇಕು. ಊಯುಊ ಬಳಕೆ ಕುರಿತು ಪ್ರತಿ ಗ್ರಾಮಗಳಲ್ಲಿ ಕರಪತ್ರ ಹಾಗೂ ಸ್ವಚ್ಛತಾ ವಾಹಿನಿ ಮೂಲಕ ಜಾಗೃತಿ ಮೂಡಿಸಿ, ಸ್ವೈಪಿಂಗ್ ಯಂತ್ರ ಬಳಸುವಂತೆ ಸಲಹೆ ನೀಡಿದರು. ಅಂಗಡಿಗಳಿಗೆ ಪ್ಲಾಸ್ಟಿಕ್ ನಿಷೇಧ ಕುರಿತು ನೋಟಿಸ್ ನೀಡಲು ತಿಳಿಸಿದರು. ಸ್ವಚ್ಛತೆ ಬಗ್ಗೆ ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರಗಳನ್ನು ಅಂಟಿಸಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಕುಮಾರ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿ. SDA, DEO ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಯೋಗ ಒಂದು ದಿನಕ್ಕೆ ಸೀಮಿತವಾಗದಿರಲಿ

• **ದೇವನಹಳ್ಳಿ:** ಯೋಗಾಭ್ಯಾಸ ಒಂದು ದಿನಕ್ಕೆ ಸೀಮಿತ ಬೇಡ, ನಮ್ಮ ಜೀವನದಲ್ಲಿ ದಿನಂಪ್ರತಿ ಯೋಗಾಭ್ಯಾಸ ಅಳವಡಿಸಿ ಕೊಳ್ಳಬೇಕು. ಇದರಿಂದ ದೈಹಿಕ ಸದೃಢ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸಿಕೊಳ್ಳಲು ಸಾಧ್ಯವಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್.ಅನುರಾಧ ಅವರು ತಿಳಿಸಿದರು.



ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಕಚೇರಿ ಇವರ ವತಿಯಿಂದ ದೇವನಹಳ್ಳಿ ಟೌನ್ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ವಿವಿಧ ಯೋಗಾಸನ ಮಾಡುವ ಮೂಲಕ ಜಿಲ್ಲಾಧಿಕಾರಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿ ಯೋಗಾಭ್ಯಾಸ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಮಾಡಿಕೊಳ್ಳಬೇಕು. ನಮ್ಮ ಇಂದಿನ ಆರೋಗ್ಯವೇ ವೃದ್ಧಾಪ್ಯ ಜೀವನದವರೆಗೂ ಉತ್ತಮವಾಗಿ ಇರಿಸಿಕೊಳ್ಳಲು ಪ್ರತಿನಿತ್ಯ ಬೆಳಿಗ್ಗೆ ಒಂದು ಗಂಟೆ ಯೋಗಾಭ್ಯಾಸಕ್ಕಾಗಿ ಸಮಯ ಮೀಸಲಿಡಬೇಕು. ಇದರೊಂದಿಗೆ ನಮ್ಮ ಮುಂದಿನ ಪೀಳಿಗೆಗೂ ಯೋಗಾಭ್ಯಾಸ ಹೇಳಿಕೊಟ್ಟು ಒಳ್ಳೆಯ ಆರೋಗ್ಯ ಕಾಪಾಡಿ ಕೊಳ್ಳಲು ಅರಿವು ಮೂಡಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಿವ ಕುಮಾರ್, ಜಿಲ್ಲಾ ಆಯುಷ್ ಅಧಿಕಾರಿ ಕೆ.ಟಿ ಅಶ್ವಿನಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರೋಗ್ಯಾಧಿಕಾರಿ ಲಕ್ಷ್ಮೀ ಕೃಷ್ಣ ರೆಡ್ಡಿ, ಜಿಲ್ಲಾ ಯೋಜನಾ ನಿರ್ದೇಶಕ ವಿಠಲ್ ಕಾವ್ಳೆ, ದೇವನಹಳ್ಳಿ ತಹಸೀಲ್ದಾರ್ ಅನಿಲ್, ಆಯುಷ್ ವೈದ್ಯಾಧಿಕಾರಿಗಳಾದ ಡಾ. ಮುದ್ದಿಯಾ ತಸ್ಕೀನ್, ಡಾ. ವಿಜಯಲಕ್ಷ್ಮಿ, ಡಾ. ಲಲಿತಾ, ಡಾ. ಸೈಯದ್ ಮುಷ್ತಾಕ್, ಡಾ. ಲಕ್ಷ್ಮೀ ಚರಿತ, ಡಾ. ಸೋಮಶೇಖರ್, ಡಾ. ಹನುಮಂತರೆಡ್ಡಿ, ಡಾ. ಅಂಜನಾ, ಡಾ. ಶೈಲಜ, ಅಧೀಕ್ಷಕರಾದ ರಾಘವೇಂದ್ರ ಮುಖ್ಯಾಧಿಕಾರಿ ಶಿವಮೂರ್ತಿ, ಮಾಜಿ ಪುರಸಭಾ ಅಧ್ಯಕ್ಷೆ ರೇಖಾ, ಪೊಲೀಸ್ ಲೋಕೇಶ್, ಶ್ರೀನಿವಾಸ್, ವೆಂಕಟೇಶ್, ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿಗಳು, ಯೋಗ ತರಬೇತಿದಾರರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗಿಯಾಗಿದ್ದರು.

ಸದುಪಯೋಗವಾಗಲಿ

ನಮ್ಮ ದಿನದ 24 ಗಂಟೆಯೂ ಸ್ಥಿರ ಮನಸ್ಸು, ಕೆಲಸ ಕಾರ್ಯಗಳಲ್ಲಿ ಉಲ್ಲಾಸ ತುಂಬುವ ಬಲವಾಗಿ ಶಕ್ತಿ ಯೋಗಕ್ಕಿದೆ. ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಯೋಗಾಭ್ಯಾಸದ ವಿವಿಧ ಆಸನಗಳನ್ನು ಕರಗತ ಮಾಡಿಕೊಂಡು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರ ಮಟ್ಟದ ವರೆಗೆ ಯೋಗಾಭ್ಯಾಸದ ಸಾಧನೆ ಮಾಡಲು ಅದ್ಭುತ ಅವಕಾಶಗಳಿದ್ದು, ಸದುಪಯೋಗ ಪಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಕಿವಿಮಾತು ಹೇಳಿದರು.

ಆಕಾಶ್ ಸಮೂಹ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಆರೋಗ್ಯಕ್ಕಾಗಿ ನಿರಂತರ ಯೋಗಾಭ್ಯಾಸ ಮುಖ್ಯ

• **ದೇವನಹಳ್ಳಿ:** ಪ್ರತಿಯೊಬ್ಬರೂ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ನಿರಂತರ ಯೋಗಾಭ್ಯಾಸ ಬಹುಮುಖ್ಯ ಹಾಗಾಗಿ ಪ್ರತಿನಿತ್ಯ ಯೋಗ ಮಾಡಿ ಮನಸ್ಸಿಗೆ ನೆಮ್ಮದಿ ದೊರೆಯಲಿದೆ ಎಂದು ಆಕಾಶ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ.ಮುನಿರಾಜು ಹೇಳಿದರು.



ಪಟ್ಟಣದ ಪ್ರಸನ್ನಹಳ್ಳಿ ರಸ್ತೆಯಲ್ಲಿರುವ ಆಕಾಶ್ ಸಮೂಹ ಸಂಸ್ಥೆಯ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯೋಗ ಪ್ರಾಚೀನ ಸಂಪ್ರದಾಯದ ಅಮೂಲ್ಯ ಕೊಡುಗೆಯಾಗಿದೆ. ಯೋಗ ಮಾಡುವುದರಿಂದ ಮನಸ್ಸು, ದೇಹ ಚಿಂತನೆ ಹಾಗೂ ಸಾರ್ಥಕತೆಯನ್ನು ಒಗ್ಗೂಡಿಸುತ್ತದೆ. ಮನುಷ್ಯ ಹಾಗೂ ಪ್ರಕೃತಿಯ ನಡುವೆ ಸಾಮರಸ್ಯವನ್ನು ಉಂಟುಮಾಡುತ್ತದೆ. ಯೋಗವು ಆರೋಗ್ಯ ವೃದ್ಧಿಯ ಸಮಗ್ರ ವಿಧಾನವಾಗಿದೆ ಹಾಗೂ ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ನಿತ್ಯ ಯೋಗಾಭ್ಯಾಸವನ್ನು ವಿದ್ಯಾರ್ಥಿಗಳು ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಆಕಾಶ್ ಆಸ್ಪತ್ರೆಯ ಡಾ.ಪ್ರಜೇಶ್ ಮಾತನಾಡಿ, ಯೋಗ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗದೆ ಪ್ರತಿಯೊಬ್ಬರ ಮನೆಯಲ್ಲೂ ಯೋಗ ಹಾಗೂ ಧ್ಯಾನ ಮಾಡಬೇಕು. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಪ್ರತಿನಿತ್ಯ ಒಂದು ಗಂಟೆ ಯೋಗ ತರಗತಿಗಳು ನಡೆಯುತ್ತವೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಗಿರುವುದರಿಂದ ಸಂಸ್ಥೆಯ ಹೆಚ್ಚು ವಿದ್ಯಾರ್ಥಿಗಳು ಒಂದೆಡೆ ಸೇರಿ ಯೋಗ ಧ್ಯಾನ ಮಾಡುತ್ತಿದ್ದಾರೆ. ನಿತ್ಯ ಯೋಗ ಮಾಡುವುದರಿಂದ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಲಿದೆ ಎಂದರು.

ಯೋಗತರಬೇತುದಾರರಾದ ತನ್ಮ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಯಲ್ಲಿ ಪಾಲ್ಗೊಂಡು ಸಲಹೆ ಮತ್ತು ಸೂಚನೆಗಳನ್ನು ನೀಡುವುದರ ಮೂಲಕ ಯೋಗಾಭ್ಯಾಸ ಮಾಡಿದ ನಂತರ ಯೋಗದ ಕುರಿತು ವಿದ್ಯಾರ್ಥಿಗಳಿಗೆ ಮಹತ್ವದ ವಿಷಯಗಳನ್ನು ತಿಳಿಸಿದರು.

ಇದೇ ವೇಳೆ ಆಕಾಶ್ ಸಮೂಹ ಸಂಸ್ಥೆಯ ಉಪಾಧ್ಯಕ್ಷ ಅಮರ್‌ಗೌಡ, ಡಾ.ಪ್ರಜೇಶ್, ಪ್ರಾಂಶುಪಾಲರು, ಸಿಬ್ಬಂದಿವರ್ಗ, ವಿದ್ಯಾರ್ಥಿಗಳು ಇದ್ದರು.

12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಹಸ್ರ ಮಂದಿ ಭಾಗಿ

ಯೋಗವು ಮನಸು–ಆತ್ಮದ ಸಮನ್ವಯ

• **ಆನೇಕಲ್:** ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ, ಅದು ದೇಹ, ಮನಸು ಮತ್ತು ಆತ್ಮದ ಸಮನ್ವಯವನ್ನು ಸಾಧಿಸುವ ಸಮಗ್ರ ಜೀವನ ಪದ್ಧತಿಯಾಗಿದೆ ಎಂದು ಖ್ಯಾತ ಯೋಗ ತಜ್ಞ ಹಾಗೂ ಶ್ರೀ ಬಾಲಾಜಿ ವಿದ್ಯಾಪೀಠದ ಮುಖ್ಯಸ್ಥರಾದ ಡಾ. ಆನಂದ ಬಾಲಯೋಗಿ ಭವನಾನಿ ಹೇಳಿದರು.



ಅವರು ಭಾರತ ಸರ್ಕಾರ ಆಯುಷ್ ಸಚಿವಾಲಯದ ಅಂಗ ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಯೋಗ ಅಂಡ್ ನ್ಯಾಚುರೋಪತಿ, ಕೊಲ್ಯಾಬೊರೇಟಿವ್ ಸೆಂಟರ್ ಫಾರ್ ಮೈಂಡ್–ಬಾಡಿ ಇಂಟರ್‌ವೆನ್ಷನ್ಸ್ ಥ್ರೂ ಯೋಗ ಮತ್ತು ಜಗತ್ತಿನ ಯೋಗ ವಿಶ್ವವಿದ್ಯಾಲಯ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆ ಎಸ್ ವ್ಯಾಸ ಸಹಯೋಗದಲ್ಲಿ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಹಸ್ರಾರು ಯೋಗ ಪಟುಗಳನ್ನುದ್ದೇಶಿಸಿ ಮಾತನಾಡಿ ನಿಯಮಿತ ಯೋಗಾಭ್ಯಾಸವು ಜೀವನಶೈಲಿ ಯಿಂದಾಗ ಸುದೀರ್ಘ ಕಾಯಿಲೆಗಳನ್ನು ತಡೆಗಟ್ಟಲು ಸಾಧ್ಯ. ಉತ್ತಮ ಆರೋಗ್ಯ ದೀರ್ಘ ಆಯುಸ್ಸನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ. ಮಿತ ಭುಕ್ತಿ, ಹಿತ ಭುಕ್ತಿ, ಮನೆಯಲ್ಲೇ ತಯಾರಾದ ಸಾತ್ವಿಕ ಆಹಾರ ಸೇವನೆ ಮತ್ತಷ್ಟು ಸಹಕಾರಿಯಾಗಲಿದೆ. ಯಾವುದೇ ವಸ್ತು ವಿಷಯವಾಗಲಿ, ಗುರು ಮುಖೇನ ಅಭ್ಯಾಸ, ನಿರಂತರ ಸಾಧನೆ ಮಾಡಿದಲ್ಲಿ ಮುಕ್ತಿ ದೊರೆಯಲಿದೆ ಎಂದರು. ಮಧ್ಯಪ್ರದೇಶ ಸರ್ಕಾರದ ಆರೋಗ್ಯ ಇಲಾಖೆ ಕಾರ್ಯದರ್ಶಿಯಾದ ಅತುಲ್ ಕುಮಾರ್ ಮಿಶ್ರಾ ಮಾತನಾಡಿ ಇಡೀ ವಿಶ್ವಕ್ಕೆ 'ಯೋಗದಾನ' ಮಹಾನ್ ಭಾರತದ ಶ್ರೇಷ್ಠ ಕೊಡುಗೆಯಾಗಿದೆ. ಇಂದು ಪ್ರಪಂಚದ ಹಲವು ರಾಷ್ಟ್ರಗಳ ಲಕ್ಷ ಲಕ್ಷ ಜನ ಯೋಗ ಸಂಸ್ಕಾರವನ್ನು ರೂಢಿಸಿಕೊಂಡಿದ್ದಾರೆ. ಭಾರತೀಯರಾದ ನಾವುಗಳು ನಮ್ಮ ಸನಾತನ ಯೋಗಾಚರಣೆ ಸಂಪ್ರದಾಯವನ್ನು ಜೀವನ ಪರ್ಯಂತ ಪಾಲಿಸಬೇಕು ಎಂದರು.

ಎಸ್.ವ್ಯಾಸ ಸಂಸ್ಥೆಯ ಪ್ರೊ.ಚಾನ್ಸಲರ್ ಬಿ.ಆರ್. ರಾಮಕೃಷ್ಣ, ರಿಜಿಸ್ಟ್ರಾರ್ ಪ್ರೊ. ಸೋಣಿಕುಮಾರಿ, ಉಪ–ರಿಜಿಸ್ಟ್ರಾರ್ ಡಾ.ವಾಸುದೇವ ವೈದ್ಯ, ಯೋಗಾಚಾರ್ಯ ಪ್ರೊ.ಸುಬ್ರಹ್ಮಣ್ಯಂ ವೇದಿಕೆಯಲ್ಲಿದ್ದರು. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಪ್ರಾಂಶುಪಾಲರು, ಡೀನ್‌ಗಳು, ನಿರ್ದೇಶಕರು ಯೋಗಾಭ್ಯಾಸ ನಡೆಸಿದರು.

ತಾಲೂಕು ವಕೀಲರ ಸಂಘದ ಚುನಾವಣೆ | 247 ಮತಗಳಿಂದ ಆಯ್ಕೆ

ರಾಧಾಕೃಷ್ಣ ವಕೀಲರ ಸಂಘದ ನೂತನ ಅಧ್ಯಕ್ಷ

• **ಹೊಸಕೋಟೆ:** 2026–28ರ ಅವಧಿಗೆ ನಡೆದ ತಾಲೂಕು ವಕೀಲರ ಸಂಘದ ಅಧ್ಯಕ್ಷ ಸ್ಥಾನಕ್ಕೆ ರಾಧ ಕೃಷ್ಣ 247 ಮತ ಪಡೆಯುವ ಮೂಲಕ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಬಸವರಾಜ್ ತಿಳಿಸಿದರು.

ನಗರದ ತಾಲೂಕು ವಕೀಲರ ಸಂಘದ ಕಚೇರಿಯಲ್ಲಿ ಭಾನುವಾರ ತಾಲೂಕು ವಕೀಲರ ಸಂಘದ ಚುನಾವಣೆ ಹಮ್ಮಿಕೊಳ್ಳಲಾಗಿತ್ತು.

ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಜಯಶೀಲರಾದ ರಾಧಾ ಕೃಷ್ಣ ಮಾತನಾಡಿ, ವಕೀಲರ ಸಂಘದ ಸಹೋದ್ಯೋಗಿ ಮಿತ್ರರು ನನ್ನ ಗೆಲುವಿನ ರುವಾರಿಗಳಾಗಿದ್ದು ಮುಂದಿನ ಎರಡು ವರ್ಷಗಳಲ್ಲಿ ನ್ಯಾಯಾಲಯಕ್ಕೆ ಸ್ವಂತ ಜಾಗದ ವ್ಯವಸ್ಥೆ, ಸಂಘದ ಕಚೇರಿಗೆ ನಿವೇಶನ ಹಾಗೂ ಕಟ್ಟಡ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿ ಎಲ್ಲರ ಸಹಕಾರದಿಂದ ಯಾವುದೇ ಸಮಸ್ಯೆ ಇಲ್ಲದಂತೆ ಆಡಳಿತ ನೀಡಲಾಗುವುದು ಎಂದರು.

ಚುನಾವಣೆಯಲ್ಲಿ ಸ್ಪರ್ಧಿಸಿ ಜಯಶೀಲರಾದ ಅಭ್ಯರ್ಥಿಗಳ ವಿವರ:

ಅಧ್ಯಕ್ಷ ವೈ.ವಿ.ರಾಧ ಕೃಷ್ಣ, ಉಪಾಧ್ಯಕ್ಷ ಹನುಮಂತ ರಾವ್, ಪ್ರಧಾನ ಕಾರ್ಯದರ್ಶಿ ಆರ್.ರಾಜಪ್ಪ, ಜಂಟಿ ಕಾರ್ಯದರ್ಶಿ ಟಿ ಕೆ ಮುನಿರಾಜು, ಖಜಾಂಚಿ ಎಚ್.ಎಂ.ನಾಗಜ್ಯೋತಿ, ನಿರ್ದೇಶಕರುಗಳಾಗಿ ಪಿ.ಎಲ್.ಅಭಿಷೇಕ್, ಎನ್. ಅಮರ್, ಎಂ.ಗಣೇಶ್, ಎಸ್.ಕೆ.ಪ್ರಕಾಶ್ ಮೂರ್ತಿ, ಕೆ.ಎಂ.ವೆಂಕಟೇಶ್, ಮಹಿಳಾ ನಿರ್ದೇಶಕಿಯರಾಗಿ ಬಿ.ಡಿ.ನಯನ, ಡಿ.ವಿದ್ಯಾ ಆಯ್ಕೆಯಾಗಿದ್ದಾರೆ.



ಹೊಸಕೋಟೆ ತಾಲೂಕು ವಕೀಲರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ವೈ.ವಿ.ರಾಧ ಕೃಷ್ಣ ಹಾಗೂ ತಂಡಕ್ಕೆ ಅರ್ಹತಾ ಪತ್ರವನ್ನು ಚುನಾವಣಾಧಿಕಾರಿ ಬಸವರಾಜ್ ವಿತರಿಸಿದರು.

ಕಿರುಸುದ್ದಿ

ಜು.13ರಂದು ಮದ್ಯವರ್ಜನ ಶಿಬಿರ

• **ಹುಳಿಯಾರು:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯಿಂದ ಮುಂಬರುವ ಜುಲೈ 13 ರಂದು ಹುಳಿಯಾರಿನ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ 'ಮದ್ಯವರ್ಜನ ಶಿಬಿರ'ದ ಯಶಸ್ವಿಗಾಗಿ ಪೂರ್ವಭಾವಿ ಸಭೆಯನ್ನು ನಡೆಸಲಾಯಿತು. ಪಟ್ಟಣದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದ ಈ ಮಹತ್ವದ ಸಭೆಯಲ್ಲಿ ಶಿಬಿರದ ಸುಗಮ ನಿರ್ವಹಣೆಗಾಗಿ ನೂತನ ವ್ಯವಸ್ಥಾಪನಾ ಸಮಿತಿ'ಯನ್ನು ರಚಿಸಲಾಯಿತು. ಗೌರವ ಅಧ್ಯಕ್ಷರಾಗಿ ಮಾಜಿ ಶಾಸಕರಾದ ಕೆ.ಎಸ್.ಕಿರಣ್ ಕುಮಾರ್, ಪ್ರಧಾನ ಸಂಚಾಲಕರಾಗಿ ಅನಿಲ್ ಕುಮಾರ್, ಗೌರವ ಸಂಚಾಲಕರಾಗಿ ಸೀನಪ್ಪ, ಸಲಹೆಗಾರರಾಗಿ ಪ್ರವೀಣ್ ಕುಮಾರ್, ಕಾರ್ಯದರ್ಶಿಯಾಗಿ ಡಿ.ರಾಮಚಂದ್ರ, ಜಂಟಿ ಕಾರ್ಯದರ್ಶಿಯಾಗಿ ಭಾಗ್ಯ ಆಯ್ಕೆಯಾದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಎಸ್‌ಆರ್‌ಎಸ್ ದಯಾನಂದ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರುಗಳಾಗಿ ಡಿ.ಆರ್.ನರೇಂದ್ರ ಬಾಬು, ವೈ.ಎಸ್. ನಾಗರಾಜು, ಚಂದ್ರಣ್ಣ, ಫಕ್ರುದ್ದೀನ್, ರಾಮಕೃಷ್ಣಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಸಮಿತಿಯ ಗೌರವ ಸಲಹೆಗಾರರಾಗಿ ಬಡಗಿ ರಾಮಣ್ಣ, ಎಲ್.ಆರ್. ಚಂದ್ರಶೇಖರ್, ರಮೇಶ್, ತಮ್ಮಯ್ಯ, ಕಿರಣ್ ಕುಮಾರ್ ಹಾಗೂ ಬಿಬಿ ಫಾತಿಮಾ ಅವರನ್ನು ಆಯ್ಕೆ ಮಾಡಲಾಗಿದೆ. ಕೋಶಾಧಿಕಾರಿಯಾಗಿ ಪ್ರಭಾಕರ, ಶಿಬಿರದ ವೈದ್ಯರಾಗಿ ಡಾ.ಸಿದ್ದರಾಮಯ್ಯ, ಹಾಗೂ ಯೋಗ ಶಿಕ್ಷಕರಾಗಿ ರಮೇಶ್ ಅವರನ್ನು ಆಯ್ಕೆ ಮಾಡಲಾಯಿತು.

ಇ-ಖಾತಾ ಅಭಿಯಾನ: 6,169 ಅರ್ಜಿಗಳ ವಿಲೇವಾರಿ

• **ಬೆಂಗಳೂರು:** ನಗರದಲ್ಲಿ ಭೂ ಗ್ಯಾರಂಟಿ ಯೋಜನೆಯಡಿ ಆರಂಭಿಸಿರುವ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನದಲ್ಲಿ ಕಳೆದ 6 ವಾರಗಳಲ್ಲಿ 6,169 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ತಿಳಿಸಿದೆ. ಈ ಬಗ್ಗೆ ಮಾಹಿತಿ ನೀಡಿರುವ ಜಿಬಿಎ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲಿ 50 ಸ್ಥಳಗಳಲ್ಲಿ ನಡೆ ಯುತ್ತಿರುವ ವಿಶೇಷ ಅಭಿಯಾನಕ್ಕೆ ಸಾರ್ವಜನಿಕರು ಭೇಟಿ ನೀಡಿ ಇ-ಖಾತಾ ಸಂಬಂಧಿತ ಸೇವೆಗಳ ಪ್ರಯೋಜನ ಪಡೆಯುತ್ತಿದ್ದಾರೆ. ಈ ಅಭಿಯಾನದ ಮೂಲಕ ನಾಗರಿಕರಿಗೆ ಇ-ಖಾತಾ ಪಡೆಯುವ ಪ್ರಕ್ರಿಯೆಯನ್ನು ಸರಳ ಮತ್ತು ಸುಲಭಗೊಳಿಸಲಾಗಿದ್ದು, ಖಾತಾ ಸಂಬಂಧಿತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸಲಾಗುತ್ತಿದೆ. ಶಿಬಿರಗಳಲ್ಲಿ ಅರ್ಜಿಗಳ ಪರಿಶೀಲನೆ, ದಾಖಲೆಗಳ ತಪಾಸಣೆ, ತಾಂತ್ರಿಕ ದೋಷಗಳ ನಿವಾರಣೆ, ಮಾಹಿತಿ ತಿದ್ದುಪಡಿ ಹಾಗೂ ಇತರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಥಳದಲ್ಲಿಯೇ ಪರಿಹಾರ ನೀಡುತ್ತಿದ್ದಾರೆ ಎಂದು ತಿಳಿಸಿದೆ. ಜಿಬಿಎಯ 5 ನಗರ ಪಾಲಿಕೆಗಳಲ್ಲಿ ಇ-ಖಾತಾ ನನ್ನ ಹಕ್ಕು ಅಭಿಯಾನದಲ್ಲಿ 6 ವಾರಗಳಲ್ಲಿ 13,835 ಮಂದಿ ಭೇಟಿ ನೀಡಿದ್ದಾರೆ. ಈ ಪೈಕಿ 6,169 ಅರ್ಜಿಗಳ ವಿಲೇವಾರಿ ಮಾಡಲಾಗಿದೆ. ಬಾಕಿ ಅರ್ಜಿಗಳನ್ನು ಶೀಘ್ರವಾಗಿ ಪರಿಹರಿಸಲಾಗುವುದು ಎಂದು ಜಿಬಿಎ ಮಾಹಿತಿ ನೀಡಿದೆ.

ದೊಡ್ಡೇರಿ ಶಾಲೆಯಲ್ಲಿ ಅಕ್ಷರಾಭ್ಯಾಸ

• **ಮಧುಗಿರಿ:** ತಾಲ್ಲೂಕಿನ ದೊಡ್ಡೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಪೂರ್ವ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಯಿತು. ವಿದ್ಯಾ ಅಧಿದೇವತೆಯಾದ ಶಾರದಾಂಬೆಗೆ ಪೂಜೆ ಸಲ್ಲಿಸಿ ಅಕ್ಷರಾಭ್ಯಾಸಕ್ಕೆ ಚಾಲನೆ ನೀಡಲಾಯಿತು. 2026-27 ನೇ ಸಾಲಿನ ಎಲ್.ಕೆ.ಜಿ ತರಗತಿಗೆ ದಾಖಲಾದ ಪುಟಾಣಿಗಳಿಂದ ತಮ್ಮ ಪೋಷಕರು ಅಕ್ಕಿಯ ಮೇಲೆ ಅಕ್ಷರ ಬರೆಸುವ ಮೂಲಕ ಅಕ್ಷರಾಭ್ಯಾಸಕ್ಕೆ ಮುನ್ನುಡಿ ಬರೆದರು. ಎಸ್ ಡಿ ಎಂ ಸಿ ಅಧ್ಯಕ್ಷ ಅಜಿತ, ಸದಸ್ಯ ರಮೇಶ್, ಮಂಜುನಾಥ, ಪುಟ್ಟ ಹನುಮಕ್ಕ, ಭ ವ್ಯಾ, ಮುಖ್ಯ ಶಿಕ್ಷಕರಾದ ಪುಟ್ಟರಾಜು, ಶಿಕ್ಷಕರಾದ ವಾಣಿಶ್ರೀ, ಲಕ್ಷ್ಮೀಕಾಂತಯ್ಯ, ಪುಷ್ಪಲತ,ಸೌಭಾಗ್ಯಮ್ಮ, ಉಮಾದೇವಿ, ಮಾಲಾ ಇದ್ದರು.

ಸಮಾಜದ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ

• **ಬೆಂಗಳೂರು:** ಸಮಾಜ ಕಾರ್ಯ ಕಾರ್ಯಕರ್ತರು ಸಾಮಾಜಿಕ ಪರಿವರ್ತನೆಗೆ ಪೂರಕವಾದ ವೇಗವರ್ಧಕ ಶಕ್ತಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಮಕ್ಕಳ ಹಕ್ಕುಗಳ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ವಾಸುದೇವ ಶರ್ಮ ಪ್ರತಿಪಾದಿಸಿದರು. ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದ ವತಿಯಿಂದ ಮೂರು ದಿನಗಳ ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಸಮಾಜದ ಸುಸ್ಥಿರ ಅಭಿವೃದ್ಧಿಯ ಹಾದಿಯಲ್ಲಿ ಸಮಾಜ ಕಾರ್ಯ ಕಾರ್ಯಕರ್ತರ ಪಾತ್ರ ಬಹುಮುಖ್ಯ ಎಂದು ಅಭಿಪ್ರಾಯಪಟ್ಟರು. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳ ಸಮರ್ಥ ಬಳಕೆಯ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧಿಸಬೇಕು ಸಾಗುವಂತೆ ಜನಸಮುದಾಯಗಳನ್ನು ಜಾಗೃತಗೊಳಿಸುವ ಹೊಣೆಗಾರಿಕೆ ಸಮಾಜ ಕಾರ್ಯ ಕಾರ್ಯಕರ್ತರದ್ದಾಗಿದೆ ಎಂದು ವಿಶ್ಲೇಷಿಸಿದರು.

12 ತಾಸು, 250 ಎಕರೆ ಪ್ರದೇಶ, 50 ಸಾವಿರ ಜನ 15 ಲಕ್ಷ ಗಿಡ ನೆಡಲು ಸಜ್ಜು

ಜೂ.27ಕ್ಕೆ ಸಿಲಿಕಾನ್ ಸಿಟಿಯಲ್ಲಿ ಹಸಿರು ಕ್ರಾಂತಿ

• **ಬೆಂಗಳೂರು:** ಜೂನ್ 27ಕ್ಕೆ ಬೆಂಗಳೂರಿನಲ್ಲಿ ಹಸಿರು ಕ್ರಾಂತಿಗೆ ಸಿದ್ಧತೆ ನಡೆಯುತ್ತಿದ್ದು, 12 ತಾಸು, 250 ಎಕರೆ ಪ್ರದೇಶ, 50 ಸಾವಿರ ಜನ 15 ಲಕ್ಷ ಗಿಡ ನೆಡಲು ಸಜ್ಜಾಗಿದ್ದಾರೆ. ಆ ಮೂಲಕ ಗಿನ್ನಿಸ್ ದಾಖಲೆ ನಿರ್ಮಿಸಲು ಸಮರೋಪಾದಿಯಲ್ಲಿ ಕೆಲಸ ನಡೆಯುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ನಗರ ಪಾಲಿಕೆಗಳು, ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ, ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026-30 ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ಜೂನ್ 27ರಂದು ನಗರದ ವಿವಿಧ ಭಾಗಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ನೆಡುವ ಬೃಹತ್ ಅಭಿಯಾನ ಆಯೋಜಿಸಲಾಗಿದೆ.

ಈ ಸಂಬಂಧ ಜಿಬಿಎ ಮುಖ್ಯ ಕಚೇರಿಯಲ್ಲಿ ಸಭೆ ನಡೆಸಿದ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಕಾರ್ಯಕ್ರಮಕ್ಕೆ ಅಗತ್ಯವಿರುವ ಸಸಿಗಳು, ಉಪಕರಣಗಳು, ಮಾರ್ಗಸೂಚಿ ಫಲಕಗಳು ಹಾಗೂ ಇತರೆ ಸಾಮಗ್ರಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಿ, ಪ್ರತಿಯೊಂದು ಹಂತದಲ್ಲೂ ಸಮರ್ಪಕ ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿ ಸಮನ್ವಯ ಇರಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

> ಹಸಿರು ಬೆಂಗಳೂರಿನ ನಿರ್ಮಾಣಕ್ಕೆ ಪ್ರತಿಯೊಬ್ಬರ ಸಹಭಾಗಿತ್ವ ಅತ್ಯಗತ್ಯವಾಗಿದ್ದು ಸಸಿ ನೆಡುವ ಬೃಹತ್ ಅಭಿಯಾನದಲ್ಲಿ ನಾಗರಿಕರು ಸಕ್ರಿಯವಾಗಿ ಭಾಗವಹಿಸಬೇಕು.
> ■ ಮಹೇಶ್ವರ್ ರಾವ್, ಜಿಬಿಎ ಮುಖ್ಯ ಆಯುಕ್ತ

ವಿವಿಧ ಪರಿಸರ ವಲಯಗಳಲ್ಲಿ ಸಸಿ ನೆಡುವ ಕಾರ್ಯ: ಈ ಅಭಿಯಾನವು ನಗರದ ಹಸಿರು ವಿಸ್ತರಣೆಗೆ ಮಹತ್ವದ ಕೊಡುಗೆ ನೀಡಲಿದ್ದು, ಡಾ. ಶಿವರಾಮ ಕಾರಂತ ಬಡಾವಣೆ, ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಕೆರೆ ದಂಡೆಗಳು, ರಾಜಕಾಲುವೆಗಳ ಇಕ್ಕೆಲಗಳು, ಉದ್ಯಾನವನಗಳು ಹಾಗೂ ವಿವಿಧ ಪರಿಸರ ವಲಯಗಳಲ್ಲಿ ಸಸಿ ನೆಡುವ ಕಾರ್ಯ ನಡೆಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಅಧಿಕೃತ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಜೊತೆಗೆ ಹಸಿರು ಬೆಂಗಳೂರು ರೂವಾರಿಗಳು ಎಂಬ ಗೌರವ ಸಿಗಲಿದೆ. ಅತ್ಯುತ್ತಮ ಕೊಡುಗೆ ನೀಡುವವರಿಗೆ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳಿಂದ ಗೌರವಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.



ಮ್ಯಾರಾಥಾನ್ ನೋಂದಣಿ ಲಿಂಕ್ - https://mysamay.in/e/kempegowdarun
ಸಸಿ ನೆಡುವ ಕುರಿತು ಮಾಹಿತಿ ಹಾಗೂ ನೋಂದಣಿ ಮಾಡಿಕೊಳ್ಳಲು ವೆಬ್ ಸೈಟ್ - https://greenbengalurubybda.in/

ಸಕಲ ಸೌಲಭ್ಯ ಇರಲಿದೆ

ಒಟ್ಟು 243 ಎಕರೆ ಪ್ರದೇಶವನ್ನು 49 ವಲಯಗಳಾಗಿ ಹಾಗೂ 314 ಸಸಿ ನೆಡುವ ಸ್ಥಳಗಳಾಗಿ ವಿಭಾಗಿಸಲಾಗಿ, ಪ್ರತಿಯೊಂದು ವಲಯಕ್ಕೂ ಒಬ್ಬ ವಲಯ ಕಮಾಂಡರ್ ಉಸ್ತುವಾರಿಯಿದ್ದಾರೆ. ಕಾರ್ಯಕ್ರಮದ ದಿನ ಸುಗಮ ಸಂಚಾರಕ್ಕಾಗಿ ಮೆಟ್ರೋ ರೈಲುಗಳ ಸಂಚಾರ ಆವರ್ತನೆಯನ್ನು ಹೆಚ್ಚಿಸಲಾಗುವುದು. ಜೊತೆಗೆ ಮೆಟ್ರೋ ನಿಲ್ದಾಣಗಳಿಂದ ಸಸಿ ನೆಡುವ ಸ್ಥಳಗಳವರೆಗೆ ಉಚಿತ ಬಸ್ ವ್ಯವಸ್ಥೆಯನ್ನು ಒದಗಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಆಹಾರ, ಪೋರ್ಟಬಲ್ ಶೌಚಾಲಯಗಳು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದರು. ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಅಂಗವಾಗಿ ಜೂನ್ 27 ರಂದು ಬೆಳಗ್ಗೆ 6 ಗಂಟೆಗೆ 10ಕೆ ಹಾಗೂ 5ಕೆ ಮ್ಯಾರಥಾನ್ ಸಹ ಆಯೋಜಿಸಲಾಗಿದೆ. ಇದು ಎಂಎಲ್‌ಆರ್‌ನಿಂದ ಚಲ್ಲಘಟ್ಟ ಮೆಟ್ರೋ ನಿಲ್ದಾಣದವರೆಗೆ ನಡೆಯಲಿದೆ ಎಂದು ಬಿಡಿಎ ಆಯುಕ್ತ ಮೇಜರ್ ಮಣಿವಣ್ಣನ್ ಪಿ. ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಕಾಶಕ ಎಂ.ಆರ್.ಮಂಜು ಮುತ್ತೇಗೆರೆ ಹೇಳಿಕೆ

ನವೆಂಬರ್‌ನಲ್ಲಿ ಮಂಡ್ಯ ಸಾಹಿತ್ಯ ಸಂಭ್ರಮ

• **ಮಂಡ್ಯ:** ಜಿಲ್ಲೆಯ ಹಾಗೂ ನಾಡಿನ ಪ್ರತಿಭಾನ್ವಿತ, ಸೃಜನಶೀಲ ಬರಹಗಾರರ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಬದ್ಧತೆ ಹಾಗೂ ವೈಜ್ಞಾನಿಕ ದೃಷ್ಟಿಕೋನಗಳ ಚಿಂತನೆಗಳಿರುವ ಉತ್ತಮ ಪುಸ್ತಕಗಳನ್ನು ಪ್ರಕಟಿಸುವ ಸದುದ್ದೇಶದೊಂದಿಗೆ ಅಸ್ತಿತ್ವಕ್ಕೆ ಬಂದ ಎಂ.ಆರ್.ಎಂ. ಪ್ರಕಾಶನ ಸಂಸ್ಥೆಯು ಬರುವ ನವೆಂಬರ್‌ನಲ್ಲಿ 'ಮಂಡ್ಯ ಸಾಹಿತ್ಯ ಸಂಭ್ರಮ' ನಡೆಸಲು ಉದ್ದೇಶಿಸಿದ್ದು, ಇದರ ಅಂಗವಾಗಿ ಕಥಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಪ್ರಕಾಶಕರಾದ ಎಂ.ಆರ್. ಮಂಜು ಮುತ್ತೇಗೆರೆ ತಿಳಿಸಿದರು.

ಸಾಹಿತ್ಯಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುವ ಮಂಡ್ಯ ಜಿಲ್ಲೆಯ ಹಾಗೂ ರಾಜ್ಯಮಟ್ಟದ ಸಾಹಿತಿಗಳನ್ನು ಆಹ್ವಾನಿಸಿ ಕಾರ್ಯಕ್ರಮ ನಡೆಸಲಾಗುವುದು. ವಿದ್ಯಾರ್ಥಿ ಮತ್ತು ಯುವಜನರನ್ನು ಕೇಂದ್ರವಾಗಿಟ್ಟುಕೊಂಡು ಇಡೀ ದಿನದ ಕಾರ್ಯಕ್ರಮ ರೂಪಿಸಲಾಗುವುದು. ಮಂಡ್ಯ ಸಾಹಿತ್ಯ ಸಂಭ್ರಮ ಹಬ್ಬ ಅರ್ಥಪೂರ್ಣಗೊಳಿಸಲು, ನಾನಾ ಸಾಹಿತ್ಯಕ ಸ್ಪರ್ಧೆಗಳು, ಪ್ರದರ್ಶನ, ಚಿಂತನ-ಮಂಥನ ಗೋಷ್ಠಿಗಳನ್ನು ನಡೆಸಲಾಗುವುದು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಥಾ ಸ್ಪರ್ಧೆ: ಸಾಹಿತ್ಯ ಸಂಭ್ರಮಕ್ಕೆ ಕಳಸಪ್ರಾಯವಾಗಿ ಕನ್ನಡ ಕಥಾ ಜಗತ್ತಿನ ಕಥೆಗಾರರನ್ನು ಪ್ರೋತ್ಸಾಹಿಸಲು, ಉತ್ತೇಜನ ನೀಡಲು ಹಾಗೂ ಆ ಮೂಲಕ ಕನ್ನಡ ಸಾಹಿತ್ಯ ಪರಂಪರೆಗೆ ಹೊಸ ಕಥೆಗಳನ್ನು ಕಾಣಿಕೆಯಾಗಿ ನೀಡಲು ಎಂ.ಆರ್.ಎಂ. ಕಥಾ ಸ್ಪರ್ಧೆ-2026ನ್ನು ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ಮೊದಲ ಮೂರು ಕಥೆಗಳಿಗೆ ತಲಾ 10 ಸಾವಿರ, 7 ಸಾವಿರ ಹಾಗೂ 5 ಸಾವಿರ ರೂ. ಬಹುಮಾನ ನೀಡಲಾಗುವುದು. ಮೆಚ್ಚುಗೆ ಪಡೆದ ಕಥೆಗಳಿಗೆ ಸೂಕ್ತ ಬಹುಮಾನ ನೀಡಲಾಗುವುದು ಎಂದರು. ಸಂಸ್ಥೆಯ ಪ್ರಕಾಶಕ ಚಂದ್ರಶೇಖರ ದ.ಕೋ.ಹಳ್ಳಿ ಮಾತನಾಡಿ, ಆಯ್ಕೆಯಾದ ಕಥೆಗಳನ್ನು ನಮ್ಮ ಪ್ರಕಾಶನ ವತಿಯಿಂದ ಪ್ರಕಟಿಸಲಾಗುವುದು. ಸಾಹಿತ್ಯ ಸಂಭ್ರಮದಲ್ಲಿ ಬಿಡುಗಡೆಯನ್ನು ಮಾಡಲಾಗುವುದು. ಕನ್ನಡ ಸಾಹಿತ್ಯ ಲೋಕದಲ್ಲಿ ಹೆಸರು ಮಾಡಿರುವ ಸಾಹಿತಿಗಳು ತೀರ್ಪುಗಾರರಾಗಿರುತ್ತಾರೆ ಎಂದು ಹೇಳಿದರು.

ಜನರಲ್ಲಿ ಮಸ್ತಕ ಓದುವ ಸಂಸ್ಕೃತಿಯನ್ನು ಬೆಳೆಸುವ ಹಾಗೂ ಶಾಲಾ-ಕಾಲೇಜು ಹಂತದಲ್ಲೇ ವಿದ್ಯಾರ್ಥಿಗಳಲ್ಲಿ ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಸಾಹಿತ್ಯಕ ಕೆಲಸಗಳ ಒಡು ಹಾಗೂ ರಚನೆಯಲ್ಲಿ ತೊಡಗಿಸಿಕೊಳ್ಳುವಂತೆ ನಮ್ಮ ಪ್ರಕಾಶನ ವತಿಯಿಂದ ಕಾರ್ಯಕ್ರಮಗಳನ್ನು ರೂಪಿಸಿ 13ನೇ ವರ್ಷವೂ ಯಶಸ್ವಿಯಾಗಿ ಸಾಗಿದ್ದೇವೆ. ಭಾಷೆ, ವೈಚಾರಿಕತೆ ಹಾಗೂ ಸಾಮಾಜಿಕ ಪ್ರಜ್ಞೆಯ ದೃಷ್ಟಿಯಿಂದ ರಾಜ್ಯದ ಗಮನ ಸೆಳೆದಿರುವ ನಮ್ಮ ಜಿಲ್ಲೆಯ ವಿಶಿಷ್ಟತೆಯನ್ನು ಪುಸ್ತಕಗಳ ಮೂಲಕ ದಾಖಲಿಸುವ ಕೆಲಸವನ್ನು ಮಾಡಲಾಗಿದೆ. ರಾಜ್ಯಮಟ್ಟದಲ್ಲಿ ಗಮನ ಸೆಳೆದಿರುವ ಲೇಖಕರನ್ನು ಮಂಡ್ಯಕ್ಕೆ ಬರಮಾಡಿಕೊಂಡು ಅವರ ಸಾಹಿತ್ಯ, ವಿಚಾರಧಾರೆಗಳಿಗೆ ವೇದಿಕೆ ಕಲ್ಪಿಸಲಾಗಿದೆ ಹಾಗೂ ಎಂ.ಆರ್.ಎಂ. ಸಾಹಿತ್ಯ ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕವಿ, ಶಿಕ್ಷಕ ಕೊತ್ತತ್ತಿ ರಾಜು, ಕನ್ನಡ ಉಪನ್ಯಾಸಕ ಉಮೇಶ್ ದಡಮಹಳ್ಳಿ, ವಕೀಲ ದೇವರಾಜ ಎಸ್.ಪಂಡಿತ್ ಹಾಜರಿದ್ದರು.



ಕಥಾ ಸ್ಪರ್ಧೆಯ ನಿಯಮಗಳು

- ಸ್ಪರ್ಧೆಗೆ ಕಳುಹಿಸುವ ಕಥೆಯು ಸ್ವತಂತ್ರ ರಚನೆ ಆಗಿರಬೇಕು. ಇದಕ್ಕೂ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಸಾಮಾಜಿಕ ಮಾಧ್ಯಮ, ಬ್ಲಾಗ್, ಆಕಾಶವಾಣಿ, ದೃಶ್ಯ ಮಾಧ್ಯಮ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರವಾಗಿರಬಾರದು.
- ಕಥೆಗೆ ಗರಿಷ್ಠ ಮಿತಿಗಳು-ಎರಡು ಸಾವಿರ ಪದಗಳು ಮಾತ್ರ. ಕಥೆಗಳನ್ನು ಕಳುಹಿಸಲು ಆ.15 ಕೊನೆಯ ದಿನ.
- ಕಥೆಯನ್ನು ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿ ಕಳುಹಿಸಿಕೊಡಬೇಕು. (ಕೈ ಬರಹದ ಕಥೆಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ).
- (ಕಥೆಗಾರರು ತಮ್ಮ ಹೆಸರು, ಅಂಚೆ ವಿಳಾಸ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ, ಇತ್ತೀಚಿನ ಭಾವಚಿತ್ರ ದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನು ಪ್ರತ್ಯೇಕ ಪುಟದಲ್ಲಿ ಕಥೆಯ ಜತೆಗೆ ಕಳುಹಿಸಿಕೊಡಬೇಕು.
- ಸ್ಪರ್ಧೆಗೆ ಕಳುಹಿಸುವ ಕಥೆಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ.
- ಕಥೆಗಳನ್ನು ಕಳುಹಿಸಬೇಕಾದ ಇ-ಮೇಲ್ ವಿಳಾಸ: mrmpublications25@gmail.com.ಹೆಚ್ಚಿನ ವಿವರಗಳಿಗೆ ಮೊ: 7899041175, 8971901560, 9449495941ನ್ನು ಸಂಪರ್ಕಿಸಬಹುದು.

ಜು.25ರಿಂದ ಅಂತಾರಾಷ್ಟ್ರೀಯ ಭೂವಿಜ್ಞಾನ ಯುವ ಚಳವಳಿ

• **ಬೆಂಗಳೂರು:** ಕೇಂದ್ರ ಸರ್ಕಾರದ ಭೂವಿಜ್ಞಾನ ಸಚಿವಾಲಯದ ಬೆಂಬಲದೊಂದಿಗೆ, ಬೆಂಗಳೂರಿನ ಪ್ರಯೋಗ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ರಿಸರ್ಚ್ ಹಾಗೂ ಇಂಟರ್‌ನ್ಯಾಷನಲ್ ಜಿಯೋಸೈನ್ಸ್ ಎಜುಕೇಶನ್ ಆರ್ಗನೈಸೇಶನ್ (ಐಜಿಇಒ) ಸಹಯೋಗದಲ್ಲಿ ಜು.25 ರಿಂದ 29ರವರೆಗೆ ಎರಡನೇ ಅಂತಾರಾಷ್ಟ್ರೀಯ ಭೂವಿಜ್ಞಾನ ಯುವ ಚಳವಳಿ ಕಾರ್ಯಕ್ರಮ ನಡೆಯಲಿದೆ.

2025ರಲ್ಲಿ ಆರಂಭವಾದ ಈ ಕಾರ್ಯಕ್ರಮದ ಮೊದಲ ಆವೃತ್ತಿಯಲ್ಲಿ ಆರು ದೇಶಗಳ 20 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಬಾರಿ ಭೂವಿಜ್ಞಾನ ಕಲಿಕೆಯಲ್ಲಿ ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸುವುದು ಹಾಗೂ ಅಂತಾರಾಷ್ಟ್ರೀಯ ಸಹಯೋಗವನ್ನು ಉತ್ತೇಜಿಸುವ ಉದ್ದೇಶ ಹೊಂದಲಾಗಿದೆ.

ಶಿಲಾಗೋಳ, ಜಲಗೋಳ, ವಾತಾವರಣ, ಜೀವಗೋಳ ಮತ್ತು ಹಿಮಗೋಳ ಕುರಿತ ಕ್ಷೇತ್ರ ಅಧ್ಯಯನ, ಪ್ರಯೋಗಗಳು, ಗುಂಪು ಚರ್ಚೆಗಳು, ಸಾಂಸ್ಕೃತಿಕ ವಿನಿಮಯ ಮತ್ತು ನಾಯಕತ್ವ ಅಭಿವೃದ್ಧಿ ಕಾರ್ಯಾಗಾರಗಳು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿವೆ. ಭೂ ವ್ಯವಸ್ಥೆಗಳ ಕ್ಷೇತ್ರದಲ್ಲಿ ಇರುವ ಕೊರತೆಯನ್ನು ನೀಗಿಸಿ, ವೈಜ್ಞಾನಿಕ ಅರಿವು ಮತ್ತು ನಾಯಕತ್ವ ಕೌಶಲ ಹೊಂದಿದ ಯುವ ನಾಯಕರನ್ನು ರೂಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಐಜಿಇಒ ಸಲಹೆಗಾರ ಡಾ. ಆರ್. ಶಂಕರ್ ತಿಳಿಸಿದ್ದಾರೆ.



ಯೋಗ ಎಂದರೆ ಶಕ್ತಿ:ಡಾ.ಜಯರಾಮ



• **ಕೆಂಗೇರಿ:** ಯೋಗ ಎಂದರೆ ಶಕ್ತಿ, ಯೋಗದಿಂದ ಮನಸ್ಸು ಹಾಗೂ ದೇಹ ಹಗುರವಾಗಿ ವಿಕಸ್ವಗೊಳ್ಳುತ್ತದೆ ಎಂದು ಜೆ.ಎಸ್.ಕಾಲೇಜಿನ ಸಂಸ್ಥಾಪಕ ನಿರ್ದೇಶಕ ಡಾ. ಜಯರಾಮ ಕೆಬ್ಬೆ ಹೇಳಿದರು.

ಮಲ್ಲತಹಳ್ಳಿಯ ಜೆ.ಎಸ್.ಪದವಿ ಪೂರ್ವ ಹಾಗೂ ಪದವಿ ಕಾಲೇಜಿನ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಯೋಗದಿಂದ ಮನಸ್ಸು ಹಾಗೂ ದೇಹ ಹಗುರವಾಗಿ ವಿಕಸ್ವಗೊಳ್ಳುತ್ತದೆ. ಇದು ನಮ್ಮ ಬದುಕನ್ನು ಹಸನಾಗಿಸುತ್ತದೆ ಮಾತ್ರ ವಲ್ಲದೆ ಶಾರೀರಿಕವಾಗಿ ಕ್ರಿಯಾಶೀಲರನ್ನಾಗಿಸುತ್ತದೆ. ಪ್ರತಿದಿನ ಯೋಗ ಮಾಡುವುದರಿಂದ ಜೀವನದಲ್ಲಿ ಶಿಸ್ತು ಹಾಗೂ ಸ್ವಚ್ಛತೆ ರೂಢಿಗೊಳ್ಳುತ್ತದೆ. ಇಂದಿನ ಯುವ ಸಮುದಾಯ ಯೋಗ ಹಾಗೂ ಧ್ಯಾನದ ಮೂಲಕ ಸಾಧನೆಯ ಮಾರ್ಗವನ್ನು ಕಂಡುಕೊಳ್ಳಬೇಕು. ಇಂತಹ ಸಾಧನೆಯ ಮನೋಭಾವನೆಯನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೆ.ಎಸ್.ಕಾಲೇಜಿನ ಕಾರ್ಯದರ್ಶಿ ನಿಧಿನ್ ಕೆಬ್ಬೆ, ಪ್ರಾಂಶುಪಾಲ ವಿಜಯಲಕ್ಷ್ಮಿ ಎಸ್.ಕೆ, ಉಪ ಪ್ರಾಂಶುಪಾಲ ರತ್ನಾಕರ್ ಶೆಟ್ಟಿ ಇದ್ದರು.

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

150 ಕಿ.ಮೀ. ಎಲಿವೇಟೆಡ್ ಕಾರಿಡಾರ್ ನಿರ್ಮಾಣದ ಗುರಿ

• **ಬೆಂಗಳೂರು:** ನಗರದ ಸಂಚಾರ ದಟ್ಟಣೆಗೆ ದೀರ್ಘಕಾಲದ ಪರಿಹಾರ ಕಲ್ಪಿಸುವ ಉದ್ದೇಶದಿಂದ 150 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬಿ-ಸ್ಮೈಲ್ ಅಧಿಕಾರಿಗಳ ಜೊತೆ ಸಭೆಯ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 150 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್‌ಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ. ಇದರಲ್ಲಿ 75 ಕಿ.ಮೀ. ಉದ್ದದ ಕಾರಿಡಾರ್ ನಿರ್ಮಾಣಕ್ಕೆ ಟೆಂಡರ್ ಕರೆಯಲು ತೀರ್ಮಾನಿಸಲಾಗಿದೆ. ಇದಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಪೂರ್ವಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸುರಂಗ ಮಾರ್ಗ ಯೋಜನೆ: ಉತ್ತರ-ದಕ್ಷಿಣ ದಿಕ್ಕಿನಲ್ಲಿ 16.7 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಸಚಿವ ಸಂಪುಟದ ಅನುಮೋದನೆಯ ಬಳಿಕ ಯೋಜನೆ ಅನುಷ್ಠಾನಗೊಳ್ಳಲಿದೆ. ಪೂರ್ವ-ಪಶ್ಚಿಮ ಸುರಂಗ ಮಾರ್ಗ ಯೋಜನೆಯಡಿ ಹಳೆ ಮದ್ರಾಸ್ ರಸ್ತೆಯಿಂದ ಮೈಸೂರು ರಸ್ತೆಯವರೆಗೆ 22 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಮುಂದಿನ ಹಂತದಲ್ಲಿ ಟೆಂಡರ್ ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಹೊರ ವರ್ತುಲ ರಸ್ತೆ ಮರು ವಿನ್ಯಾಸ: ಹೊರ ವರ್ತುಲ ರಸ್ತೆಯ ಮರು ವಿನ್ಯಾಸಕ್ಕಾಗಿ 450 ಕೋಟಿ ರೂ. ವೆಚ್ಚದ ಸಮಗ್ರ ಯೋಜನೆ ರೂಪಿಸಲಾಗಿದೆ. ಮೆಟ್ರೋ ಕಾಮಗಾರಿಯೊಂದಿಗೆ ಈ ಯೋಜನೆಯನ್ನು ಏಕಕಾಲದಲ್ಲಿ ಅನುಷ್ಠಾನಗೊಳಿಸಿದರೆ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಅದ್ದರಿಂದ ಸಂಚಾರಿ ಪೊಲೀಸರೊಂದಿಗೆ ಚರ್ಚಿಸಿ ಸೂಕ್ತ ಸಮಯದಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಬಿ-ಸ್ಮೈಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ನಿರ್ದೇಶಕ (ತಾಂತ್ರಿಕ) ಪ್ರಹ್ಲಾದ್, ಮುಖ್ಯ ಅಭಿಯಂತರರಾದ ಮಾಲತಿ, ಮಾದೇಶ್, ವಿಶ್ವನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮೆಟ್ರೋ ಜಾಲ ವಿಸ್ತರಣೆ

ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು 275 ಕಿ.ಮೀ. ಮೆಟ್ರೋ ಜಾಲ ನಿರ್ಮಿಸುವ ಗುರಿ ಹೊಂದಲಾಗಿದೆ. ಅಲ್ಲದೆ, ಪ್ರಮುಖ ರಸ್ತೆಗಳು, ಹೊರ ವರ್ತುಲ ರಸ್ತೆ ಹಾಗೂ ಹೆಚ್ಚಿನ ಸಂಚಾರ ಸಾಂದ್ರತೆ ಹೊಂದಿರುವ ರಸ್ತೆಗಳನ್ನು ಗುರುತಿಸಿ ಸಮಗ್ರ ಪರಿಹಾರ ಕಲ್ಪಿಸಲು ಬಿ-ಸ್ಮೈಲ್ ಯೋಜನೆ ರೂಪಿಸಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

100 ದೇಶಗಳ 10,000ಕ್ಕೂ ಹೆಚ್ಚು ಮಂದಿ ಯೋಗ ಪಟುಗಳು ಭಾಗಿ

ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದ ಅಕ್ಷರ್ ಯೋಗ ಕೇಂದ್ರ

• **ಬೆಂಗಳೂರು:** ಭಾರತದ ಆಧ್ಯಾತ್ಮಿಕ ಮತ್ತು ಆರೋಗ್ಯ ಪರಂಪರೆಯ ಮಹತ್ವದ ಕ್ಷಣದಲ್ಲಿ, ಅಕ್ಷರ್ ಯೋಗ ಕೇಂದ್ರವು ಅಂತಾರಾಷ್ಟ್ರೀಯ ಯೋಗ ದಿನ 2026ರ ಅಂಗವಾಗಿ ಯಶಸ್ವಿಯಾಗಿ 21 ಗಿನ್ನೆಸ್ ವಿಶ್ವ ದಾಖಲೆಗಳನ್ನು ನಿರ್ಮಿಸಿ ಇತಿಹಾಸದ ಪುಟಗಳಲ್ಲಿ ತನ್ನ ಹೆಸರನ್ನು ಅಚ್ಚಳಿಯದಂತೆ ದಾಖಲಿಸಿದೆ. ಇದು ವಿಶ್ವದ ಮಟ್ಟದಲ್ಲಿ ನಡೆದ ಅತಿದೊಡ್ಡ ಮತ್ತು ಅತ್ಯಂತ ಮಹತ್ವಾಕಾಂಕ್ಷಿ ಯೋಗ ಸಾಧನೆಗಳಲ್ಲಿ ಒಂದಾಗಿದೆ.

ಪ್ರಸಿದ್ಧ ಯೋಗಗುರು ಹಾಗೂ ಆಧ್ಯಾತ್ಮಿಕ ನಾಯಕ ಹಿಮಾಲಯನ್ ಸಿದ್ಧ ಅಕ್ಷರ್ ಅವರ ನೇತೃತ್ವದಲ್ಲಿ ನಡೆದ ಈ ಐತಿಹಾಸಿಕ ಕಾರ್ಯಕ್ರಮವು ವಿಶ್ವದಾದ್ಯಂತದ ಜನರನ್ನು ಒಂದೇ ಯೋಗ ವೇದಿಕೆಯಡಿ ಒಗ್ಗೂಡಿಸಿತು. ವಿವಿಧ ಖಂಡಗಳಿಂದ ಬಂದ ಸಾವಿರಾರು ಜನ ಶಿಸ್ತು, ಸಹನಶಕ್ತಿ ಮತ್ತು ಸಾಮೂಹಿಕ ಚೈತನ್ಯದ ಅದ್ಭುತ ಪ್ರದರ್ಶನ ನೀಡಿದರು.

ಈ ದಾಖಲೆ ನಿರ್ಮಾಣದ ಸಂಭ್ರಮದಲ್ಲಿ 100ಕ್ಕೂ ಹೆಚ್ಚು ದೇಶಗಳಿಂದ 10,000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಅಮೆರಿಕಾ, ಯುಕೆ, ಇಟಲಿ, ತೈವಾನ್, ಮಲೇಶಿಯಾ, ಹಾಂಗ್ ಕಾಂಗ್, ಸಿಂಗಾಪುರ್, ದುಬೈ ಮತ್ತು ಸ್ವಿಟ್ಜರ್ಲೆಂಡ್ ಸೇರಿದಂತೆ ಹಲವು ದೇಶಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

7,000ಕ್ಕೂ ಹೆಚ್ಚು ಮಂದಿ ತ್ರಾಟಕ ಧ್ಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಅವರಲ್ಲಿ ಆಯ್ದ ಯೋಗಸ್ಪರ್ಧಿಗಳು ವಿವಿಧ ಯೋಗಾಸನಗಳಲ್ಲಿ ಅಂತಿಮ 20 ಹಂತದ ಪ್ರಯತ್ನಗಳಲ್ಲಿ ಭಾಗವಹಿಸಿ, ಯಶಸ್ವಿಯಾಗಿ 20 ಗಿನ್ನೆಸ್ ವಿಶ್ವ ದಾಖಲೆಗಳನ್ನು ಸಾಧಿಸಿದರು.

ಈ ಕಾರ್ಯಕ್ರಮದಲ್ಲಿ ಮುನ್ಷ್ಪ, ಸಿಐಎಸ್‌ಎಫ್, ಸಿಆರ್‌ಪಿಎಫ್, ಭಾರತೀಯ ಸೇನೆ, ಭಾರತೀಯ ವಾಯುಪಡೆ, ಕರ್ನಾಟಕ ರಾಜ್ಯ ಪೊಲೀಸ್, ಎನ್‌ಸಿಸಿ ಕೆಡೆಟ್‌ಗಳು, ವಿಶೇಷ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳು, ಅನಾಥಾಶ್ರಮದ ಮಕ್ಕಳು, ಉದ್ಯಮಿಗಳು, ಕಾರ್ಪೊರೇಟ್ ನಾಯಕರು, ವಿದ್ಯಾರ್ಥಿಗಳು ಹಾಗೂ ವಿಭಿನ್ನ ವಿಭಾಗಗಳ ಯೋಗಾಭ್ಯಾಸಿಗಳು ಭಾಗವಹಿಸಿದ್ದರು. ಇದು ಯೋಗದ ಸಾರ್ವತ್ರಿಕ ಆಕರ್ಷಣೆಯನ್ನು ಪ್ರತಿಬಿಂಬಿಸಿತು. ಈ ಸಂದರ್ಭದಲ್ಲಿ ಮಾತನಾಡಿದ ಹಿಮಾಲಯನ್ ಸಿದ್ಧ ಅಕ್ಷರ್, ಇಂದು ನಾವು ಕೇವಲ ದಾಖಲೆಗಳನ್ನು ನಿರ್ಮಿಸುವುದಲ್ಲ, ಮಾನವಸಾಮರ್ಥ್ಯವನ್ನು ಜಾಗೃತಗೊಳಿಸುತ್ತಿದ್ದೇವೆ. ಇಲ್ಲಿ ಸಾಧಿಸಲಾದ ಪ್ರತಿಯೊಂದು ಗಿನ್ನೆಸ್ ವಿಶ್ವ ದಾಖಲೆ ಕೂಡ ಉನ್ನತ ಗುರಿಗಾಗಿ ತಮ್ಮನ್ನು ಸಮರ್ಪಿಸಿದಾಗ ಅಸಾಧ್ಯವೆನಿಸುವ ಸಾಧನೆಗಳೂ ಸಾಧ್ಯವೆಂಬುದನ್ನು ನೆನಪಿಸುತ್ತದೆ ಎಂದು ತಿಳಿಸಿದರು.



50 ಸಾವಿರ ಯೋಗ ಶಿಕ್ಷಕರ ಜಾಲ

ವರ್ಷಗಳ ಕಾಲ ಅಕ್ಷರ್ ಯೋಗ ಕೇಂದ್ರವು ವಿಶ್ವದ ಅತ್ಯಂತ ಪ್ರಭಾವಶಾಲಿ ಯೋಗ ಸಂಸ್ಥೆಗಳಲ್ಲಿ ಒಂದಾಗಿ ಬೆಳೆದಿದ್ದು, 100ಕ್ಕೂ ಹೆಚ್ಚು ದೇಶಗಳಲ್ಲಿ 2 ಕೋಟಿಗೂ ಅಧಿಕ ಯೋಗಾಭ್ಯಾಸಿಗಳ ಮೇಲೆ ಪ್ರಭಾವ ಬೀರಿದೆ. ಜೊತೆಗೆ 50,000ಕ್ಕೂ ಹೆಚ್ಚು ಪ್ರಮಾಣಿತ ಯೋಗ ಶಿಕ್ಷಕರ ಜಾಲವನ್ನು ನಿರ್ಮಿಸಿದೆ ಎಂದು ಹಿಮಾಲಯನ್ ಸಿದ್ಧ ಅಕ್ಷರ್ ತಿಳಿಸಿದರು.

ಶಾಸಕ ಎಸ್.ಆರ್. ವಿಶ್ವನಾಥ್ ಅಭಿಪ್ರಾಯ

ಮೋದಿಯವರ ನಾಯಕತ್ವ ದೇಶಕ್ಕೆ ಅಗತ್ಯ

• **ಬೆಂಗಳೂರು:** ಈಶಾನ್ಯ ರಾಜ್ಯಗಳಿಂದ ಹಿಡಿದು ಬೆಂಗಳೂರು ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಅನೇಕ ಮಹತ್ವಾಕಾಂಕ್ಷಿ ಯೋಜನೆಗಳನ್ನು ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರಂತಹ, ದೇಶೀಯತೆಯ ನಾಯಕತ್ವ ದೇಶಕ್ಕೆ ಅಗತ್ಯವಾಗಿದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಅಭಿಪ್ರಾಯಪಟ್ಟರು.

ನಗರದಸಂಚುರಿ ಕ್ಲಬ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಪ್ರಕಾಶ್ ಕೇಶವಪ್ರಸಾದ್ ಅವರ ಮೂರನೇ ಕೃತಿಯಾದ ವಿಕಾಸ ಪಥ ಪುಸ್ತಕವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ದೇಶದ ಭದ್ರತೆ ಮತ್ತು ರಕ್ಷಣಾ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸುವಲ್ಲಿ ಮೋದಿ ಸರ್ಕಾರ, ಶತ್ರು ರಾಷ್ಟ್ರಗಳ ಭಾರತದ ಸಾಮರ್ಥ್ಯದ ಅರಿವನ್ನು ಮೂಡಿಸಿದೆ ಎಂದರು.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ರಾಜಕೀಯ ಕ್ಷೇತ್ರದಲ್ಲಿ ಮಾಹಿತಿ ಹಂಚಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದ್ದು, ಬರೆಯುವವರ ಸಂಖ್ಯೆ ಕಡಿಮೆಯಾಗುತ್ತಿರುವುದು ವಿಷಾದನೀಯ. ಹಿಂದೆ ನೆಹರು, ಅಟಲ್ ಬಿಹಾರಿ ವಾಜಪೇಯಿ ಮೊದಲಾದ ನಾಯಕರು ನಿರಂತರವಾಗಿ ಲೇಖನಗಳು ಮತ್ತು ಪುಸ್ತಕಗಳನ್ನು ಬರೆಯುತ್ತಿದ್ದರು. ಆದರೆ ಇಂದು ರಾಜಕೀಯ ಕ್ಷೇತ್ರದಲ್ಲಿ ಅಕ್ಷರಗಳೊಂದಿಗೆ ನಂಟು ಹೊಂದಿರುವವರ ಸಂಖ್ಯೆ ಕಡಿಮೆಯಾಗಿದೆ. ರಾಜಕೀಯ ಪಕ್ಷಗಳು ಸಾಹಿತ್ಯ, ಸಂಸ್ಕೃತಿ ಮತ್ತು ಅಕ್ಷರಗಳನ್ನು ಉಳಿಸಿ ಬೆಳೆಸುವ ಪ್ರತ್ಯೇಕ ವೇದಿಕೆಗಳ ಅಗತ್ಯವಿದೆ. ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಸಲಹೆ ನೀಡಿದ್ದೇನೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ 10ಕ್ಕೂ ಹೆಚ್ಚು ಮಾಲ್‌ಗಳಿದ್ದರೂ, ವಿಶ್ವಮಟ್ಟದ ಸಾರ್ವಜನಿಕ ಗ್ರಂಥಾಲಯಗಳ ಕೊರತೆ ಇದೆ. ಅದ್ದರಿಂದ ಲೇಖಕರು, ಪುಸ್ತಕಗಳು ಮತ್ತು ಸಾಹಿತ್ಯ ಸಂಸ್ಕೃತಿಯನ್ನು ಪೋಷಿಸುವುದು ರಾಜಕೀಯ ನಾಯಕರು ಹಾಗೂ ಪಕ್ಷಗಳ ಜವಾಬ್ದಾರಿಯಾಗಿದೆ ಎಂದು ವಿಶ್ವೇಶ್ವರ ಭಟ್ ಹೇಳಿದರು.



> ವಿಕಾಸ ಪಥ ಕೇವಲ ಅಭಿವೃದ್ಧಿ ಕಾರ್ಯಗಳ ದಾಖಲೆಯಲ್ಲ, ದೇಶ ಎದುರಿಸಿದ್ದ ವಿವಿಧ ಸಮಸ್ಯೆಗಳಿಗೆ ಮೋದಿ ಸರ್ಕಾರ ಹೇಗೆ ಪರಿಹಾರ ಕಂಡುಕೊಂಡಿತೆ ಎಂಬುದನ್ನು ವಿವರಿಸುವ ಕೃತಿಯಾಗಿದೆ.
> ■ ಕೇಶವ ಪ್ರಸಾದ್, ವಿಪ ಸದಸ್ಯ

IN THE COURT OF THE SENIOR CIVIL JUDGE AND JMFC AT SHIDHLAGHATTA

O.S. NO. 258/2024

BETWEEN: SRI. PYARE JAN @ PYARE KHAN, Son of Rasool Khan @ Rasool Sab, aged about 70 years, Residing at No.153, Hunalagurki Village, Venkatagiri Kote Post, Vijayapura Hobli, Devanahalli Taluk, Bangalore Rural District 562164. ... **PLAINTIFF**

AND: 1. SRI. HAYATH KHAN, Son of Yusuff Khan, Since dead by his LRS 1a) SRI. NOORULLA, Son of Late. Hayath Khan, aged about 65 years, Residing at MST Fruit and Merchant, Sidlaghatta Road, Chintamani Town and Taluk, Chikkaballapura District. **2. SMT. MUNIYAMMA**, Wife of Late. Muni Akalappa, aged about 71 years, Residing at Vallapanahalli Village, Jangamakote Hobli, Sidlaghatta Taluk, Chikkaballapura District. **3. SRI.NARAYANASWAMY**, Son of Late. Munakkalappa, aged about 37 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **4. SRI.MUNIRAJU**, Son of Late. Munakkalappa, aged about 32 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **5. SRI.THIRUMALAPPA**, Son of Late. Munakkalappa, aged about 27 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **6. SMT.JAYAMMA**, Wife of Late. Muniyellappa @ Muniyappa, and daughter in law of Late. Munakkalappa, aged about 57 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **7. SRI.MUNIRAJU**, Son of Late. Muniyellappa @ Muniyappa, and grandson of Late. Munakkalappa, aged about 32 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **8. SRI.MANJUNATH**, Son of Late. Muniyellappa @ Muniyappa, and grandson of Late. Munakkalappa, aged about 30 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **9. SRI.NAGARAJU**, Son of Late. Muniyellappa @ Muniyappa, and grandson of Late. Munakkalappa, aged about 26 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **10. SRI. M.N. SHIVAMURTHY**, Son of Munivenkatappa, Major, Residing at Thattahalli Village, Shidlaghatta Taluk, Chikkaballapura District. **11. SRI.V.M.THIRUMALESH**, Son of Sri.Munikrishnappa, aged about 24 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **12. KUM. RADHIKA**, D/o Sri. Munikrishnappa, aged about 20 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **13. SMT.JYOTHI**, D/o Sri.Narayanswamy, aged about 25 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **14. SRI.MADHU KUMAR**, D/o Sri. Narayanswamy, aged about 24 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **15. SRI.ANAND.M**, D/o Sri.Muniraju, aged about 25 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **16. SMT.ASHA**, D/o Sri.Muniraju, aged about 24 years, Residing at Vallapanahalli Village, Jangamakote Hobli, Shidlaghatta Taluk, Chikkaballapura District. **17. SRI. VENKATESHWARA PRASAD MANAPOTY**, Son of Sri. M. Venkataramana, aged about 53 years, Residing at No.134, 3A Cross, Near Karnataka Bank, Kasturinagar, Bangalore North, Bangalore-560 043. **18. SMT.PALAMALA RADHIKA**, Wife of Venkateshwara Prasad Manapoty, aged about 54 years, Residing at No.134, 3A Cross, Near Karnataka Bank, Kasturinagar, Bangalore North, Bangalore-560043. ... **DEFENDANTS**

SUMMONS/NOTICE TO THE PROPOSED DEFENDANTS No. 1a) and 13

1a) SRI. NOORULLA, Son of Late. Hayath Khan, aged about 65 years, Residing at MST Fruit and Merchant, Sidlaghatta Road, Chintamani Town and Taluk, Chikkaballapura District.

13. SMT.JYOTHI, D/o Sri.Narayanswamy, aged about 25 years, Residing at Vallapanahalli Village, Jangamakote Hobli, Shidlaghatta Taluk, Chikkaballapura District.

Take Notice that the Plaintiff have filed the above case against you, for the relief of declaration and other reliefs of the suit schedule property. The said case is fixed to be held on **17/07/2026**.

Hence you are hereby directed to appear on that date before Senior Civil Judge at Shidlaghatta at **11:00 A.M** personally or through your counsel failing which the matter will be determined as ex-parte.

SCHEDULE PROPERTY

All that piece and parcel of the property be land in Old Sy.No.47, New Sy.No.69, measuring to an extent of 1 Acre 29 Guntas, situated at Vallapanahalli Village, Jangamakote Hobli, Shidlaghatta Taluk, Chikkaballapura District and bounded on the: **East by:** Land of Narayanappa. **West by:** Hirehalla Village boundary, **North by:** PACL India Ltd and **South by:** PACL India Ltd.

Given under my hand and seal of the court on this 18/06/2026

By order of the Court, Sheristedar, Sr. Civil Judge & J.M.F.C Sidlaghatta

H. NAGARAJA, Advocate
No. 5-3, Second Floor, Krishna Tower, 3rd Main Road, Gandhinagar, Bangalore-560009.

IN THE COURT OF THE FIRST ADDITIONAL DISTRICT MUNSIF OF ERODE

I.A.No. 1 / 2026

O.S.No. 26/2026

K.G. Sadhi Kumar - Petitioner/Plaintiff

Vs

Gandhimathi,

M/s. Vensito Technology Private Ltd.,(Door No.110, ...)

Phase,Bangalore - 560 078,

Karnataka State - 3rd Respondent/ 3rd Defendant

NOTICE AS PER THE ORDER OF THE HONOURABLE COURT

The petitioner/plaintiff has filed a suit in O.S.No.26 of 2026 for permanent injunction against you and two others before the Honourable First Additional District Munsif of Erode at Erode District - 638 011, Tamil Nadu in O.S.No.26 of 2026. In the above suit, the petitioner/plaintiff has filed an application in I.A.No.1 of 2026 for interim injunction against you and two others till the disposal of the suit. In the above suit and interlocutory application, you have to appear before the above said Honourable Court on 30.06.2026 through in person or your advocate at about 10.00 A.M., failing which an exparte order will be passed against you. This notice issued to you as per the order of the Honourable Court.

C. SARAVATHAN,
M.A., B.L.,Advocate, Enrol No: MS188/2011,
Dr. Radhakrishnan Street 2/8,
Teachers Colony, Erode-11.
Mobile: 9443036308

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 252 (ಹಳೆಯ ಸ.ನಂ. 26) ರ 20 ಗುಂಟೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಗುಬ್ಬಿ, ಪ: ಟ್ರಾಕ್-4, ಉ: ಗುಬ್ಬಿ, ದ: ಸ.ನಂ. 27 ರ ಜಮೀನು) ಇದರ ಮಾಲೀಕರಾದ 1) ಶ್ರೀ ಸಜ್ಜಪ್ಪ ಬಿನ್ ಚಿಕ್ಕಣ್ಣ, 2) ಶ್ರೀಮತಿ ಪುಟ್ಟಮ್ಮ ಕೋಂ ಸಜ್ಜಪ್ಪ, 3) ಶ್ರೀ ಸುರೇಶ್ ಎಸ್. ಬಿನ್ ಸಜ್ಜಪ್ಪ, 4) ಶ್ರೀಮತಿ ಚೆಲುವ ಕುಮಾರಿ ಕೋಂ ಸುರೇಶ್ ಹಾಗೂ 5) ಶ್ರೀ. ಮಧು ಬಿನ್ ಸಜ್ಜಪ್ಪ ವಾಸ: ಗುಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 18.09.2024 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ No.DBP-4-00508/2024-25 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀ ಸಜ್ಜಪ್ಪ, ಶ್ರೀಮತಿ ಪುಟ್ಟಮ್ಮ, ಶ್ರೀ. ಸುರೇಶ್ ಎಸ್., ಶ್ರೀಮತಿ ಚೆಲುವ ಕುಮಾರಿ, ಶ್ರೀ. ಮಧು ಮತ್ತು ಅವರ ಕುಟುಂಬದ ಸದಸ್ಯರು ಜವಾಬ್ದಾರರಲ್ಲ ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 254 (ಹಳೆಯ ಸ.ನಂ. 26) ರ 1 ಎಕರೆ 20 ಗುಂಟೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಗುಬ್ಬಿ, ಪ: ಗುಬ್ಬಿ, ಉ: ಗುಬ್ಬಿ, ದ: ಗುಬ್ಬಿ) ಇದರ ಮಾಲೀಕರಾದ 1) ಶ್ರೀ ಜಯಣ್ಣ ಎಸ್.ಎ, 2) ಶ್ರೀ ಮಲ್ಲೇಶ್ ಹಾಗೂ 3) ಶ್ರೀ ಮಂಜುನಾಥ್ 4) ಶ್ರೀಮತಿ ಕಲಾವತಿ ಡಿ.ಎಸ್. ಕೋಂ ಮಲ್ಲೇಶ್ ವಾಸ: ಗುಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 18.10.2024 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ DBP-4-00633/2024-25 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀ ಜಯಣ್ಣ, ಮಲ್ಲೇಶ್, ಮಂಜುನಾಥ್, ಹಾಗೂ ಶ್ರೀಮತಿ ಕಲಾವತಿ ಡಿ.ಎಸ್. ಕೋಂ ಮಲ್ಲೇಶ್ ರವರ ಜವಾಬ್ದಾರರಲ್ಲ ಮತ್ತು ಅವರ ಕುಟುಂಬದ ಸದಸ್ಯರು ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 245 (ಹಳೆಯ ಸ.ನಂ. 26) ರ 1 ಎಕರೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಗುಬ್ಬಿ, ಪ: ಟ್ರಾಕ್-4, ಉ: ಟ್ರಾಕ್-1, ದ: ಸ.ನಂ. 26 ರ ಉಳಿದ ಭಾಗ) ಇದರ ಮಾಲೀಕರಾದ 1) ಶ್ರೀ ಮುನಿರಾಜು ಬಿನ್ ಪುಟ್ಟಪ್ಪ, 2) ಶ್ರೀಮತಿ ಮುನಿಯಮ್ಮ ಕೋಂ ಮುನಿರಾಜು, 3) ಶ್ರೀ ನವೀನ್‌ಕುಮಾರ್ ಬಿನ್ ಮುನಿರಾಜು ಹಾಗೂ 4) ಶ್ರೀಮತಿ ಜ್ಯೋತಿ ಬಿನ್ ಮುನಿರಾಜು, ವಾಸ: ಗುಳ್ಯದಿಂದ ಗ್ರಾಮ, ಹೆಗ್ಗಡಹಳ್ಳಿ ಅಂಚೆ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 21.10.2024 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ No.DBP-4-00640/2024-25 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀ ಮುನಿರಾಜು, ಶ್ರೀಮತಿ ಮುನಿಯಮ್ಮ, ಶ್ರೀ ನವೀನ್‌ಕುಮಾರ್, ಶ್ರೀಮತಿ ಜ್ಯೋತಿ ಮತ್ತು ಅವರ ಕುಟುಂಬದ ಸದಸ್ಯರು ಜವಾಬ್ದಾರರಲ್ಲ ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 246 (ಹಳೆಯ ಸ.ನಂ. 26) ರ 30 ಗುಂಟೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಸರ್ಕಾರಿ ಗುಬ್ಬಿ, ಪ: ಸರ್ಕಾರಿ ಗುಬ್ಬಿ, ಉ: ಟ್ರಾಕ್-5, ದ: ಟ್ರಾಕ್-3) ಇದರ ಮಾಲೀಕರಾದ 1) ಶ್ರೀ ಗಂಗಾಧರ್ ಬಿನ್ ಕದರಪ್ಪ, 2) ಶ್ರೀಮತಿ ಗೌರಮ್ಮ ಕೋಂ ಗಂಗಾಧರ, 3) ಕುಮಾರ ನಂದಿನಿ ಬಿನ್ ಗಂಗಾಧರ, 4) ಶ್ರೀ ಸಿದ್ದಾರ್ಥ ಜಿ. ಬಿನ್ ಗಂಗಾಧರ ಹಾಗೂ 5) ಶ್ರೀ ಶರತ್ ಜಿ. ಬಿನ್ ಗಂಗಾಧರ ವಾಸ: ಗುಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 18.09.2024 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ No.DBP-4-00511/2024-25 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀ. ಗಂಗಾಧರ್, ಶ್ರೀಮತಿ ಗೌರಮ್ಮ, ಕುಮಾರ ನಂದಿನಿ, ಶ್ರೀ ಸಿದ್ದಾರ್ಥ ಜಿ., ಶ್ರೀ ಶರತ್ ಜಿ. ಮತ್ತು ಅವರ ಕುಟುಂಬದ ಸದಸ್ಯರು ಜವಾಬ್ದಾರರಲ್ಲ ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 247 (ಹಳೆಯ ಸ.ನಂ. 26) ರ 1 ಎಕರೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಟ್ರಾಕ್ ನಂ. 7, ಪ: ಗುಬ್ಬಿ, ಉ: ಟ್ರಾಕ್-5, ದ: ಟ್ರಾಕ್ ನಂ. 6) ಇದರ ಮಾಲೀಕರಾದ 1) ಶ್ರೀ ಕೃಷ್ಣಪ್ಪ ಬಿನ್ ಚಿಕ್ಕಕದರಪ್ಪ, 2) ಶ್ರೀಮತಿ ವೆಂಕಟಮ್ಮ ಕೋಂ ಕೃಷ್ಣಪ್ಪ, 3) ಶ್ರೀ ಮುನಿರಾಜು ಬಿನ್ ಕೃಷ್ಣಪ್ಪ, 4) ಶ್ರೀಮತಿ ಮಾಲಾ ಬಿನ್ ಮುನಿರಾಜು, 5) ಶ್ರೀಮತಿ ಲಲಿತಾ ಬಿನ್ ಕೃಷ್ಣಪ್ಪ ಹಾಗೂ 6) ಶ್ರೀಮತಿ ನೇತ್ರಾ ಕೋಂ ಕೃಷ್ಣಪ್ಪ ವಾಸ: ಗುಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 18.09.2024 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ DBP-4-00510/2024-25 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀ ಕೃಷ್ಣಪ್ಪ, ಶ್ರೀಮತಿ ವೆಂಕಟಮ್ಮ, ಶ್ರೀ ಮುನಿರಾಜು, ಶ್ರೀಮತಿ ಮಾಲಾ, ಶ್ರೀಮತಿ ಲಲಿತಾ, ಶ್ರೀಮತಿ ನೇತ್ರಾ ಮತ್ತು ಅವರ ಕುಟುಂಬದ ಸದಸ್ಯರು ಜವಾಬ್ದಾರರಲ್ಲ ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 250 (ಹಳೆಯ ಸ.ನಂ. 26) ರ 20 ಗುಂಟೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಟ್ರಾಕ್-10, ಪ: ಟ್ರಾಕ್-8, ಉ: ಸರ್ಕಾರಿ ಒಣಿ, ದ: ಸ.ನಂ. 28 ರ ಜಮೀನು) ಇದರ ಮಾಲೀಕರಾದ 1) ಶ್ರೀ ನಾರಾಯಣಸ್ವಾಮಿ ಡಿ.ಕೆ. @ ನಾರಾಯಣಸ್ವಾಮಿ ಡಿ.ಕೆ. ಬಿನ್ ಕರಿಯಪ್ಪ, 2) ಶ್ರೀಮತಿ ಮಂಜುಳಾ ಕೋಂ ನಾರಾಯಣಸ್ವಾಮಿ, 3) ಶ್ರೀಮತಿ ಮಾನಸ ಎನ್. ಬಿನ್ ನಾರಾಯಣಸ್ವಾಮಿ ಹಾಗೂ 4) ಶ್ರೀ ಚರಣ್ ಎನ್. ಬಿನ್ ನಾರಾಯಣಸ್ವಾಮಿ ವಾಸ: ಗುಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 24.01.2023 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ No.DBP-4-00736/2022-23 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀ ನಾರಾಯಣಸ್ವಾಮಿ, ಶ್ರೀಮತಿ ಮಂಜುಳಾ, ಶ್ರೀಮತಿ ಮಾನಸ ಎನ್., ಶ್ರೀ ಚರಣ್ ಎನ್. ಮತ್ತು ಅವರ ಕುಟುಂಬದ ಸದಸ್ಯರು ಜವಾಬ್ದಾರರಲ್ಲ ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ನೋಟೀಸು

ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಗುಳ್ಯದಿಂದ ಗ್ರಾಮದ ಸ.ನಂ. 251 (ಹಳೆಯ ಸ.ನಂ. 26) ರ 25 ಗುಂಟೆ ಒಣ ಕೃಷಿ ಭೂಮಿಯ ಸ್ವತ್ತಿನ ವಿವರ (ಪೂ: ಗುಬ್ಬಿ, ಪ: ಗುಬ್ಬಿ, ಉ: ಗುಬ್ಬಿ, ದ: ಗುಬ್ಬಿ) ಇದರ ಮಾಲೀಕರಾದ ಹಾಗೂ ದಿವಂಗತ ಶ್ರೀಮತಿ ಅಂಜನಮ್ಮ ಕೋಂ ಚನ್ನಪ್ಪ ರವರ ಕಾನೂನುಬದ್ಧ ವಾರಸುದಾರರಾದ 1) ಶ್ರೀಮತಿ ಮುನಿಲಕ್ಷ್ಮಮ್ಮ ಕೋಂ ಲೇಟ್ ಚನ್ನರಾಯಪ್ಪ, 2) ಶ್ರೀ ಚೇತನ್ ಸಿ. ಬಿನ್ ಲೇಟ್ ಚನ್ನರಾಯಪ್ಪ ಹಾಗೂ 3) ಶ್ರೀಮತಿ ಚಂದನಾ ಸಿ. ಬಿನ್ ಲೇಟ್ ಚನ್ನರಾಯಪ್ಪ ವಾಸ: ಗುಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು, ದಿನಾಂಕ 03.02.2023 ರಂದು ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ No.DBP-4-00756/2022-23 ರಂತೆ 1) ಶ್ರೀ ಎಸ್.ಡಿ. ಮುನಿರಾಜು ಬಿನ್ ದೊಡ್ಡಗೋಪಾಲಪ್ಪ ಹಾಗೂ 2) ಶ್ರೀ ಬಿ.ಆರ್. ಲೋಕೇಶ್ ಬಿನ್ ಬಿ.ಆರ್. ರಂಗನಾಥ್ ರವರ ಪರವಾಗಿ ಮಾಡಿಕೊಟ್ಟಿದ್ದ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು (Registered GPA) ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದ್ದಾರೆ.

ಇನ್ನು ಮುಂದೆ ಸದರಿ ಜಾಮೀ ಏಜೆಂಟರೊಂದಿಗೆ ಈ ಸ್ವತ್ತಿನ ಮಾರಾಟ, ಅಡಮಾನ, ಕ್ರಯದ ಒಪ್ಪಂದ ಅಥವಾ ಯಾವುದೇ ವ್ಯವಹಾರ ಮಾಡುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಮಾಡತಕ್ಕದ್ದು. ಅದಕ್ಕೆ ನನ್ನ ಕಕ್ಷಿದಾರರಾದ ಶ್ರೀಮತಿ ಮುನಿಲಕ್ಷ್ಮಮ್ಮ, ಶ್ರೀ ಚೇತನ್ ಸಿ., ಶ್ರೀಮತಿ ಚಂದನಾ ಸಿ. ಮತ್ತು ಅವರ ಕುಟುಂಬದ ಸದಸ್ಯರು ಜವಾಬ್ದಾರರಲ್ಲ ಹಾಗೂ ಆ ವ್ಯವಹಾರಗಳು ಅವರಿಗೆ ಬದ್ಧವಾಗಿರುವುದಿಲ್ಲ.

ಶ್ರೀಮತಿ ಗೀತಾ ಬಿ. ಗಣೇಶ, ವಕೀಲರು
ನಂ.302, 3ನೇ ಮಹಡಿ, ವೆಂಕಟೇಶ್ವರ ನಿಲಯಂ ಭದ್ರಪ್ಪ ಲೇಔಟ್, ಬೆಂಗಳೂರು-560094,
ಮೊಬೈಲ್: 6361787238
ಸ್ಥಳ: ಬೆಂಗಳೂರು
ದಿನಾಂಕ: 23.06.2026

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ... ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ... ಯಾರಿಗಾದರೂ ಈ ಸ್ವತ್ತಿನ ಬಗ್ಗೆ ಯಾವುದೇ ಹಕ್ಕು, ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ಹಕ್ಕು ಇಲ್ಲವೆಂದು ಪರಿಗಣಿಸಿ ವ್ಯವಹಾರವನ್ನು ಮುಂದುವರಿಸಲಾಗುವುದು.

SCHEDULE 'A' PROPERTY

All that piece and parcel of the property bearing New No.24/1-17, 4th Cross, 5th Main Road, 7th Block, Katharigupppe, Banashankari 3rd Stage, Bangalore ward 56, New BBMP ward No165- Ganesh Mandira, earlier Northern & Southern Portion of the old site No.17 having Khatha No.24/1, Katharigupppe Village, Uttarahalli Hobli, Bangalore South Taluk, measuring East to West: on the Southern side 50.3 feet, on the Northern side 63 feet and North to South on the Eastern side 50.3 feet on the Western side 59.3 feet in all totally measuring 3152.57 Square feet and is bounded on the: East by- Road, West by-Property No.18 & 19, North by-Road, South by-Property belonging to Sri.Shamanna.

SCHEDULE 'B' PROPERTY

(Description of the Property hereby conveyed to the PURCHASERS)

All that piece and parcel of immovable property, Flat bearing Flat bearing No.G-003, on Ground floor, in "VIJAYALAKSHMI PALACE", built in earlier Northern & Southern portion of site No.17, New No.24/1-17/2/FG-003, Situated at 4th Cross, 5th Main Road, 7th Block, Katharigupppe, Banashankari 3rd Stage, Bangalore, BBMP ward No.56, 'Ganesh Mandira', PID No.56-94-17/2, measuring 839 Sq. Ft of super built up Area with One Covered Car parking space in Basement Floor, constructed on the Schedule 'A' Property, along with the corresponding and 327.21/3152.57 Sq. Ft. of Undivided share, right, title and interest in the Schedule 'A' Property.

MAHESHA. S B.A., LL.B.,
ADVOCATE KAR 482/08 #2780,
2nd Floor, Railway Gate Road,
K.G.Koppal MYSURU-570009,
Mob:9845243782

Date:22.06.2026
Place: Mysuru

IN THE COURT OF THE CITY CIVIL JUDGE, AT BANGALORE (CCH-2)

O.S. No.6945/2024

BETWEEN: Smt. Indrani, D/o. late Annayyappa, Aged about 65 years, R/at: No.20, 3rd Cross, 5th Main Road, S.R. Nagar, Bengaluru 560027 ... **PLAINTIFF**

AND: Smt. Shashikala, W/o. late Vijaya Kumar, Aged about 59 years, Sharada Nilaya, No.3, G-Floor, 18th Cross, 10th Main, Sampangiramnagar, Bengaluru 560027 and others ... **DEFENDANTS**

PUBLIC NOTICE / SUMMONS TO DEFENDANTS NOS. 2,7,11, 13 U/O. V RULE 20 OF CPC

2. Smt. Shoba, D/o. late Vijaykumar, Aged about 39 years, R/at: Sharada Nilaya, No.3, G-Floor, 18th Cross, 10th Main, Sampangiramnagar, Bengaluru-560027.

7. Smt. Veena, D/o. late Venugopal, Aged about 40 years, R/at: Sharada Nilaya, No.3, G-Floor, 18th Cross, 10th Main, Sampangiramnagar, Bengaluru-560027.

11. Smt. Rashmi, D/o. Manohar, Aged about 28 years, R/at: Sharada Nilaya, No.3, G-Floor, 18th Cross, 10th Main, Sampangiramanagar, Bengaluru-560027.

13. Smt. Chudamani, D/o. late Annayyappa, Aged about 60 years, R/at: Sharada Nilaya, No.3 First Floor, 18th Cross, 10th Main, Sampangiramanagar, Bengaluru-560027.

SCHEDULE PROPERTY

All the piece and parcel of immovable property residential site No 745, II Phase, Sampigehalli and now presently Old No.3, 3/1, 3/2, assigned as new No. 3, Old PID No. 77-27-3/1, 77-27-3/2, New PID 77-27-3, measuring East to West: 23 feet and North to South: 25 + 26/2 feet, totally measuring 586.5 sq.ft, situated at, Sampangiramanagara, Bengaluru BBMP Ward No.77 and bounded on: East by: Property bearing No.744, West by: Property bearing No.746, North by: Property bearing No. 738, South by: Road.

Where as the Plaintiff has instituted the above suit for partition against you before the Hon'ble City Civil and Sessions Judge, at Bengaluru (CCH-2). You are hereby summoned to appear before this Hon'ble Court in person are by a pleader on **24-07-2026** at 11:00 AM to answer the same, failing which the suit will be disposed off exparte.

Given under my hand, the seal of this Court on 19-06-2026.

By order of the court, Senior Sheristedar, City Civil Court, Bangalore.

SRIDEVI .N.S. Advocate
R/at Adarsha Nagar, Malur Taluk, Kolar District-563130.

IN THE COURT OF THE DEPUTY COMMISSIONER AT KOLAR

RAP.NO.124/2025

BETWEEN: P.V.Chandrashekar Reddy ..Appellant

AND: The Asst.Commisisnoer And others. ..Respondents

NOTICE UNDER ORDER 5 RULE 20 OF CPC TO RESPONDENT No.4 (a)

B.G.Purushothama Reddy S/o late Gattappa Aged about 56 years, R/at H Byapanahalli village, Byrakur Hobli, Mulbagal Taluk.

Whereas, the appellant have filed this appeal This against the orders passed by the 1st respondent.

Hon'ble court be pleased to issued notice to the proposed RESPONDENT No.4 (a) intentionally evading and avoiding to receive the summons issued by this Hon'ble court. Hence you proposed RESPONDENT No.4 (a) is hereby notice to appear in this court in person or by an advocate on 30.06.2026 at p.m. to file objections to the appeal, in default of your appearance on the same day the court take as exparte.

Given under my hand seal and signature on this 20th day of June 2026 at Kolar.

By order of the court.
Deputy Commissioner, Kolar
Advocate of appellant
R.Raghupathigowda Advocate, Kolar
Kolar, Date: 16.06.2026

IN THE COURT OF THE DEPUTY COMMISSIONER AT KOLAR

LND/CR./NO.19/2026

BETWEEN: Balasusundram K GPA Holder of Kavitha ...Appellant

And The Asst. Commissioner And others

..Respondent

NOTICE TO PROPOSED RESPONDENT NO.9 THROUGH PAPER PUBLICATION AS PER UNDER ORDER 5 RULE 20 OF CPC

Respondent No.9

Syed Ameer Anja S/o Late Syed Basha, Aged about 35 years, R/at Dommasandra village, Sarjapura Hobli, Anekal Taluk Bangalore Rural district-562 125

..Respondents

Whereas, the appellant have instituted the appeal against the orders passed against the orders passed by the 1st respondent in LND.RUC.32/2023 DT.22.12.2023 in respect of old Sy.No.87 new Sy.No.216 measuring 1.00 acre of Alambadi village, Lakkur Hobli, Malur Taluk. You the respondent No.9 have been evading to receive the summons issued by this Hon'ble court. Hence you are hereby summoned to appear on this court in person or by an advocate on 29.06.2026 at 3.00 p.m.. to answer the same, failing which the suit will be disposed of exparte.

Given under my hand and seal of the court on this the 16th day of June 2026 at Kolar.

By order of the court
Deputy of Commissioner At KLolar
Advocate for appellant **C. Srinivas**
Advocate, Kolar.
Kolar, Date; 16.6.2026

IN THE COURT OF THE HON'BLE 3RD ADDITIONAL CIVIL JUDGE AND JMFC AT KOLAR

O.S. 680/2016

PLAINTIFF: CHANDRAPPA

V/s

DEFENDANTS: DHARMARAJ & OTHERS.

To,

RATHNAMMA, D/o Late N. Muniyappa Aged about 40 years, R/o No.17, 9th Cross, 1st Main, Mukambika Layout, Mylsandra, Kengeri, Bangalore-560059.

SUMMONS

Whereas, the Plaintiff has filed the above suit against the Defendant No.23 for Partition and Separate Posession, pertaining to the Plaint Schedule Property.

You are hereby summoned to appear in this Court in Person or by a Pleader duly instructed and able to answer all the material questions relating to the suit, on 01.08.2026 at 11-00 A. M. to answer the claim.

Take Notice that in default of your appearance on the day mentioned above, the suit will be heard and determined in your absence as Ex-parte.

Given under my hand and the seal of this Court on this 22.06.2026 day.

BY ORDER OF THE COURT
Chief Ministerial Officer, Prl. Civil Judge & JMFC Court, Kolar
D.S. RAMAGOPAL, ADVOCATE,
NEHALA COMPLEX, FORT, KOLAR
KOLAR, DATE: 22.06.2026

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದದ್ದು. ಆದರೆ ಅದರಲ್ಲಿ ಪ್ರತಿಪಾದಿಸಲಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ-577204.

Ph. 08182-250785 Email: cfworkingplansmg@gmail.com

ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಕಾಯೋಮೋಶಿ /ಎ2/RCCP/ಇ-ಟೆಂಡರ್/ಸಿಆರ್-16/2026-27 ದಿನಾಂಕ: 19.06.2026.

KPPP Portal ಮುಖಾಂತರ ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿನಲ್ಲಿ "Construction of RCC Pillars of Specified Dimension at the given locations along the Surveyed Notified Forests for the Purpose of Boundary Demarcation in the Divisions of Shivamogga, Bhadravathi, Sagar, Mangalore, Kundapura and Kudremukh Wildlife during the Year 2026-27",ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು KPPP Portal ಮುಖಾಂತರ ಒಟ್ಟು ಅಂದಾಜು ರೂ. 79.38 ಲಕ್ಷಗಳ ಒಟ್ಟು 36 ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ 4ನೇ ದರ್ಜೆಯ / ಮೇಲ್ಪಟ್ಟ ದರ್ಜೆಯ ಪರವಾನಿ ಹೊಂದಿರುವ ಅರ್ಹ ಅರ್ಜಿ ಲೋಕೋಪಯೋಗಿ ಗುತ್ತಿಗೆದಾರರು ದಿನಾಂಕ: 06.07.2026 ರ ಸಂಜೆಯೊಳಗೆ as per KPPP-Portal ಟೆಂಡರನ್ನು ಸಲ್ಲಿಸಬಹುದಾಗಿದೆ. ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಪಡೆದುಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182-250785 ಅಥವಾ ಖುದ್ದಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- (ಜ್ಞಾನನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ

ವಾ.ಪ್ರ.ಸಂ/ಶಿವ/2026-27/...

IN THE COURT OF MOTOR ACCIDENT CLAIMS TRIBUNAL AT BENGALURU (SCCH-23)

MVC No. 1024/2026

BETWEEN : Sani Gosai & another ...**Petitioner**

AND: Vinay M.D & another ...**Respondents**

Notice to the Respondent No. 1

Vinay M.D, S/o: Devendra, No.D-603, Century Central, Kanakapura Main Road, Bengaluru - 560062.

Take notice that the above petitioners had filed the above claim petition against the Respondents for the compensation of Rs.30,00,000/- for the death of Late Bahuran Gosai in an RTA, dated 13-12-2025 at about 11.35 P.M., On Mysore Main Road, Near Kanaminike Toll, Kumbalagudu, Bengaluru, by offending Car bearing No. KA-05-MF-3074. The Respondent No. 1 above named is hereby directed to appear before this Hon'ble Court either in person or through the pleader **on the day 7.8.2026**, before SCCH-23 at 11.00 a.m., to defend the above case, failing which the matter will be determined in your absence.

Given under my hand & seal of the court on this 18th day of June 2026.

By order of the Court, Assistant Registrar, Court of Small Causes, Bangalore.

Advocate for Petitioner:
K. G. Siddalingegowda, Advocate
No. 2, Maurya Mansion, Gandhinagar, Bengaluru.

CHANGE OF NAME

I, Priti Patel, aged about 40 years, residing at Flat No. A-106, Aakruti Aura Springs, Narayanappa Garden, Whitefield, Bengaluru - 560066, have changed my name from **Preetti Chaudhari** to **Priti Patel,** vide affidavit dated 22/6/2026 sworn to before Yankoba Advocate and Notary Bangalore.

ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ

ತಾ: ಜಿ: ಗದಗ

ಸಂಖ್ಯೆ:ಪಪಂಮು/ಕಾ.ವಿ./ಎಸ್.ಎಫ್.ಸಿ/ಟೆಂಡರ್/ಮು-/2026-27 ದಿನಾಂಕ: 20-06-2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕ ಅಧಿನಿಯಮ-2000ರ ಪ್ರಕಾರ **"ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್"** ಪದ್ಧತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ **ಇಂಡೆಂಟ್ ಸಂಖ್ಯೆಗಳು-DMA/2026-27/SE7843/CALL-3** ನೇದ್ದರ ಕಾಮಗಾರಿಗೆ ನಿರ್ವಹಣೆಗಾಗಿ **ಕೆ.ಡಬ್ಲ್ಯೂ 1/2/3** ದಸ್ತಾವೇಜಿನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಚಾಲ್ತಿ ಸಾಲಿನ ಅರ್ಹ ಪಿಡಬ್ಲ್ಯೂಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1) ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 29-06-2026 ಸಮಯ: 16.00 ಗಂಟೆಗೆ**

2) ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30-06-2026 ಸಮಯ: 16:30 ಗಂಟೆಗೆ**

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳಾಗಿದ್ದಲ್ಲಿ ಮುಂದಿನ ದಿನಾಂಕದಂದು ಜರುಗಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಕಾಮಗಾರಿ ಇ.ಎಂ.ಡಿ. ಪೋರ್ಟಲ್‌ನಲ್ಲಿ ಪಾವತಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ **http://www.mulagundatown.mrc.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ತಿರಸ್ಕರಿಸುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/- (ಶ್ರೀ.ಮಂಜುನಾಥ ಪಿ ಗುಳೇದ) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಮುಳಗುಂದ	ಸಹಿ/- (ಶ್ರೀನಿವಾಸಮೂರ್ತಿ ಕುಲಕರ್ಣಿ) ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ತಹಶೀಲ್ದಾರ ಹಾಗೂ ತಾಲೂಕ ದಂಡಾಧಿಕಾರಿಗಳು ಗದಗ

ವಾ.ಸಂ.ಸಾ.ಇ/ಗದಗ/131/ಜಾಹೀರಾತು/2026-27

ಪುರಸಭಾ ಕಾರ್ಯಾಲಯ, ಶ್ರೀನಿವಾಸಪುರ

ಕೋಲಾರ ಜಿಲ್ಲೆ-563135 E mail :ka.srinivasapura.tmc@gmail.com
itstaff_ulb_srinivasapura@yahoo.co.in, Website:www.srinivasapuratown.mrc.gov.in,
ದೂ.ಸಂ.: 08157-245160

ಕ್ರ.ಸ: ಪುಸಶ್ರೀ/ಕಾಂತ್ರಿಕ ಶಾಖೆ/ಸಿಆರ್/01/2026-27 ದಿನಾಂಕ: 18.06.2026

ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧ್ಯಾದೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ/06/ಟಿ.ಪಿ.ಪಿ/2006, ಬೆಂಗಳೂರುರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸರಬರಾಜುದಾರರು/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಸಲ್ಲಿಕೆಗಾಗಿ ಅಂತರ್ಜಾಲ **http//kppp.karnataka.gov.in** ಮೂಲಕ ಪಡೆದುಕೊಳ್ಳತಕ್ಕದ್ದು ಹಾಗೂ ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಟೆಂಡರ್ ತಿದ್ದುಪಡಿಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರವೇ ಪ್ರಕಟಪಡಿಸಲಾಗುತ್ತದೆ.

ಕ್ರ ಸಂ	ಇಂಡೆಂಟ್ ನಂಬರ್	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1.	DMA/2026-27/WS/WORK_INDENT58914/CALL-2	1,66,000/-	5,000/-
2.	DMA/2026-27/WS/WORK_INDENT58901/CALL-2	1,62,000/-	5,000/-

ಕರ್ನಾಟಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 25.06.2026 ರಂದು ಸಂಜೆ 5.30 ಗಂಟೆ** ಹಾಗೂ ಇತರೆ ಮಾಹಿತಿಗಳನ್ನು ವೆಬ್‌ಸೈಟ್ ಮೂಲಕ ಪಡೆದುಕೊಳ್ಳತಕ್ಕದ್ದು.

ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ಶ್ರೀನಿವಾಸಪುರ	ಸಹಿ/- ಮುಖ್ಯಾಧಿಕಾರಿ ಪುರಸಭೆ, ಶ್ರೀನಿವಾಸಪುರ

ವಾಪ್ರಸಂ/ಕೋಲಾರ/ಆರ್.ಓ.ನಂ:131/ಸಿಎಸ್‌ಎಸಿಎ/2026-27

ಕೃಷಿ ಇಲಾಖೆ

ಕೃಷಿ ಉತ್ಪನ್ನ ನಿರ್ದೇಶಕರು-2 ಕಾರ್ಯಾಲಯ,

ನವನಗರ ನಗರ ಜಮಖಂಡಿ

E-mail :dda2jkd@gmail.com

ಫೋನ್ ನಂ : 08354 - 235370 [Fax] 235370

ಸಂಖ್ಯೆ:ಉಕೃನಿ-1/ಹೊರಗುತ್ತಿಗೆ/ಸಿಬ್ಬಂದಿ/2026-27 ದಿನಾಂಕ:20-06-2026

ಇ-ಟೆಂಡರ್ ದಾಸ್ತಾವೇಜು

ಸನ್ 2026-27 ನೇಸಾಲಿಗೆ ಈ ಕಚೇರಿಯ ಅಧೀನದಲ್ಲಿ ಬರುವ ಸಹಾಯಕ ಕೃಷಿ ನಿರ್ದೇಶಕರು ಜಮಖಂಡಿ, ಬೀಳಗಿ ಮತ್ತು ಮುಧೋಳ ಮತ್ತು ಮಣ್ಣು ಆರೋಗ್ಯ ಕೇಂದ್ರ ಜಮಖಂಡಿ ಕಚೇರಿಗಳಲ್ಲಿ ಕೃಷಿ ನಿರ್ದೇಶನಾಲಯ ಮತ್ತು ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮ / ಅಭಿಯಾನ ಯೋಜನೆಯಡಿ ಕಾರ್ಯನಿರ್ವಹಿಸಲು ಅನುಬಂಧ-1 ರಂತೆ ಬೆರಳಚ್ಚುಗಾರರು, ಗ್ರೂಪ್ ಡಿ, ವಾಹನ ಚಾಲಕರು, ತಾಂತ್ರಿಕ ಸಿಬ್ಬಂದಿ, ಮಣ್ಣು ಮಾದರಿ ವಿಶ್ಲೇಷಕರು, ಪ್ರಯೋಗಶಾಲಾ ಸಹಾಯಕರು, ಪ್ರಯೋಗಶಾಲಾ ಪರಿಚಾರಕರು, ಡಾಟಾಎಂಟ್ರಿ ಆಪರೇಟರ್, ಗ್ರೂಪ್ ಡಿ ಹುದ್ದೆಗಳ ಸೇವೆ ಅವಶ್ಯಕತೆಯಿದ್ದು ಮತ್ತು ಅನುಬಂಧ-2 ರಲ್ಲಿ ಸಿಬ್ಬಂದಿಗಳ ವಿದ್ಯಾರ್ಹತೆ ಮತ್ತು ಸೇವಾ ಅನುಭವಗಳ ಮಾಹಿತಿಯನ್ನು ನಮೂದಿಸಿದ್ದು, ಈ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಮೇಲೆ ಸಿಬ್ಬಂದಿಗಳನ್ನು ಪೂರೈಸಲು ಅಸಕ್ತ ಸಂಸ್ಥೆಗಳಿಂದ ಟೆಂಡರನ್ನು ಕರೆಯಲಾಗಿದೆ. ಟೆಂಡರ ಅವಧಿಯು ಒಂಭತ್ತು ತಿಂಗಳಿಗೆ ಅಥವಾ ಇಲಾಖೆಯು ನಿಗದಿಪಡಿಸುವ ಮುಂದಿನ ಆದೇಶದವರೆಗೆ ಇರುತ್ತದೆ.

ಟೆಂಡರಗೆ ಸಂಬಂಧಿಸಿದ ಇತರೆ ಷರತ್ತುಗಳು ಮತ್ತು ನಿಬಂಧನೆಗಳು ಟೆಂಡರ ದಾಸ್ತಾವೇಜಿನಲ್ಲಿ ನಮೂದಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ **Website:WWW.kppp.karnataka.gov.in** ಮತ್ತು ಈ ಕಚೇರಿಯ ದೂರವಾಣಿ ಸಂಖ್ಯೆ **08353-220052** ಗೆ ಕಚೇರಿ ವೇಳೆಯಲ್ಲಿ ಕರೆಮಾಡಿ ಮಾಹಿತಿ ಪಡೆಯಬಹುದಾಗಿದೆ.

ಬಿಡ್‌ನ್ನು ಸಲ್ಲಿಸುವ ಕೊನೆಯ ದಿನಾಂಕ	30-06-2026
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	02-07-2026
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	ತಾಂತ್ರಿಕ ಬಿಡ್‌ನ ವಿಶ್ಲೇಷಣೆಯ ನಂತರ ತಿಳಿಸಲಾಗುವುದು
ಟೆಂಡರ್‌ನ್ನು ತೆರೆಯುವ ಸ್ಥಳ	ಉಪ ಕೃಷಿ ನಿರ್ದೇಶಕರು-2 ಕಾರ್ಯಾಲಯ, ನವನಗರ, ಜಮಖಂಡಿ ದೂರವಾಣಿ ಸಂಖ್ಯೆ: 08353-220052 E-mail:dda2jkd@gmail.com

ಸಹಿ/-
ಉಪ ಕೃಷಿ ನಿರ್ದೇಶಕರು-2
ಜಮಖಂಡಿ

ವಾ.ಪ್ರ.ಸಂ.ಇ/ಬಾಗಲಕೋಟೆ/184/ಜಾಹೀರಾತು/2026-27

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ನಂ: ಇಇ/ಎಐಡಿ/ಬೀದರ/ತಾ.ಶಾ-1&2/ಟೆಂಡರ್/2026-27/ 1380 ದಿನಾಂಕ: 20-6-2026

ಕೆಪಿಪಿ-ಪ್ರೋಕ್ಯೂರಮೆಂಟ್, ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. KPP-Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ.KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ.KPP -Portalನಲ್ಲಿ ನಮೂದಿಸಿದಂತೆ. 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP-Portalನಲ್ಲಿ ನಮೂದಿಸಿದಂತೆ. 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP-Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೊನೆಯ ದಿನಾಂಕ. ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ **:29-06-2026 ರಂದು 17.00 ಗಂಟೆವರೆಗೆ.** 7) ಪ್ರೀಬಿಡ್ ಮೀಟಿಂಗ ಸ್ಥಳ ದಿನಾಂಕ ಮತ್ತು ಸಮಯ. ಕೆ.ಡಬ್ಲ್ಯೂ -4 ಮಾತ್ರ ಕಾರ್ಯನಿರ್ವಾಹಕ ಇಂಜನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಪ್ರತಾಪನಗರ ನೌಬಾದ, ಬೀದರ. **25-06-2026 ರಂದು 11.00 ಗಂಟೆಗೆ.** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ **:01-07-2026 ರಂದು 16.00 ಗಂಟೆ ವರೆಗೆ.** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ: **03-07-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ**, 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 & ಕೆ.ಡಬ್ಲ್ಯೂ -4 ಮಾತ್ರ **06-07-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ**, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ,ಕಛೇರಿ ವಿಳಾಸ, ದೂರವಾಣಿ ಸಂಖ್ಯೆ,ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,ವಿಭಾಗ, ಬೀದರ. ದೂರವಾಣಿ ಸಂ: 08482 232080 12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

ವಾ.ಪ್ರ.ಸಂ.ಇ/ಬೀದರ/70/ಸಿ.ಎಸ್.ಎ.ಸಿ.ಸಿಎ/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ(ಐ.ಟಿ)

ಇ-ಟೆಂಡರ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000 ರ ಪ್ರಕಾರ ಆಕ್ಟ 2000ರ ನಿಯಮದಂತೆ ಸರ್ಕಾರದ ಅಧಿಕೃತ ವಿಐನ್ನಿದಾರರು/ಪರವಾನಿಗೆ ಹೊಂದಿರುವ/ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರಗಳಲ್ಲಿ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು:- ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.

ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜನೀಯರ (ಐ.ಟಿ) ಇವರ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836-2251955 ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in/** ದಲ್ಲಿ ಪಡೆಯಬಹುದು ಹಾಗೂ ಸದರ ಟೆಂಡರ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟನಲ್ಲಿ ಅ.ನಂ 1 ರಿಂದ 5ರ ವರೆಗಿನ ದಾಖಲೆಗಳನ್ನು ದಿ:-**24.06.2026** ರಿಂದ ಪಡೆಯಬಹುದು. ಒಂದು ವೇಳೆ ಸದರ ಟೆಂಡರಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಟೆಂಡರ್ ಕಾಮಗಾರಿ

ಅ. ನಂ	ಇಂಡೆಂಟ್ ನಂ	ವಾರ್ಡ ಅನುದಾನ ಮತ್ತು ವಾರ್ಡ ನಂ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	ಟೆಂಡರ ತೆರೆಯುವ ದಿನಾಂಕ
1	DMA/2026-27/OW/WORK_INDENT57288	51ನೇ ವಾರ್ಡ ಅನುದಾನ	20.00	09.07.2026 ಸಾಯಂಕಾಲ 05:00 ಗಂಟೆಗೆ	10.07.2026 ಸಾಯಂಕಾಲ 05:30 ಗಂಟೆಗೆ
2	DMA/2026-27/OW/WORK_INDENT60171	77ನೇ ವಾರ್ಡ ಅನುದಾನ	21.00		
3	DMA/2026-27/SE7947	ಸಾಮಾನ್ಯ ಅನುದಾನ	402.64		
4	DMA/2026-27/SE8088		68.00		
5	DMA/2026-27/IND6379		15.00	30.06.2026 ಸಾಯಂಕಾಲ 05:00 ಗಂಟೆಗೆ	01.07.2026 ಸಾಯಂಕಾಲ 05:30 ಗಂಟೆಗೆ

ಕಾರ್ಯನಿರ್ವಾಹಕ ಅಭಿಯಂತರರು (ಐ.ಟಿ)
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾಪ್ರಸಂ/ಧಾ/ಮಿಶಾ/345/2026-27

ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಸಚಿವ ಕೃಷ್ಣಬೈರೇಗೌಡ ಅಸಮಾಧಾನ

ಅವೈಜ್ಞಾನಿಕ ಕಾಮಗಾರಿಗೆ ಸಾರ್ವಜನಿಕರ ಹಣ ಪೋಲು

• **ಬೆಂಗಳೂರು:** ಎಲಿವೇಟೆಡ್ ಕಾರಿಡಾರ್ ಆಗುತ್ತೆ, ಫ್ಲೈಓವರ್ ಬರುತ್ತೆ ಅಂತ ಗೊತ್ತಿದ್ದೂ ವೈಟ್ ಟ್ಯಾಪಿಂಗ್ ಮಾಡೋದೇಕೆ. ಆಮೇಲೆ ಫ್ಲೈಓವರ್ ಕಾರಣಕ್ಕೆ ಮತ್ತೆ ವೈಟ್ ಟ್ಯಾಪಿಂಗ್ ಕಿತ್ತಾಕೋದು ಯಾರಿಗೆ ಬಿಲ್ ಮಾಡೋಕೆ? ನೂರಾರು ಕೋಟಿ ಖರ್ಚು ಮಾಡಿದ್ರೂ ಫುಟ್ ಪಾತ್-ಸರ್ವೀಸ್ ರಸ್ತೆ ನಿರ್ಮಾಣವನ್ನು ಸಹ ಸರಿಯಾಗಿ ವೈಜ್ಞಾನಿಕವಾಗಿ ಮಾಡಲ್ಲವೇಕೆ? ಎಂದು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ಅಧಿಕಾರಿಗಳ ವಿರುದ್ಧ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅಸಮಾಧಾನ ಹೊರಹಾಕಿದ್ದಾರೆ.

ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೃಷ್ಣ ಬೈರೇಗೌಡ ಗರಂ ಆಗಿದ್ದಾರೆ.

ನಿರ್ದಿಷ್ಟ ಮಾರ್ಗದಲ್ಲಿ ಫ್ಲೈಓವರ್ ಅಥವಾ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವ ಯೋಜನೆಯ ಗಮನದಲ್ಲಿದ್ದರೂ, ಅಲ್ಲಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ವೈಟ್ ಟಾಪಿಂಗ್ ಏಕೆ ಮಾಡಲಾಯಿತು? ಈಗ ಫ್ಲೈಓವರ್ ಪಿಲ್ಲರ್ ನಿರ್ಮಾಣಕ್ಕಾಗಿ ಅದೇ ವೈಟ್ ಟಾಪಿಂಗ್ ರಸ್ತೆಯನ್ನು ಮತ್ತೆ ಕತ್ತರಿಸಿ, ಅಗೆಯಬೇಕಾದ ಪರಿಸ್ಥಿತಿ ಬಂದೊದಗಿದೆ.

ಇದು ಕೇವಲ ಯೋಜನಾಬದ್ಧತೆಯ ಕೊರತೆಯಲ್ಲ,



ಸಾರ್ವಜನಿಕರ ಹಣವನ್ನು ನೀರು ಪಾಲು ಮಾಡುವ ತಂತ್ರ ಎಂದು ಅವರು ಆಕ್ರೋಶ ಹೊರಹಾಕಿದ್ದಾರೆ.


ಇನ್ನು ಮುಂದೆ ಯಾವುದೇ ಕಾಮಗಾರಿ ನಡೆಸುವ ಮುನ್ನ ಕಟ್ಟುನಿಟ್ಟಾದ ಮ್ಯಾಪಿಂಗ್ ಹಾಗೂ ಲಿಖಿತ ನಿರ್ಧಾರಗಳನ್ನು ದಾಖಲಿಸಬೇಕು ಎಂದು ಸೂಚಿಸಿದರು.

ಕ್ಯಾರೇಜ್ ವೇ - ಸರ್ವಿಸ್ ರಸ್ತೆ ವಿನ್ಯಾಸದಲ್ಲಿ ಲೋಪ

ಮುಖ್ಯ ಕ್ಯಾರೇಜ್ ವೇ ಮತ್ತು ಸರ್ವಿಸ್ ರಸ್ತೆಗಳ ಮಧ್ಯೆ ಸುಮಾರು 7 ರಿಂದ 8 ಅಡಿಯಷ್ಟು ಜಾಗವನ್ನು ಅನಗತ್ಯವಾಗಿ ಮೀಡಿಯನ್ ಹಾಗೂ ಆರ್‌ಸಿಸಿ ಡ್ರೈನ್ ನಿರ್ಮಾಣಕ್ಕೆ ಬಳಸಿ ಪೋಲು ಮಾಡಲಾಗಿದೆ. ಕಾಲ್ನಡಿಗೆ ಸಂಚಾರವೇ ಇಲ್ಲದ ಹಾಗೂ ಬಸ್ ನಿಲ್ದಾಣವೂ ಇರದ ಈ ಜಾಗದಲ್ಲಿ ನಿರ್ಮಿಸಲಾಗಿರುವ 4 ಅಡಿಯ ಫುಟ್‌ಪಾತ್ ಯಾರೊಬ್ಬರ ಬಳಕೆಗೂ ಬರುತ್ತಿಲ್ಲ ಎಂದು ರಸ್ತೆ ವಿನ್ಯಾಸದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಅನಗತ್ಯವಾಗಿ ಮಧ್ಯದಲ್ಲಿ ಜಾಗ ವ್ಯರ್ಥ ಮಾಡುವ ಬದಲು, ಆ ಜಾಗವನ್ನು ರಸ್ತೆಯ ಕೊನೆಯಲ್ಲಿರುವ ಮುಖ್ಯ ಫುಟ್‌ಪಾತ್‌ಗೆ ಬಳಸಿಕೊಂಡಿದ್ದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತಿತ್ತು. ಪ್ರಸ್ತುತ ವಿನ್ಯಾಸದಿಂದಾಗಿ ಇತ್ತ ಸರ್ವಿಸ್ ರಸ್ತೆಯೂ ನಿಗದಿತ ಪ್ರಮಾಣದಲ್ಲಿಲ್ಲ, ಅತ್ತ ಮುಖ್ಯ ಫುಟ್‌ಪಾತ್ ಕೂಡ ಗುಣಮಟ್ಟದ್ದಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿ, ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಕ್ಯಾನ್ಸರ್ ತಪಾಸಣೆ



ಮುತ್ಯಾಲಮ್ಮ ನಗರದಲ್ಲಿ ಶನಿವಾರ ಆರ್‌ಎಸ್‌ಎಸ್ ಮತ್ತು ರಾಷ್ಟ್ರ ಸೇವಿಕ ಸಮಿತಿ ವತಿಯಿಂದ ಆರೋಗ್ಯ ಭಾರತಿ ಹಾಗೂ ಕರ್ನಾಟಕ ಕ್ಯಾನ್ಸರ್ ಸೊಸೈಟಿ ಸಹಯೋಗದೊಂದಿಗೆ ಕ್ಯಾನ್ಸರ್ ತಪಾಸಣೆ ಕಾರ್ಯಕ್ರಮ ನಡೆಯಿತು. ಈ ವೇಳೆ ಸುಮಾರು 80 ಜನರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಕಿರುಸುದ್ದಿ

ಕಾಯ್ದೆ ಉಲ್ಲಂಘನೆ: 3 ಬಾರ್ ವಿರುದ್ಧ ಪ್ರಕರಣ ದಾಖಲು

• **ಬೆಂಗಳೂರು:** ಪೊಲೀಸ್ ಅಧಿಕಾರಿಗಳು ವೈನ್ ಶಾಪ್, ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮೇಲೆ ಸೋಮವಾರ ದಾಳಿ ನಡೆಸಿ, ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿರುವ ಮೂರು ವೈನ್ ಶಾಪ್, ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಬೆಂಗಳೂರು ನಗರ ಉತ್ತರ ವಿಭಾಗದ ಪೊಲೀಸ್ ಠಾಣೆ ಸರಹದ್ದಿನಲ್ಲಿ ಪೊಲೀಸ್ ಅಧಿಕಾರಿಗಳು ಸೇರಿದಂತೆ ವಿಶೇಷ ಕಾರ್ಯಾಚರಣೆ ನಡೆಸಿ, 13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ 69 ವೈನ್ ಶಾಪ್, 64 ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಪರಿಶೀಲಿಸಿದ್ದಾರೆ. ಇವುಗಳಲ್ಲಿ ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿರುವ ಮೂರು ವೈನ್ ಶಾಪ್, ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೇಗದ ಚಾಲನೆ: ವಾಹನ ಸವಾರರಿಗೆ ದಂಡ

• **ಬೆಂಗಳೂರು:** ಅತಿ ವೇಗವಾಗಿ ವಾಹನ ಚಲಾಯಿಸಿದವರ ವಿರುದ್ಧ ಬೆಂಗಳೂರು ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ಕೈಗೊಂಡು, ಸುಮಾರು 46 ವಾಹನ ಸವಾರರಿಗೆ 46,000 ರೂ.ದಂಡ ವಿಧಿಸಿದ್ದಾರೆ. ಬೆಂಗಳೂರು ನಗರದಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿವೇಗ ವಾಹನ ಚಲಾಯಿಸುವವರ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಬೆಂಗಳೂರು ಸಂಚಾರ ಪೊಲೀಸರು ಜೂ.15ರಿಂದ 21ರವರೆಗೆ ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದರು. ಈ ವೇಳೆ ಅತಿವೇಗದಿಂದ ವಾಹನ ಚಲಾಯಿಸಿದ 46 ವಾಹನ ಸವಾರರಿಗೆ 46,000 ರೂ. ದಂಡ ವಿಧಿಸಿದ್ದಾರೆ. ಇದರೊಂದಿಗೆ ಸುಮಾರು 43,057 ವಾಹನವನ್ನು ಪರಿಶೀಲಿಸಿ, ಮದ್ಯಪಾನ ಮಾಡಿ ವಾಹನ ಚಲಾಯಿಸಿದ 669 ವಾಹನ ಸವಾರರ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ದರೋಡೆ ಆರೋಪ: ಯುವತಿ ಸೇರಿ ಮೂವರ ಸೆರೆ

• **ಬೆಂಗಳೂರು:** ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯಿಸಿಕೊಂಡು ಭೇಟಿಯ ನೆಪದಲ್ಲಿ ಯುವಕನನ್ನು ಕರೆಯಿಸಿಕೊಂಡು ಅಪಹರಿಸಿ ದರೋಡೆ ಮಾಡಿದ ಆರೋಪದ ಅಡಿಯಲ್ಲಿ ಯುವತಿ ಸೇರಿ ಮೂವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಪಹರಣಕ್ಕೆ ಒಳಗಾಗಿದ್ದ ಸಯ್ಯದ್ ಎಂಬಾತ ನೀಡಿದ ದೂರಿನ ಮೇರೆಗೆ ಪವಿತ್ರಾ(?), ತನು ಹಾಗೂ ತಬ್ರೇಜ್ ಎಂಬವರನ್ನು ಬಂಧಿಸಿ ಕ್ರಮ ಜರುಗಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನ ಸಾರಾಯಿಪಾಳ್ಯದ ನಿವಾಸಿ ಸಯ್ಯದ್ ಫ್ಲವರ್ ಡೆಕೋರೇಷನ್ ಕೆಲಸ ಮಾಡಿಕೊಂಡಿದ್ದು, ಡೇಟಿಂಗ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದ. ಆ ಆ್ಯಪ್ ಮೂಲಕ ಆರೋಪಿ ಪವಿತ್ರಾ(?) ಪರಿಚಯವಾಗಿದೆ. ಇಬ್ಬರು ಪರಸ್ಪರ ಮೊಬೈಲ್ ನಂಬರ್ ಪಡೆದು ಕೆಲ ದಿನಗಳ ವಾಟ್ಸ್‌ಆ್ಯಪ್ ಚಾಟ್ ಮಾಡಿದ್ದರು. ಪವಿತ್ರಾ(?) ತನು ಭೇಟಿಯಾಗುವಂತೆ ಸಯ್ಯದ್ ಸೂಚಿಸಿ, ಲೊಕೇಶನ್ ಕಳುಹಿಸಿದ್ದ. ಇದರಂತೆ ದ್ವಿಚಕ್ರ ವಾಹನದಲ್ಲಿ ಸಯ್ಯದ್ ಬಂದಿದ್ದಾನೆ. ಈ ವೇಳೆ ಆರೋಪಿ ಪವಿತ್ರಾ(?) ಹಾಗೂ ಆಕೆಯ ಸ್ನೇಹಿತರು ಕಾರಿನಲ್ಲಿ ಸಯ್ಯದ್‌ನನ್ನು ಅಪಹರಿಸಿದ್ದಾರೆ. ಕೂಡಲೇ ಚಾಕು ತೋರಿಸಿ, ಮೊಬೈಲ್ ಕಸಿದಿದ್ದಾರೆ. ಸಯ್ಯದ್ ಬಳಿಯಿದ್ದ 5 ಸಾವಿರ ನಗದು, ಬ್ಯಾಂಕ್ ಖಾತೆ ಯಲ್ಲಿದ್ದ 6 ಸಾವಿರ ರೂ. ಹಣವನ್ನು ಆರೋಪಿಗಳ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅನಕೃ ಸಮುದಾಯ ಭವನ, ಪುನೀತ್ ರಾಜ್‌ಕುಮಾರ್ ಹೆಸರಿನ ಸಭಾಂಗಣ ನಿರ್ಮಾಣ: ಎನ್.ಆರ್. ರಮೇಶ್

ಕಡಿಮೆ ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯ

• **ಬೆಂಗಳೂರು:** ಕನ್ನಡ ಚಳುವಳಿಗಳ ಪಿತಾಮಹ ಅ.ನ. ಕೃಷ್ಣರಾಯರ ಹೆಸರಿನ ಸಮುದಾಯ ಭವನ ಹಾಗೂ ನಟ ದಿ. ಡಾ. ಪುನೀತ್ ರಾಜ್‌ಕುಮಾರ್ ಅವರ ಹೆಸರಿನ ಸಭಾಂಗಣವನ್ನು ಯಡಿಯೂರು ವಾರ್ಡ್‌ನಲ್ಲಿ ನಿರ್ಮಿಸಲಾಗಿದ್ದು, ಸಾರ್ವಜನಿಕರಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಹೇಳಿದರು.

ಭಾನುವಾರ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಯಡಿಯೂರು ವಾರ್ಡ್‌ನಲ್ಲಿ ಅ.ನ.ಕೃಷ್ಣರಾಯರ ಕನ್ವೆನ್ಷನ್ ಸೆಂಟರ್ ಮತ್ತು ಡಾ.ಪುನೀತ್ ರಾಜ್‌ಕುಮಾರ್ ಸಭಾಂಗಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮದುವೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಹವಾನಿಯಂತ್ರಿತ ಕಲ್ಯಾಣ ಮಂಟಪವನ್ನು 75 ಸಾವಿರ ರೂ. ಹಾಗೂ ಸಭಾಂಗಣವನ್ನು 25 ಸಾವಿರ ರೂ. ಬಾಡಿಗೆಯಲ್ಲಿ ನೀಡಲಾಗುತ್ತಿದ್ದು, ಇದು ಸಾಮಾನ್ಯ ಜನರ ಅನುಕೂಲಕ್ಕಾಗಿ ರೂಪಿಸಿರುವ ಯೋಜನೆಯಾಗಿದೆ ಎಂದು ತಿಳಿಸಿದರು.

ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಅಂತರ್ಜಲ ಹೆಚ್ಚಿಸಲು, ಪರಿಸರ ಉಳಿಸಲು ಯಡಿಯೂರು ಕೆರೆ ಅಭಿವೃದ್ಧಿ ಪಡಿಸಲಾಗಿದೆ. ಪಾಲಿಕೆ ಹಳೆಯ ಕಟ್ಟಡವಿತ್ತು. ಇಂದು ಭವ್ಯವಾದ ಸುಸಜ್ಜಿತವಾದ ಕಲ್ಯಾಣ ಮಂಟಪ ಮತ್ತು ಸಭಾಂಗಣವನ್ನು ಬಡವರಿಗೋಸ್ಕರ ನಿರ್ಮಾಣ ಮಾಡಲಾಗಿದೆ. ಸಾಲ ಮಾಡಿ ಮದುವೆ ಮಾಡಿಕೊಳ್ಳಬಾರದು



» ಸಾಮಾನ್ಯ ಜನರ ಅನುಕೂಲಕ್ಕಾಗಿ ರೂಪಿಸಿರುವ ಯೋಜನೆ

ಎಂಬುದು ನಮ್ಮ ಉದ್ದೇಶ. ಇನ್ನು ಪುನೀತ್ ರಾಜ್‌ಕುಮಾರ್ ರಸ್ತೆ ಇಟ್ಟು ಶಾಶ್ವತ ನೆನಪಿನಲ್ಲಿಡುವಂತೆ ಮಾಡಲಾಗಿದೆ. ವ್ಯಕ್ತಿಗಿಂತ ಅವರ ಮಾಡಿರುವ ಸಾಧನೆ ಮುಖ್ಯ ಎಂದು ಹೇಳಿದರು.

ಸಂಸದ ತೇಜಸ್ವಿಸೂರ್ಯ ಮಾತನಾಡಿ, ಕಡಿಮೆ ವೆಚ್ಚದಲ್ಲಿ ಸುಸಜ್ಜಿತವಿರುವ ಹವಾನಿಯಂತ್ರಿತ ವ್ಯವಸ್ಥೆಯ ಕಲ್ಯಾಣ ಮಂಟಪವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬಹುದು. ಸಭಾಂಗಣವನ್ನು ಶಾಲೆ ಕಾರ್ಯಕ್ರಮಗಳು, ಚಲನಚಿತ್ರ ಆಡಿಯೋ ಮತ್ತು ವಿಡಿಯೋ ಬಿಡುಗಡೆ ಕಾರ್ಯಕ್ರಮಕ್ಕೆ ಬಳಸಿಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅ.ನ.ಕೃ ಅವರ ಪುತ್ರ ಗೌತಮ್, ಮಾಜಿ ಪಾಲಿಕೆ ಸದಸ್ಯರುಗಳಾದ ಎ.ಎಚ್.ಬಸವರಾಜ್, ಸರಳ ಮಹೇಶ್, ಗೋವಿಂದರಾಜು ಸೇರಿದಂತೆ ಇತರರಿದ್ದರು.

> ಸಾರ್ವಜನಿಕರ ಉಪಯೋಗಕ್ಕೆ ಅ.ನ.ಕೃ ಕಲ್ಯಾಣ ಮಂಟಪ ಮತ್ತು ಡಾ.ಪುನೀತ್ ರಾಜ್ ಕುಮಾರ್ ಸಭಾಂಗಣವನ್ನು ನಿರ್ಮಿಸಲಾಗಿದೆ. ಈ ಸಭಾಭವನಕ್ಕೆ ಅತ್ಯಂತ ಕಡಿಮೆ ಬಾಡಿಗೆ ಇದ್ದು, ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು.
> ■ ಅಶ್ವಿನಿ ಪುನೀತ್‌ರಾಜ್ ಕುಮಾರ್, ನಿರ್ಮಾಪಕಿ

ಅಭಿವೃದ್ಧಿಯಲ್ಲಿ ಯಡಿಯೂರು ವಾರ್ಡ್ ರಾಜ್ಯಕ್ಕೆ ಮಾದರಿ

ಯಡಿಯೂರು ವಾರ್ಡ್‌ನಲ್ಲಿ ಜನನದಿಂದ ಅಂತ್ಯಸಂಸ್ಕಾರದವರೆಗೆ ನಾಗರಿಕರಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಈ ಭಾಗವು ಮಾದರಿ ವಾರ್ಡ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಕ್ಕಳ ಆರೋಗ್ಯ ರಕ್ಷಣೆಗೆ ಆಸ್ಪತ್ರೆ, ಶಿಕ್ಷಣಕ್ಕಾಗಿ ಪ್ರತ್ಯೇಕ ವ್ಯವಸ್ಥೆ, ಆರೋಗ್ಯ ವೃದ್ಧಿಗೆ ಕ್ರೀಡಾಂಗಣ, ಸಾರ್ವಜನಿಕರ ವಿಶ್ರಾಂತಿ ಮತ್ತು ಮನರಂಜನೆಗಾಗಿ ಉದ್ಯಾನಗಳು ಸೇರಿದಂತೆ ವಿವಿಧ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅಲ್ಲದೇ, ಪರಿಸರ ಸಂರಕ್ಷಣೆ ಮತ್ತು ವಿದ್ಯುತ್ ಉಳಿತಾಯದ ಉದ್ದೇಶದಿಂದ ಹಸಿ ಕಸದಿಂದ ವಿದ್ಯುತ್ ಉತ್ಪಾದಿಸುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಧಾರ್ಮಿಕ ಮತ್ತು ವೈದಿಕ ಕಾರ್ಯಗಳಿಗಾಗಿ ಪ್ರತ್ಯೇಕ ವೈದಿಕ ಭವನವನ್ನೂ ನಿರ್ಮಿಸಲಾಗಿದ್ದು, ಸಮಗ್ರ ಅಭಿವೃದ್ಧಿಯ ಮೂಲಕ ಯಡಿಯೂರು ವಾರ್ಡ್ ರಾಜ್ಯಕ್ಕೆ ಮಾದರಿಯಾಗುವಂತೆ ರೂಪುಗೊಂಡಿದೆ ಎಂದು ಎನ್.ಆರ್.ರಮೇಶ್ ಹೇಳಿದರು.

ಕಲೆ ಜೀವನ ರೂಪಿಸುವ ವೃತ್ತಿ

• **ಬೆಂಗಳೂರು:** ಕಲೆ ಕೇವಲ ಹವ್ಯಾಸಕ್ಕೆ ಮಾತ್ರ ಸೀಮಿತವಾಗದೆ ಜೀವನವನ್ನು ರೂಪಿಸಿಕೊಳ್ಳುವ ವೃತ್ತಿಯಾಗಬೇಕು. ಸೃಜನಶೀಲತೆ ಮತ್ತು ವೈಶಿಷ್ಟ್ಯಪೂರ್ಣ ಕಲೆ ಬದುಕು ಕಟ್ಟಿಕೊಡುವ ಸಾಧನವಾಗಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿಗಳು ಡಾ.ಜಯಕರ ಎಸ್.ಎಂ. ಕರೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯ ದೃಶ್ಯ ಕಲಾ ವಿಭಾಗ ವತಿಯಿಂದ ಸೋಮವಾರ ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಿದ್ದ ಕಲಾ ಸ್ಪಂದನ-2026 ವಾರ್ಷಿಕ ಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು. ದೃಶ್ಯ ಕಲೆ ಸಮಾಜಕ್ಕೆ ಸಂದೇಶ ನೀಡುವ ಶಕ್ತಿಶಾಲಿ ಮಾಧ್ಯಮವಾಗಿದೆ. ಮಕ್ಕಳಲ್ಲಿ ಬಾಲ್ಯದಿಂದಲೇ ಕಲೆಯ ಆಸಕ್ತಿಯನ್ನು ಬೆಳೆಸಬೇಕು. ಕಲೆ ಮಕ್ಕಳಲ್ಲಿ ಏಕಾಗ್ರತೆ, ತಾಳ್ಮೆ, ಸೃಜನಶೀಲತೆ ಹಾಗೂ ಆತ್ಮವಿಶ್ವಾಸ ವೃದ್ಧಿಸುತ್ತದೆ ಎಂದರು.

ಭಾಷೆ, ಗಡಿ ಹಾಗೂ ಸಂಸ್ಕೃತಿಗಳ ಮೀರಿ ಜನರನ್ನು ಒಂದುಗೂಡಿಸುವ ಶಕ್ತಿ ಕಲೆಗಿದೆ. ಬೆಂಗಳೂರು ವಿಶ್ವವಿದ್ಯಾಲಯ ದೃಶ್ಯ ಕಲಾ ವಿಭಾಗವು ವಿಶಿಷ್ಟ ವಿಭಾಗವಾಗಿದ್ದು, ಗುಣಮಟ್ಟದ ಬೋಧಕ ಸಿಬ್ಬಂದಿ, ಪೂರಕ ಶೈಕ್ಷಣಿಕ ವಾತಾವರಣ, ಮೂಲಸೌಕರ್ಯ ಮತ್ತು ಅವಕಾಶಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಹಿರಿಯ ನಿರ್ದೇಶಕ ಹಾಗೂ ಪರಿಸರವಾದಿ ಸುರೇಶ್ ಹೆಬ್ಳೀಕರ್ ಮಾತನಾಡಿ, ಚಿತ್ರಕಲೆ, ಶಿಲ್ಪಕಲೆ ಸಾಮಾಜಿಕ ಜೀವನ, ಆರ್ಥಿಕ ಪರಿಸ್ಥಿತಿ, ಮನುಷ್ಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಕಲಾವಿದರು ತಮ್ಮ ಕಲೆ ಮೂಲಕ ಸಮಾಜದ ಸಮಸ್ಯೆಯನ್ನು ಪ್ರತಿಬಿಂಬಿಸಿ ಬದಲಾವಣೆಗೆ ಕಾರಣವಾಗಬೇಕು ಎಂದು ತಿಳಿಸಿದರು.

ಆಯುಕ್ತರಿಂದ ನೀರು ನಿಲುಗಡೆ ಸ್ಥಳ ಪರಿಶೀಲನೆ

• **ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಚಾರ ಪೊಲೀಸರು ಗುರುತಿಸಿದ ನೀರು ನಿಲುಗಡೆ ಸ್ಥಳ ಪರಿಶೀಲನೆಯನ್ನು ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ನಡೆಸಿದರು.

ಸಂಚಾರ ಪೊಲೀಸ್ ಇಲಾಖೆಯು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಭಾಗಗಳಲ್ಲಿ ಗುರುತಿಸಿರುವ 81 ನೀರು ನಿಲುಗಡೆ ಪ್ರದೇಶಗಳ ಪೈಕಿ, ಸಮಸ್ಯೆಗಳ ಪರಿಹಾರಕ್ಕಾಗಿ ಈಗಾಗಲೇ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದುವರೆಗೆ 50 ಸ್ಥಳಗಳಲ್ಲಿನ ಸಮಸ್ಯೆಗಳನ್ನು ನಿವಾರಿಸಲಾಗಿದ್ದು, 4 ಸ್ಥಳಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ 7 ಸ್ಥಳಗಳಲ್ಲಿ ಹೂಳೆತ್ತುವಿಕೆ ಕಾರ್ಯ ನಡೆಯುತ್ತಿದೆ. 81 ನೀರು ನಿಲುಗಡೆ ಪ್ರದೇಶಗಳ ಪೈಕಿ, 20 ಸ್ಥಳಗಳು ಉತ್ತರ ನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸುನೀಲ್ ಕುಮಾರ್ ತಿಳಿಸಿದರು.

ಮಳೆ ನೀರಿನ ಸರಾಗ ಹರಿವಿಗೆ ಅಡ್ಡಿಯಾಗುವಂತೆ ರಾಜಕಾಲುವೆಯಲ್ಲಿ ಸಂಗ್ರಹವಾಗಿರುವ ಕೇಬಲ್ ಡಕ್ಟ್ ಹಾಗೂ ಇತರೆ ತಡೆಗಳನ್ನು ತಕ್ಷಣ ತೆರವುಗೊಳಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪರಿಶೀಲನೆ ಸಂದರ್ಭದಲ್ಲಿ ಇಇ ಕಲ್ಲೇಶಪ್ಪ, ಸುಚಿನ್, ಎಇಇ ಅಕ್ತರ್ ಮತ್ತು ಶಿವಕುಮಾರ್, ಡಿಜಿಎಂ ರಶ್ಮಿ ಸೇರಿದಂತೆ ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



1.20 ಲಕ್ಷ ರೂ. ವಂಚನೆ: ಬಂಧನ

• **ಬೆಂಗಳೂರು:** ಗಿರವಿ ಇಟ್ಟಿದ್ದ ಚಿನ್ನ ಹರಾಜಿಗೆ ಬಂದಿದೆ ಎಂದು ಸುಳ್ಳು ಹೇಳಿ ವ್ಯಕ್ತಿಯಿಂದ 1.20 ಲಕ್ಷ ರೂ.ಸಾಲ ಪಡೆದು ವಂಚಿಸಿದ ಆರೋಪದ ಅಡಿಯಲ್ಲಿ ಮಹಿಳೆಯೊಬ್ಬಳನ್ನು ಮಹಾಲಕ್ಷ್ಮಿ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರ್.ವನಿತಾ ಆರೋಪಿಯು, ಸದ್ಯ ಜಾಮೀನು ಪಡೆದು ಜೈಲಿನಿಂದ ಬಿಡುಗಡೆಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೂರುದಾರ ರಾಮನಗರ ಮೂಲದ ಸಂತೋಷ್, ಬಿಡದಿ ಬಳಿ ಟೊಯೋಟಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಫೇಸ್‌ಬುಕ್ ಮೂಲಕ ವನಿತಾ ಪರಿಚಯವಾಗಿತ್ತು. ಕೆಲ ದಿನಗಳ ಬಳಿಕ ಸಲುಗೆ ಮೇರೆಗೆ ವನಿತಾ ತನ್ನ ಚಿನ್ನವನ್ನು ಗಿರವಿ ಅಂಗಡಿಯೊಂದರಲ್ಲಿ ಇಟ್ಟಿದ್ದು, ಹರಾಜಿಗೆ ಬಂದಿದೆ. ತುರ್ತು ಹಣದ ಅವಶ್ಯಕತೆಯಿದೆ. ಸಾಲ ನೀಡಿದರೆ ಕೊಡುವ ಹಣಕ್ಕೆ 10 ಸಾವಿರ ರೂ. ಹೆಚ್ಚುವರಿಯಾಗಿ ಕೊಡುವುದಾಗಿ ಭರವಸೆ ನೀಡಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆಕೆಯ ಮಾತನ್ನು ನಂಬಿ ರಾಜಾಜಿನಗರದ ಮೋದಿ ಆಸ್ಪತ್ರೆ ಬಳಿ ಎಟಿಎಂ ಒಂದರಲ್ಲಿ ಹಣ ಬಿಡಿಸಿಕೊಂಡು 1.20 ಲಕ್ಷ ರೂ. ಸಾಲ ನೀಡಿದ್ದೆ. ಹಣ ಪಡೆದ ವನಿತಾ, ಗಿರವಿ ಅಂಗಡಿ ಮುಂದೆ ಕಾಯುವಂತೆ ತಿಳಿಸಿ ಚಿನ್ನವನ್ನು ಬಿಡಿಸಿಕೊಳ್ಳದೆ ಪರಾರಿಯಾಗಿದ್ದಾರೆ. ಹಲವಾರು ಬಾರಿ ಕರೆ ಮಾಡಿದರೂ ಪ್ರತಿಕ್ರಿಯಿಸದೆ ತನ್ನನ್ನು ವಂಚಿಸಿದ್ದಾರೆ ಎಂದು ಸಂತೋಷ್ ಆರೋಪಿಸಿದ್ದಾರೆ.

ಸಾಮಾನ್ಯ ಮಾಸಿಕ ಪಾಸಿನ ದರದಲ್ಲಿ ಹೆಚ್ಚಳವಿಲ್ಲ

• **ಬೆಂಗಳೂರು:** ಬಿಎಂಟಿಸಿ ಸಾಮಾನ್ಯ ಮಾಸಿಕ ಪಾಸಿನ ದರದಲ್ಲಿ ಯಾವುದೇ ಹೆಚ್ಚಳವಿಲ್ಲ, ವಿಸ್ತಾರ ಮಾರ್ಗಗಳ ಪ್ರಯಾಣಿಕರ ಅನುಕೂಲಕ್ಕಾಗಿ ಮಾತ್ರ ಸಾಮಾನ್ಯ ವಿಸ್ತಾರ ಪಾಸುಗಳನ್ನು ಪರಿಚಯಿಸಲಾಗಿದೆ ಎಂದು ಬಿಎಂಟಿಸಿ ಸಂಸ್ಥೆ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಂಸ್ಥೆ, ಬಿಎಂಟಿಸಿಯ ಕಾರ್ಯಾಚರಣೆ ವ್ಯಾಪ್ತಿಯನ್ನು ರಾಜ್ಯ ಸರ್ಕಾರವು ಕಾಲ-ಕಾಲಕ್ಕೆ ಸಾರ್ವಜನಿಕರ ಅಗತ್ಯತೆಗಳಿಗೆ ಅನುಗುಣವಾಗಿ ವಿಸ್ತರಿಸುತ್ತಾ ಬಂದಿದ್ದು, 1961ರ ಜ.16ರಂತೆ ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯಿಂದ 12 ಮೈಲಿ (20 ಕಿ.ಮೀ.)ವರೆಗೆ ಇದ್ದ ಬಿಟಿಎಸ್ ಯೋಜನೆಯ ಕಾರ್ಯಾಚರಣೆ ವ್ಯಾಪ್ತಿಯನ್ನು, ನಂತರ ರಾಜ್ಯ ಸರ್ಕಾರದ 2014ರ ಸೆ.30ರ ಮೂಲಕ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25 ಕಿ.ಮೀ.ವರೆಗೆ ವಿಸ್ತರಿಸಲಾಗಿತ್ತು ಎಂದು ತಿಳಿಸಿದೆ. ಬಳಿಕ ಜ.30ರಂದ ಬಿಎಂಟಿಸಿ ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಯನ್ನು ಜಿಬಿಎ ವ್ಯಾಪ್ತಿಯಿಂದ 40 ಕಿ.ಮೀ.ವರೆಗೆ ವಿಸ್ತರಿಸಲಾಗಿದೆ. ಈ ನಿರ್ಧಾರದ ಫಲವಾಗಿ, ನಗರದ ಕೇಂದ್ರ ಭಾಗದಿಂದ ಈವರೆಗೆ ಸುಮಾರು 40 ರಿಂದ 42 ಕಿ.ಮೀ. ವರೆಗೆ ಕಾರ್ಯಾಚರಣೆಗೊಳಿಸಲಾಗುತ್ತಿದ್ದ ಬಸ್ ಸೇವೆಗಳನ್ನು ಸುಮಾರು 65 ರಿಂದ 70 ಕಿ.ಮೀ.ವರೆಗೆ ವಿಸ್ತರಿಸಲು ಅವಕಾಶ ದೊರೆತಿದೆ ಎಂದು ಹೇಳಿದೆ. ಈ ವಿಸ್ತರಣೆ ಹಿನ್ನೆಲೆಯಲ್ಲಿ ಹೊಸಕೋಟೆ, ರಾಮನಗರ, ಚನ್ನಪಟ್ಟಣ, ಮಾಗಡಿ, ಚಿಕ್ಕಬಳ್ಳಾಪುರ, ಮಾಲೂರು ಸೇರಿದಂತೆ ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರಮುಖ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಬಿಎಂಟಿಸಿ ತನ್ನ ಸಾರ್ವಜನಿಕ ಸಾರಿಗೆ ಸೇವೆಯನ್ನು ಯಶಸ್ವಿಯಾಗಿ ವಿಸ್ತರಿಸಿದೆ ಎಂದು ತಿಳಿಸಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಈಗಾಗಲೇ ಜಾರಿಯಲ್ಲಿರುವ ವಿವಿಧ ಪಾಸುಗಳನ್ನು ಸೀಮಿತ ವ್ಯಾಪ್ತಿಯವರೆಗೆ ಯಾವುದೇ ಬದಲಾವಣೆ ಇಲ್ಲದೆ ಮುಂದುವರೆಸಲಾಗಿದೆ. ಆದರೆ, ಹೊಸದಾಗಿ ವಿಸ್ತರಿಸಿರುವ ಮಾರ್ಗಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಮಾತ್ರ ಜೂ.20ರಂದ ಸಾಮಾನ್ಯ ವಿಸ್ತಾರ ದೈನಿಕ, ಸಾಪ್ತಾಹಿಕ ಹಾಗೂ ಮಾಸಿಕ ಪಾಸುಗಳನ್ನು ಪರಿಚಯಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ. ಪ್ರಸ್ತುತ ಬಿಎಂಟಿಸಿ ಒಟ್ಟು 1,819 ಮಾರ್ಗಗಳಲ್ಲಿ 6,295 ಅನುಸೂಚಿಗಳನ್ನು ಕಾರ್ಯಾಚರಣೆ ಗೊಳಿಸುತ್ತಿದ್ದು, ಅವುಗಳಲ್ಲಿ 96 ಮಾರ್ಗಗಳ 216 ಅನುಸೂಚಿಗಳು ವಿಸ್ತಾರ ವ್ಯಾಪ್ತಿಯಲ್ಲಿ ಸಂಚರಿಸುತ್ತಿವೆ. ಹೊಸದಾಗಿ ಪರಿಚಯಿಸಿರುವ ಸಾಮಾನ್ಯ ವಿಸ್ತಾರ ಪಾಸುಗಳು ಕೇವಲ ವಿಸ್ತಾರ ವ್ಯಾಪ್ತಿಯ ಮಾರ್ಗ ಗಳಲ್ಲಿ ಸಂಚರಿಸುವ ಪ್ರಯಾಣಿಕರಿಗಾಗಿ ಮಾತ್ರ ಜಾರಿಗೊಳಿಸಲಾಗಿದೆ. ಪ್ರತಿನಿತ್ಯ ಸೀಮಿತ ವ್ಯಾಪ್ತಿಯಲ್ಲಿ ಸಂಚರಿಸುವ ಲಕ್ಷಾಂತರ ಪ್ರಯಾಣಿಕರಿಗೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಾಗದಂತೆ ಬಿಎಂಟಿಸಿ ಕ್ರಮ ಕೈಗೊಂಡಿದ್ದು, ಹೊಸ ವಿಸ್ತಾರ ಪ್ರದೇಶದ ಪ್ರಯಾಣಿಕರ ಅನುಕೂಲಕ್ಕಾಗಿ ಮಾತ್ರ ಪ್ರತ್ಯೇಕ ಪಾಸ್ ವ್ಯವಸ್ಥೆ ಜಾರಿಗೊಳಿಸಲಾಗಿದೆ ಎಂದರು.

ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಶೋಧಕ ಬಸವರಾಜ ಕಲ್ಗುಡಿ ಹೇಳಿಕೆ

ಬಲಿಪಾದ ಕೃತಿ ಸಂಸ್ಕೃತಿಯ ದುರಂತ ಚರಿತ್ರೆ ಅನಾವರಣ

• **ಬೆಂಗಳೂರು:** ಬಲಿಪಾದ ಕೃತಿಯ ಹಿಂದೆ ಒಂದು ಸುಂದರವಾದ ಕಥನವಿದೆ. ಆ ಕಥನದ ಹಿಂದೆ ಸಂಸ್ಕೃತಿಯ ಒಂದು ದುರಂತ ಚರಿತ್ರೆ ನಮಗೆ ತಿಳಿಯುತ್ತದೆ ಎಂದು ಖ್ಯಾತ ಸಂಶೋಧಕ ಹಾಗೂ ವಿದ್ವಾಂಸ ಬಸವರಾಜ ಕಲ್ಗುಡಿ ಹೇಳಿದರು.

ಅಂಕಿತ ಪುಸ್ತಕ ಪ್ರಕಾಶನದ ವತಿಯಿಂದ ನಡೆದ ಶ್ರೀಧರ ಬಳಗಾರ ಅವರ ಬಲಿಪಾದ, ಜಯಲಕ್ಷ್ಮಿ ಪಾಟೀಲ ಅವರ ಆತ್ಮಕಥನ ತಿಟ್ಟತ್ತಿ ತಿರುಗಿ ಮತ್ತು ಗುರುರಾಜ ಕೋಡ್ಕಣಿ ಅವರ ಅಪರಿಚಿತ ನೆರಳುಗಳು ಎಂಬ ಮೂರು ವಿಭಿನ್ನ ಹಾಗೂ ಮಹತ್ವದ ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ನಾವು ಎಲ್ಲವನ್ನೂ ಜನಪದ ಎಂದು ಕರೆದು, ಬುಡಕಟ್ಟು ಜನಾಂಗದ ವಿಶಿಷ್ಟವಾದ ಚಾರಿತ್ರಿಕ ಕಥನ ಯಾವುದು ಎಂದು ತಿಳಿಯಲು ಹೋಗಿಲ್ಲ. ಆ ನೆಲೆಯಲ್ಲಿ ನೋಡಿದರೆ, ಕಾರಂತರ ಕುಡಿಯರ ಕೂಸು ಕಾದಂಬರಿ ಆ ಕುರಿತು ವಿಶೇಷವಾದ ಮಾಹಿತಿಯನ್ನು ನೀಡಿದೆ. ಹಾಗಾಗಿ, ಕಾರಂತರ ನಂತರ ಬುಡಕಟ್ಟು ಜನಾಂಗದ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡುವ ಇನ್ನೊಂದು ಕೃತಿ ಶ್ರೀಧರ ಬಳಗಾರ ಅವರ ಬಲಿಪಾದ ಎಂದು ಖ್ಯಾತ ಸಂಶೋಧಕ ಹಾಗೂ ವಿದ್ವಾಂಸ ಬಸವರಾಜ ಕಲ್ಗುಡಿ ಅವರು ಹೇಳಿದರು.



ಜಯಲಕ್ಷ್ಮಿ ಪಾಟೀಲ ಅವರ ಆತ್ಮಕಥನ ತಿಟ್ಟತ್ತಿ ತಿರುಗಿ ಕುರಿತು ಮಾತನಾಡುತ್ತಾ, ನನಗೆ ಮಹಿಳೆಯರು ಬರೆಯುವ ಆತ್ಮಕಥನಗಳು ಬಹಳ ಮೆಚ್ಚುಗೆಯಾಗುತ್ತವೆ. ಏಕೆಂದರೆ, ಅವುಗಳಲ್ಲಿ ತಮ್ಮನ್ನು ತಾವು ಕಂಡುಕೊಳ್ಳುವ ರೀತಿ ಅದ್ಭುತವಾಗಿರುತ್ತದೆ. ಮಹಿಳೆಯರ ಆತ್ಮಕಥನಗಳಲ್ಲಿ ಎಲ್ಲವನ್ನೂ ಮುಕ್ತವಾಗಿ ಬರೆಯಲಾಗಿರುತ್ತದೆ. ಯಲ್ಲಾಪುರದ ಗುರುರಾಜ ಕೋಡ್ಕಣಿ ಅವರ ಅಪರಿಚಿತ ನೆರಳುಗಳು ಕುರಿತು ಮಾತನಾಡಿ, ಇದು ಎಲ್ಲರಿಗೂ ಇಷ್ಟವಾಗುವ ಮತ್ತು ಮೆಚ್ಚುಗೆಯಾಗುವಂತಹ ಪ್ರಕಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೂರೂ ಕೃತಿಗಳ ಲೇಖಕರುಗಳಾದ ಸಾಹಿತಿ ಶ್ರೀಧರ ಬಳಗಾರ, ಜಯಲಕ್ಷ್ಮಿ ಪಾಟೀಲ ಮತ್ತು ಯಲ್ಲಾಪುರದ ಗುರುರಾಜ ಕೋಡ್ಕಣಿ ಉಪಸ್ಥಿತರಿದ್ದರು.

ಅಪರಿಚಿತ ನೆರಳು, ತಿಟ್ಟತ್ತಿ ತಿರುಗಿ ಎಲ್ಲರೂ ಓದಬೇಕಾದ ಕೃತಿಗಳು

ಪತ್ರಕರ್ತೆ ಹಾಗೂ ಲೇಖಿಕಿ ರಶ್ಮಿ ಎಸ್. ಅವರು ಅಪರಿಚಿತ ನೆರಳುಗಳು ಕಥಾಸಂಕಲನ ಕುರಿತು ಮಾತನಾಡಿ, ನನಗೆ ಭಯವೇ ಇಲ್ಲ ಎಂದು ಹೇಳುವವರು ಒಮ್ಮೆ ಓದಲೇಬೇಕಾದ ಕೃತಿ ಇದು. ಇದು ನಮ್ಮಲ್ಲಿರುವ ಹಳೆಯ ಮಂತ್ರಗಳನ್ನೆಲ್ಲ ನೆನಪಿಗೆ ತರುವ, ಹಾಡುವಂತೆ ಮಾಡುತ್ತದೆ. ಬಳಿಕ ತಿಟ್ಟತ್ತಿ ತಿರುಗಿ ಕೃತಿಯ ಬಗ್ಗೆ ಮಾತನಾಡುತ್ತಾ, ಈ ಕೃತಿಯು ವೈಯಕ್ತಿಕ ಅನುಭವವನ್ನು ಹೇಳುತ್ತಲೇ, ಸಮಾಜದ ಸಮಸ್ಯೆಗಳು ಇನ್ನೂ ಜೀವಂತವಾಗಿವೆ ಎಂಬುದನ್ನು ಸೂಕ್ಷ್ಮವಾಗಿ ನೆನಪಿಸುತ್ತದೆ. ಪ್ರತಿಯೊಬ್ಬರೂ ಇದನ್ನು ಒಮ್ಮೆ ಓದಿ ನೋಡಬೇಕು ಎಂದರು.

ಸಮಗ್ರ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ಸೂಚನೆ

ಬಾಕಿ ವೈಟ್ ಟಾಪಿಂಗ್ ಪೂರ್ಣಗೊಳಿಸಲು ಗಡುವು

• **ಬೆಂಗಳೂರು:** ನಗರದಲ್ಲಿ ಬಾಕಿ ಉಳಿದಿರುವ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಪೂರ್ಣಗೊಳಿಸಲು 6 ತಿಂಗಳ ಗಡುವನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಬಿ-ಸ್ಮೈಲ್ ಅಧಿಕಾರಿಗಳಿಗೆ ನೀಡಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಮಗ್ರ ಯೋಜನೆ ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಬೆಂಗಳೂರಿನ ದೀರ್ಘಕಾಲದ ಸಂಚಾರ ದಟ್ಟಣೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ. ನಾನು ಯಾವುದೇ ಹೊಸ ಸಲಹೆ-ಸೂಚನೆಗಳನ್ನು ನೀಡಿಲ್ಲ, ಈಗಾಗಲೇ ರೂಪಿಸಿರುವ ಯೋಜನೆಗಳನ್ನು ತ್ವರಿತಗತಿಯಲ್ಲಿ ಮತ್ತು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗಿದೆ ಎಂದು ಹೇಳಿದರು.



> ವೈಟ್ ಟಾಪಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಯಾವುದೇ ಸಮಸ್ಯೆ ಇಲ್ಲ, ಅಧಿಕಾರಿಗಳು ಗುತ್ತಿಗೆದಾರರ ಮೇಲೆ ಸೂಕ್ತ ಒತ್ತಡ ಹೇರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು.
> ■ ಕೃಷ್ಣಬೈರೇಗೌಡ, ಸಚಿವ

ಇಂದು ನಗರದಲ್ಲಿ...

- ಮಹಾಲಕ್ಷ್ಮಿ ಲೇಔಟ್ ವ್ಯಾಪ್ತಿ ಯುಲ್ಲಿನ ನಾಗಪುರ ಶಾಲೆಗಳ 280 ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ. ಸ್ಥಳ: ಅಟಲ್ ಬಿಹಾರಿ ವಾಜಪೇಯಿ ನಾಗಪುರ ಪ್ರಾಥಮಿಕ ಶಾಲೆ, ಕುರುಬರಹಳ್ಳಿ, ಬೆಳಗ್ಗೆ 8
- ಕೃಷಿ-ಆಹಾರ ಸಂಸ್ಕರಣಾ ಸಮ್ಮೇಳನ ಹಾಗೂ 1 ನೇ ಆವೃತ್ತಿಯ ಪ್ರಶಸ್ತಿ ಪ್ರದಾನ. ಸ್ಥಳ : ಗ್ರ್ಯಾಂಡ್ ಬಾಲ್ ರೂಂ, ಶೆರಟನ್ ಗ್ರ್ಯಾಂಡ್ ಹೋಟೆಲ್, ಮಲ್ಲೇಶ್ವರಂ, ಬೆಳಗ್ಗೆ 9
- ರಾಜ್ಯ ರೇಷ್ಮೆ ಹಾಗೂ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಮಹಿಳೆಯರು ಕೈಯಿಂದ ತಯಾರಿಸಿದ ಟೋಟ್ ಬ್ಯಾಗ್ ಹಾಗೂ ಫ್ರೇಮ್‌ಗಳ ಪ್ರದರ್ಶನ ಹಾಗೂ ಮಾರಾಟ. ಸ್ಥಳ : ಕೆಜಿಎಸ್ ಆವರಣ. ಮಧ್ಯಾಹ್ನ 12.30
- ಡಿ.ಕೆ.ಚೌಟ ಅವರ ಕಾದಂಬರಿ ಆಧಾರಿತ ಮಿತ್ತಬೈಲ್ ಯಮುನಕ್ಕ ನಾಟಕ 2ನೇ ಪ್ರದರ್ಶನ. ಸ್ಥಳ : ಕಲಾಗ್ರಾಮ ಸಮುಚ್ಚಯ ಭವನ, ಮಲ್ಲತ್ತಹಳ್ಳಿ, ಸಂಜೆ 7.30

ಮಂಗಳವಾರದ ಪಂದ್ಯಗಳು

ಪೋರ್ಚುಗಲ್-ಉಜ್ಬೇಕಿಸ್ತಾನ, ರಾತ್ರಿ 10.30
ಇಂಗ್ಲೆಂಡ್-ಘಾನಾ, ಮಧ್ಯರಾತ್ರಿ 1.30
ಪನಾಮ-ಕ್ರೊವೇಶಿಯಾ, ಬುಧವಾರ ಬೆ.4.30
ಕೊಲಂಬಿಯಾ-ಡಿಆರ್ ಕಾಂಗೊ, ಬುಧವಾರ ಬೆಳಗ್ಗೆ 7.30

ಕಿರುಸುದ್ದಿ

ಪಾಂಡ್ಯಗೆ ರಾಯಲ್ ಸ್ವಾಗತ?

• **ಮುಂಬೈ:** ಕಳೆದ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ನಾಯಕರಾಗಿದ್ದ ಹಾರ್ದಿಕ್ ಪಾಂಡ್ಯ ಫ್ರಾಂಚೈಸಿ ತೊರೆದು ಚೆನ್ನೈ ಸೂಪರ್ ಕಿಂಗ್ಸ್ ಸೇರುವ ಸಾಧ್ಯತೆಯಿದೆ ಎಂಬ ಸುದ್ದಿ ಕೇಳಿಬಂದಿತ್ತು. ಆದರೆ ಇದೀಗ ರಾಜಸ್ಥಾನ್ ಅವರಿಗೆ ರಾಯಲ್ ಸ್ವಾಗತ ನೀಡುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಬದಲಿಗೆ ವಿನಿಮಯ ಮಾಡಿಕೊಳ್ಳಲು ಮುಂಬೈ ಇಂಡಿಯನ್ಸ್ ಮತ್ತು ರಾಜಸ್ಥಾನ ರಾಯಲ್ಸ್ ನಡುವೆ ಮಾತುಕತೆ ನಡೆಯುತ್ತಿದೆ ಎಂದು ವರದಿಯಾಗಿದೆ.



ಮುಂಬೈ ಪರ ದೇಶೀಯ ಕ್ರಿಕೆಟ್ ಆಡುವ ಜೈಸ್ವಾಲ್ ಅವರನ್ನೇ ತಂಡದ ಆರಂಭಿಕನಾಗಿ ಮುಂದಿನ ಐಪಿಎಲ್‌ನಲ್ಲಿ ಕಣಕ್ಕಿಳಿಸಲು ಮುಂಬೈ ಚಿಂತನೆ ನಡೆಸಿದೆ. ಗುಜರಾತ್ ಟೈಟಾನ್ಸ್‌ಗೆ ಚೊಚ್ಚಲ ಐಪಿಎಲ್ ಟ್ರೋಫಿ ಗೆಲ್ಲಿಸಿದ್ದ ಹಾರ್ದಿಕ್ ಅವರನ್ನು ಮುಂಬೈ 2024ರಲ್ಲಿ ಪುನಃ ಕರೆತಂದಿತ್ತು. ಹಾರ್ದಿಕ್ ಹಾಗೂ ಮುಂಬೈ ತಂಡದ ಆಟಗಾರರು, ಟೀಮ್ ಮ್ಯಾನೇಜ್‌ಮೆಂಟ್ ಮಧ್ಯೆ ಭಿನ್ನಾಭಿಪ್ರಾಯ ಮೂಡಿರುವ ಕಾರಣ ಹಾರ್ದಿಕ್ ಸ್ವತಃ ಫ್ರಾಂಚೈಸಿ ತೊರೆಯಲು ಬಯಸಿದ್ದಾರೆ ಎಂಬ ವದಂತಿಗಳು ಐಪಿಎಲ್ ಕೊನೆಯಲ್ಲಿ ಹಬ್ಬಿದ್ದವು. ಕಳೆದ ಆವೃತ್ತಿಯಲ್ಲಿ ಬ್ಯಾಟಿಂಗ್‌ನಲ್ಲೂ ಮಿಂಚದ ಪಾಂಡ್ಯ, ನಾಯಕತ್ವದಲ್ಲೂ ವೈಫಲ್ಯ ಕಂಡಿದ್ದರು. ಇದೇ ರೀತಿ ಲಖನೌ ಸೂಪರ್ ಜೈಂಟ್ಸ್ ನಾಯಕತ್ವಕ್ಕೆ ರಾಜೀನಾಮೆ ನೀಡಿರುವ ರಿಷಭ್ ಪಂತ್ ಬದಲಿಗೆ ಕುಲದೀಪ್ ಯಾದವ್‌ರನ್ನು ವಿನಿಮಯ ಮಾಡಿಕೊಳ್ಳಲು ಲಖನೌ ಫ್ರಾಂಚೈಸಿ ಡೆಲ್ಲಿ ಕ್ಯಾಪಿಟಲ್ಸ್ ಜತೆ ಮಾತುಕತೆ ನಡೆಸಿದೆ ಎಂದು ಕಳೆದ ವಾರ ವರದಿಯಾಗಿತ್ತು.

ನಿಧಾನಗತಿ ಬೌಲಿಂಗ್‌ಗಾಗಿ ಇಂಗ್ಲೆಂಡ್ 12 ಅಂಕ ಕಡಿತ!

• **ಲಂಡನ್:** ನ್ಯೂಜಿಲೆಂಡ್ ವಿರುದ್ಧದ ತವರಿನ ಟೆಸ್ಟ್ ಸರಣಿಯಲ್ಲಿ ನಿಧಾನಗತಿ ಬೌಲಿಂಗ್ ನಡೆಸಿದ ಇಂಗ್ಲೆಂಡ್ ತಂಡಕ್ಕೆ ಶೇ.50 ಪಂದ್ಯ ವೇತನ ದಂಡವನ್ನು ಹಾಗೂ 12 ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಗಳ ಕಡಿತದ ಶಿಕ್ಷೆಯನ್ನು ಐಸಿಸಿ ವಿಧಿಸಿದೆ. ಇದರಿಂದಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಿಸಬೇಕೆಂಬ ಇಂಗ್ಲೆಂಡ್ ಕನಸು ನುಚ್ಚುನೂರಾಗಿದೆ. ನ್ಯೂಜಿಲೆಂಡ್ ವಿರುದ್ಧದ 3 ಪಂದ್ಯಗಳ ಟೆಸ್ಟ್ ಸರಣಿ ಸಮಬಲಗೊಂಡ ಹತಾಶೆಯಲ್ಲಿದ್ದ ಇಂಗ್ಲೆಂಡ್‌ಗೆ ಐಸಿಸಿ ವಿಧಿಸಿದ ದಂಡ ಶಿಕ್ಷೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. 12 ಓವರ್‌ಗಳನ್ನು ಕಡಿಮೆ ಎಸೆದಿರುವ ಕಾರಣಕ್ಕೆ ಇಂಗ್ಲೆಂಡ್ ತಂಡಕ್ಕೆ ದಂಡ ವಿಧಿಸಲಾಗಿದೆ. ಇದರಿಂದ ಇಂಗ್ಲೆಂಡ್ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕ 37.72ರಿಂದ 26.38ಕ್ಕೆ ಇಳಿಕೆಯಾಗಿದೆ.

ಇಂದಿನಿಂದ ಯುಎಸ್ ಓಪನ್

• **ಫುಲರ್ಟನ್:** ಅಮೆರಿಕದಲ್ಲಿ ಮಂಗಳವಾರ ಆರಂಭವಾಗಲಿರುವ ಯುಎಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಲಕ್ಷ್ಯ ಸೇನ್ ಮತ್ತು ಟೀನೇಜ್ ತಾರೆ ತನ್ವಿ ಶರ್ಮಾ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ 14ನೇ ಶ್ರೇಯಾಂಕದ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲಿ ಬೆಲ್ಜಿಯಂನ ಜೂಲಿಯನ್‌ರನ್ನು ಎದುರಿಸಲಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ 17ರ ಹರೆಯದ ತನ್ವಿ ಶರ್ಮಾ ಜರ್ಮನಿಯ ಯೋವೆನ್ನೆ ಲಿ ಅವರನ್ನು ಎದುರಿಸಲಿದ್ದಾರೆ.

44ನೇ ವಯಸ್ಸಿನಲ್ಲಿ ಮರಳಿದ ಸೆರೆನಾ



• **ಲಂಡನ್:** 23 ಗ್ರ್ಯಾಂಡ್ ಸ್ಲಾಮ್ ಸಿಂಗಲ್ಸ್ ಪ್ರಶಸ್ತಿಗಳ ವಿಜೇತೆ, ಅಮೆರಿಕದ ಟೆನಿಸ್ ದಿಗ್ಗಜೆ ಸೆರೆನಾ ವಿಲಿಯಮ್ಸ್ ಸುಮಾರು ನಾಲ್ಕು ವರ್ಷಗಳ ವಿರಾಮದ ಬಳಿಕ ವೃತ್ತಿಪರ ಟೆನಿಸ್‌ಗೆ ಮರಳಿದ್ದು, ಇದೀಗ ವಿಂಬಲ್ಡನ್ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಭಾನುವಾರ ಪ್ರಕಟಿಸಿದ ಮಾಹಿತಿಯಲ್ಲಿ ವಿಂಬಲ್ಡನ್ ಚಾಂಪಿಯನ್‌ಶಿಪ್ ಆಯೋಜಕರು ಸೆರೆನಾಗೆ ಮಹಿಳೆಯರ ಸಿಂಗಲ್ಸ್ ವಿಭಾಗದ ಅಂತಿಮ ವೈಲ್ಡ್ ಕಾರ್ಡ್ ನೀಡಿರುವುದಾಗಿ ಘೋಷಿಸಿದರು. 44 ವರ್ಷದ ಸೆರೆನಾ ಸಿಂಗಲ್ಸ್ ಜೊತೆಗೆ ತಮ್ಮ ಅಕ್ಕ ವೀನಸ್ ವಿಲಿಯಮ್ಸ್ ಅವರೊಂದಿಗೆ ಡಬಲ್ಸ್ ವಿಭಾಗದಲ್ಲೂ ಸ್ಪರ್ಧಿಸಲಿದ್ದಾರೆ. 2022ರ ಯುಎಸ್ ಓಪನ್‌ನಲ್ಲಿ ಸೆರೆನಾರ ಕೊನೆಯ ಸಿಂಗಲ್ಸ್ ಆಡಿದ್ದರು. ನಂತರ ಟೆನಿಸ್‌ನಿಂದ ದೂರ ಉಳಿದಿದ್ದರು. 2023ರಲ್ಲಿ ಅವರ ಎರಡನೇ ಪುತ್ರಿ ಜನಿಸಿದ್ದರು.

ಅಗ್ರ ತಾರೆಯರ ಸವಾಲು: ಸದ್ಯ ಸೆರೆನಾಗೆ ಸಿಂಗಲ್ಸ್ ರ‍್ಯಾಂಕಿಂಗ್ ಇಲ್ಲ, ಆದ್ದರಿಂದ ಮೊದಲ ಸುತ್ತಿನಲ್ಲೇ ಹಾಲಿ ವಿಂಬಲ್ಡನ್ ಚಾಂಪಿಯನ್ ಇಗಾ ಸ್ವಿಯಾಟೆಕ್, ವಿಶ್ವ ನಂ.1 ಅರಿನಾ ಸಬಲೆಂಕಾ ಅಥವಾ ಇತರ ಅಗ್ರ ಶ್ರೇಯಾಂಕಿತೆಯರ ವಿರುದ್ಧ ಸೆಣಸುವ ಸಾಧ್ಯತೆಯಿದೆ. ವಿಂಬಲ್ಡನ್ ಸಿಂಗಲ್ಸ್ ಡ್ರಾ ಶುಕ್ರವಾರ ನಡೆಯಲಿದ್ದು, ಸೆರೆನಾರ ಮೊದಲ ಸುತ್ತಿನ ಎದುರಾಳಿ ಯಾರೆಂಬುದು ತಿಳಿಯಲಿದೆ.

ಏಳು ಗ್ರ್ಯಾಂಡ್ ಸ್ಲಾಮ್ ಗೆದ್ದಾಕೆ! : ವಿಂಬಲ್ಡನ್‌ನಲ್ಲಿ ಸೆರೆನಾ ಏಳು ಬಾರಿ (2002, 2003, 2009, 2010, 2012, 2015 ಮತ್ತು 2016) ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದಾರೆ. ಜೊತೆಗೆ ವೀನಸ್ ಜೊತೆಗೂಡಿ ಆರು ವಿಂಬಲ್ಡನ್ ಡಬಲ್ಸ್ ಪ್ರಶಸ್ತಿಗಳನ್ನೂ ಜಯಿಸಿದ್ದಾರೆ. 2012ರ ಲಂಡನ್ ಒಲಿಂಪಿಕ್ಸ್ ವಿಂಬಲ್ಡನ್‌ನಲ್ಲೇ ನಡೆದ ಟೆನಿಸ್ ಸ್ಪರ್ಧೆಯಲ್ಲಿ ಸಿಂಗಲ್ಸ್ ಹಾಗೂ ಡಬಲ್ಸ್ ಎರಡರಲ್ಲೂ ಚಿನ್ನ ಗೆದ್ದಿದ್ದರು.

ಉರಗ್ವೆ ವಿರುದ್ಧ 2–2 ಡ್ರಾ ಸಾಧನೆ | ನಾಕೌಟ್‌ಗಿನ್ನು ಒಂದೇ ಮೆಟ್ಟಿಲು

ಅಬ್ಬಬ್ಬಾ ಕೇಪ್ ವೆರ್ದೆ

• **ಮಯಾಮಿ ಗಾರ್ಡನ್ಸ್:** ಕೇಪ್ ವೆರ್ದೆ ತನ್ನ ಚೊಚ್ಚಲ ವಿಶ್ವಕಪ್‌ನಲ್ಲಿಯೇ ದೊಡ್ಡ ಸದ್ದು ಮಾಡುತ್ತಿದ್ದು, ಎರಡು ಬಾರಿಯ ವಿಶ್ವಕಪ್ ಚಾಂಪಿಯನ್ ಉರಗ್ವೆ ವಿರುದ್ಧ 2-2 ಡ್ರಾ ಸಾಧಿಸಿತು. ಇದೇ ಪಂದ್ಯದಲ್ಲಿ ಕೇಪ್ ವೆರ್ದೆ ಚೊಚ್ಚಲ ವಿಶ್ವಕಪ್ ಗೋಲ್ ದಾಖಲಿಸಿದ ಸಾಧನೆಗೈದಿದೆ. 5.3 ಲಕ್ಷ ಜನಸಂಖ್ಯೆಯ ಪುಟ್ಟ ದೇಶವೊಂದು ದೈತ್ಯ ತಂಡಗಳಿಗೆ ಸವಾಲೊಡ್ಡಿ ಅಬ್ಬಬ್ಬಾ ಎನ್ನಿಸಿದೆ.

ಫ್ರೀ ಕಿಕ್ ಪಡೆದಿದ್ದಾಗ ಕೆವಿನ್ ಪಿನಾ ಕೇಪ್ ವೆರ್ದೆ ಪರ ಮೊದಲ ವಿಶ್ವಕಪ್ ಗೋಲ್ ದಾಖಲಿಸಿದರು. ಹೆಲಿಯೊ ವರೆಲಾ ಇಕ್ವಲೈಸರ್ ಗೋಲ್ ಹೊಡೆಯುವ ಮೂಲಕ ಪಂದ್ಯದಲ್ಲಿ ಸಮಬಲ ಸಾಧಿಸಲು ನೆರವಾದರು. ಈ ಬಾರಿಯ ವಿಶ್ವಕಪ್‌ನಲ್ಲಿ ಕೇಪ್ ವೆರ್ದೆ ಅತಿ ಅಚ್ಚರಿಯ ತಂಡವಾಗಿ ಹೊರಹೊಮ್ಮಿದೆ.

ಕಳೆದ ವರ್ಷ ಅ.13ರಂದು ಎಸ್ವಟಿನಿ ವಿರುದ್ಧ ಫುಟ್ಬಾಲ್ ಪಂದ್ಯ ಆಡುವುದರಿಂದ ಕೇಪ್ ವೆರ್ದೆ ಸರ್ಕಾರ ಅರ್ಧ ದಿನ ರಜೆ ಘೋಷಿಸಿತ್ತು. ಆ ಪಂದ್ಯದಲ್ಲಿ ಕೇಪ್ ವೆರ್ದೆ ತಂಡವು 3–0 ಗೋಲ್‌ಗಳ ಅಂತರದಿಂದ ಗೆದ್ದಿತ್ತು. ಅಲ್ಲಿಂದ ಕೇಪ್ ವೆರ್ದೆ ಈವರೆಗೆ ಹಿಂತಿರುಗಿ ನೋಡಿಲ್ಲ.

21ನೇ ನಿಮಿಷದಲ್ಲಿ ಪಿನಾ ಗೋಲ್ ದಾಖಲಿಸಿ ಮಹತ್ವದ ಮುನ್ನಡೆಯನ್ನು ನೀಡಿದರು. ಮೊದಲಾರ್ಧದ ಕೊನೆಯಲ್ಲಿ 44ನೇ ನಿಮಿಷದಲ್ಲಿ ಮ್ಯಾಕ್ಸಿಮಿಲಿಯಾನೊ ಮತ್ತು ಎಕ್ಸ್ಟ್ರಾ ಮಿನಿಟ್‌ಗಳಲ್ಲಿ (45+6) ಆಗಸ್ಟಿನ್ ಕ್ಯಾನೊಬಿ ಗೋಲ್ ದಾಖಲಿಸಿದ ಉರಗ್ವೆ ತಂಡಕ್ಕೆ 2-1 ಮುನ್ನಡೆ ಒದಗಿಸಿದರು. ಆದರೆ ದ್ವಿತೀಯಾರ್ಧ ಮೈದಾನಕ್ಕೆ ಪ್ರವೇಶಿಸಿದ ನಿಮಿಷಗಳೊಳಗೆ ಹೆಲಿಯೊ ವರೆಲಾ(61ನೇ ನಿಮಿಷ) ಐತಿಹಾಸಿಕ ಗೋಲ್ ದಾಖಲಿಸಿದರು.

ಗೋಲ್‌ಗಳ ವಿವರ

- 21ನೇ ನಿಮಿಷ - ಕೆವಿನ್ ಪಿನಾ (ಕೇಪ್ ವೆರ್ದೆ)
- 44ನೇ ನಿಮಿಷ-ಮ್ಯಾಕ್ಸಿಮಿಲಿಯಾನೊ ಅರೌಜೊ (ಉರಗ್ವೆ)
- 45+6 ನಿಮಿಷ - ಆಗಸ್ಟಿನ್ ಕ್ಯಾನೊಬಿ (ಉರಗ್ವೆ)
- 61ನೇ ನಿಮಿಷ - ಹೆಲಿಯೊ ವರೆಲಾ (ಕೇಪ್ ವೆರ್ದೆ)





ನಾಕೌಟ್‌ಗೇರಲು ಬೇಕು 2 ಅಂಕ!

ಮೊದಲ ವಿಶ್ವಕಪ್ ಪಂದ್ಯದಲ್ಲೇ ಬಲಾಢ್ಯ ಸ್ಪೇನ್ ವಿರುದ್ಧ ಸಮಬಲದ ಹೋರಾಟ ಪ್ರದರ್ಶಿಸಿದ್ದ ತಂಡವು ಎರಡನೇ ಡ್ರಾ ಫಲಿತಾಂಶ ಸಾಧಿಸಿತು. ಇದರೊಂದಿಗೆ ಕೇಪ್ ವೆರ್ದೆ 2 ಅಂಕಗಳನ್ನು ಸಂಪಾದಿಸಿದ್ದು, ನಾಕೌಟ್‌ಗೇರಲು 2 ಅಂಕಗಳ ಅಗತ್ಯವಿದೆ. ಎಚ್ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಸ್ಪೇನ್ ಎದುರು ಹೀನಾಯ ಸೋಲುಂಡ ಸೌದಿ ಅರೇಬಿಯಾವನ್ನು ಕೇಪ್ ವೆರ್ದೆ ಶುಕ್ರವಾರ ಎದುರಿಸಲಿದೆ. ಸೌದಿ ವಿರುದ್ಧವೂ ಆಕ್ರಮಣಕಾರಿ ಆಟ ತೋರಿಸಿದರೆ ನಾಕೌಟ್ ಪ್ರವೇಶಿಸುವುದು ಖಚಿತ. ಮೊದಲ ವಿಶ್ವಕಪ್ ಆಡುತ್ತಿರುವ ಕೇಪ್ ವೆರ್ದೆ ಈವರೆಗೆ ಸೋತಿಲ್ಲ, ಇನ್ನೊಂದು ಅಚ್ಚರಿಯ ಫಲಿತಾಂಶ ಕಾಣುವ ಸಾಧ್ಯತೆಯಿದೆ.

ಈ ಸಲ ಈಜಿಪ್ಟ್ ಗೆಲ್ಲಿಸಿದ ಸಲಾಹ್



ನ್ಯೂಜಿಲೆಂಡ್ ಎದುರು 3-1 ಗೆಲುವು, ವಿಶ್ವಕಪ್‌ನಲ್ಲಿ ಚೊಚ್ಚಲ ಜಯ

• **ವ್ಯಾಂಕೋವರ್:** ಮೊಹಮ್ಮದ್ ಸಲಾಹ್ ಗೋಲ್ ನೆರವಿನಿಂದ ಈಜಿಪ್ಟ್ ಇದೇ ಮೊದಲ ಸಲ ವಿಶ್ವಕಪ್ ಪಂದ್ಯವೊಂದನ್ನು ಗೆದ್ದ ಸಾಧನೆಗೈದಿದೆ. ನ್ಯೂಜಿಲೆಂಡ್ ವಿರುದ್ಧ ಸಲಾಹ್ ಸ್ಕೋರ್ ಮಾಡಿದ್ದು, ಈಜಿಪ್ಟ್ ಮಹತ್ವದ 2-1 ಗೋಲ್‌ಗಳ ಮುನ್ನಡೆಯನ್ನು ಪಡೆದಿತ್ತು. ಪಂದ್ಯದ 67ನೇ ನಿಮಿಷದಲ್ಲಿ ಸಲಾಹ್ ತಮ್ಮ 68ನೇ ಅಂತಾರಾಷ್ಟ್ರೀಯ ಗೋಲ್ ದಾಖಲಿಸಿದ್ದರು. ಈ ಗೆಲುವಿನೊಂದಿಗೆ ಈಜಿಪ್ಟ್ ಜಿ ಗುಂಪಿನ ಅಗ್ರಸ್ಥಾನಕ್ಕೇರಿದೆ. ಶುಕ್ರವಾರ ಇರಾನ್ ತಂಡವನ್ನು ಈಜಿಪ್ಟ್ ಎದುರಿಸಲಿದೆ. ಇರಾನ್ ವಿರುದ್ಧ ಡ್ರಾ ಸಾಧಿಸಿದರೆ ಈಜಿಪ್ಟ್ ನಾಕೌಟ್ ಪ್ರವೇಶಿಸುವ ಅವಕಾಶವನ್ನು ಹೊಂದಿದೆ.

ನಾಲ್ಕು ವರ್ಷಗಳ ಹಿಂದೆ ಕತಾರ್‌ನಲ್ಲಿ ನಡೆದ ವಿಶ್ವಕಪ್‌ಗೆ ಈಜಿಪ್ಟ್ ತಂಡ ಅರ್ಹತೆ ಸಂಪಾದಿಸುವಲ್ಲಿ ವಿಫಲವಾಗಿತ್ತು. 2018ರ ರಷ್ಯಾ ವಿಶ್ವಕಪ್‌ನಲ್ಲಿ ಸಲಾಹ್ ಅವರ ಗೋಲ್‌ಗಳನ್ನು ಹೊಡೆದಿದ್ದರು. ಆದರೆ ಈಜಿಪ್ಟ್ ಹೊರಬಿದ್ದಿತ್ತು. 15ನೇ ನಿಮಿಷದಲ್ಲಿ ಫಿನ್ ಸರ್ಮನ್ ಹೆಡ್ಡರ್ ಹೊಡೆದಿದ್ದರು. 58ನೇ ನಿಮಿಷದಲ್ಲಿ ಈಜಿಪ್ಟ್ ಪರ ಇಕ್ವಲೈಸರ್ ಗೋಲ್ ಹೊಡೆದ ಜಿಕೊ ಅಭಿಮಾನಿಗಳತ್ತ ಕೈ ತೋರಿಸಿ ಸಂಭ್ರಮಿಸಿದರು. ಜಿಕೊ ಅವರಿಂದ ಪಾಸ್ ಪಡೆದ ಸಲಾಹ್ 67ನೇ ನಿಮಿಷದಲ್ಲಿ ಗೋಲ್ ದಾಖಲಿಸಿದ್ದರು. ಟ್ರೆಜೆಗೆಟ್ ಡೈವಿಂಗ್ ಹೆಡ್ಡರ್‌ನಿಂದ ಈಜಿಪ್ಟ್ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಗೋಲ್‌ಗಳ ವಿವರ

- 15ನೇ ನಿಮಿಷ - ಫಿನ್ ಸರ್ಮನ್ (ನ್ಯೂಜಿಲೆಂಡ್)
- 58ನೇ ನಿಮಿಷ - ಮೊಸ್ತಫಾ ಜಿಕೊ (ಈಜಿಪ್ಟ್)
- 67ನೇ ನಿಮಿಷ - ಮೊಹಮ್ಮದ್ ಸಲಾಹ್ (ಈಜಿಪ್ಟ್)
- 82ನೇ ನಿಮಿಷ - ಟ್ರೆಜೆಗೆಟ್ (ಈಜಿಪ್ಟ್)

> ರಾಷ್ಟ್ರೀಯ ತಂಡಕ್ಕೆ ನನ್ನ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದೇನೆ. ಇಂದು ವಿಶೇಷವಾದ ದಿನ. ವಿಶ್ವಕಪ್‌ನಲ್ಲಿ ಇದು ನಮ್ಮ ಮೊದಲ ಗೆಲುವು.
> ■ ಮೊಹಮ್ಮದ್ ಸಲಾಹ್, ಈಜಿಪ್ಟ್ ತಾರೆ

ಸ್ಪೇನ್ ಗೆಲುವಿನ ಕಂಬ್ಯಾಕ್ | ಸೌದಿ ವಿರುದ್ಧ 4–0 ಗೆಲುವು

ಯಮಾಲ್ ಗೋಲ್, ಸ್ಪೇನ್ ಕಮಾಲ್

• **ಅಟ್ಲಾಂಟ(ಅಮೆರಿಕ):** ವಿಶ್ವ ಫುಟ್ಬಾಲ್‌ನ ಟೀನೇಜ್ ಸೂಪರ್‌ಸ್ಟಾರ್ ಲಮೀನ್ ಯಮಾಲ್ 10ನೇ ನಿಮಿಷದಲ್ಲಿಯೇ ಗೋಲ್ ದಾಖಲಿಸುವ ಮೂಲಕ ಸ್ಪೇನ್ ತಂಡಕ್ಕೆ ಭರ್ಜರಿ ಆರಂಭ ಒದಗಿಸಿಕೊಟ್ಟರು. ಇದು ಯಮಾಲ್ ಅವರ ಚೊಚ್ಚಲ ವಿಶ್ವಕಪ್ ಗೋಲ್ ಆಗಿತ್ತು. 2026ರ ವಿಶ್ವಕಪ್‌ನಲ್ಲಿ ಸ್ಪೇನ್ 4–0 ಜಯ ಸಾಧಿಸಿದರೆ, ಸೌದಿ ಅರೇಬಿಯಾ ಹೀನಾಯ ಸೋಲುಂಡಿತು. ತನ್ನ ಹಿಂದಿನ ಪಂದ್ಯದಲ್ಲಿ ಕೇಪ್ ವೆರ್ದೆ ಎದುರು ಗೋಲ್‌ರಹಿತ ಡ್ರಾ ಕಂಡು ಕಳೆಗುಂದಿದ್ದ ಸ್ಪೇನ್, ಈ ಪಂದ್ಯದಲ್ಲಿ ತನ್ನ ನೈಜ ಆಟದೊಂದಿಗೆ ಜಯ ಕಂಡುಕೊಂಡಿದೆ. ಒಯಾರ್ಜಬಲ್ ಸ್ಪೇನ್ ಪರ ಅವಳಿ ಗೋಲ್ ದಾಖಲಿಸಿದರು. 49ನೇ ನಿಮಿಷದಲ್ಲಿ ಕುಕುರೆಲ್ಲಾ ಕಾರ್ನರ್‌ನಿಂದ ಹೊಡೆದ ಚೆಂಡನ್ನು ಗೋಲ್‌ಕೀಪರ್ ತಡೆದರೂ ಡಿಫೆಂಡರ್ ಹಸನ್‌ಗೆ ಬಡಿದ ಚೆಂಡು ನೆಟ್‌ಗೆ ಬಿದ್ದಿದ್ದು, ಸೌದಿ ದುರಾದೃಷ್ಟವನ್ನು ತೋರಿಸಿತು. ಈಗಾಗಲೇ ಫುಟ್ಬಾಲ್ ತಾರೆಯರಾದ ಲಿಯೊನೆಲ್ ಮೆಸ್ಸಿ, ಕಿಲಿಯನ್ ಎಂಬಾಪ್ಪೆ, ಎರ್ಲಿಂಗ್ ಹಾಲೆಂಡ್ ಮತ್ತು ಹ್ಯಾರಿ ಕೇನ್ ಗೋಲ್ ಬೇಟೆ ಆರಂಭಿಸಿದ್ದು, ಇವರ ಸಾಲಿಗೆ ಯಮಾಲ್ ಸೇರಿಕೊಂಡಿದ್ದಾರೆ. ಹಿಂದಿನ ಪಂದ್ಯದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದಿದ್ದ ಯಮಾಲ್ ಕಮಾಲ್ ಮಾಡಿರಲಿಲ್ಲ.



ಗೋಲ್‌ಗಳ ವಿವರ

- 10ನೇ ನಿಮಿಷ - ಲಮೀನ್ ಯಮಾಲ್ (ಸ್ಪೇನ್)
- 21ನೇ ನಿಮಿಷ - ಮಿಕೆಲ್ ಒಯಾರ್ಜಬಲ್ (ಸ್ಪೇನ್)
- 24ನೇ ನಿಮಿಷ - ಮಿಕೆಲ್ ಒಯಾರ್ಜಬಲ್ (ಸ್ಪೇನ್)
- 49ನೇ ನಿಮಿಷ - ಹಸನ್ ಅಲ್-ತಂಬಾಕ್ತಿ (ಓನ್ ಗೋಲ್, ಸೌದಿ ಅರೇಬಿಯಾ)

ಏಳು ಗೋಲ್ ತಡೆದ ಇರಾನ್ ತಡೆಗೋಡೆ ಬೈರನ್‌ವಾಂದ್




• **ಕ್ಯಾಲಿಫೋರ್ನಿಯಾ:** ಏಳು ಗೋಲ್‌ಗಳನ್ನು ತಡೆದ ಗೋಲ್‌ಕೀಪರ್ ಅಲಿರೆಜಾ ಬೈರನ್‌ವಾಂದ್ ಸಾಹಸವನ್ನು ಎಷ್ಟು ಮೆಚ್ಚಿಕೊಂಡರೂ ಸಾಲದು, ಅಕ್ಷರಶಃ ಇರಾನ್ ತಡೆಗೋಡೆಯಂತೆ ಮಿಂಚಿದರು. ಅಮೆರಿಕದಲ್ಲಿ ವಿಶ್ವಕಪ್ ಪಂದ್ಯವನ್ನಾಡಿದ ಇರಾನ್ ತನ್ನ ಆಟದಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಜೆರೆಮಿ ಡೊಕು ಅನಾರೋಗ್ಯದಿಂದ ಪಂದ್ಯದಲ್ಲಿ ಆಡದ ಕಾರಣ ಬೆಲ್ಜಿಯಂ ಪರ 10 ಆಟಗಾರರಷ್ಟೇ ಮೈದಾನಕ್ಕೆ ಇಳಿದಿದ್ದರು. ಏಳು ಗೋಲ್‌ಗಳನ್ನು ಹೊಡೆಯಲು ಬೆಲ್ಜಿಯಂ ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. 66ನೇ ನಿಮಿಷದಲ್ಲಿ ಇರಾನ್ ಆಟಗಾರ ಮೆಹದಿ ತರೆಮಿ ತಡೆಯುವ ಪ್ರಯತ್ನದಲ್ಲಿ ಫೌಲ್ ಮಾಡಿದ ಬೆಲ್ಜಿಯಂ ಡಿಫೆಂಡರ್ ರೆಫಾರಿಯಿಂದ ರೆಡ್ ಕಾರ್ಡ್ ಪಡೆದರು. ಆದರೂ ಬೆಲ್ಜಿಯಂ ಸಂಪೂರ್ಣ ಆಕ್ರಮಣಕಾರಿ ಆಟವನ್ನು ಪ್ರದರ್ಶಿಸಿತು. ಪ್ರತಿ ಕ್ಷಣವೂ ಬೆಲ್ಜಿಯಂ ಆಟಗಾರರು ಗೋಲ್ ದಾಖಲಿಸಲು ಅವಕಾಶ ಹುಡುಕುತ್ತಿದ್ದರು. ಆದರೆ ಇರಾನ್ ತಂಡವು ಹೆಚ್ಚಿನ ಅವಕಾಶ ಸೃಷ್ಟಿಸುವಲ್ಲಿ ವಿಫಲವಾಗಿದ್ದು, ಯಾವುದೇ ಗೋಲ್ ದಾಖಲಿಸಲಿಲ್ಲ. ಇದು ಇರಾನ್ ಗೋಲಿ ಬೈರನ್‌ವಾಂದ್ ಮೇಲೆ ಒತ್ತಡ ಹೇರಿತು. ಆದರೆ ಒತ್ತಡದಲ್ಲೂ ಬೆಲ್ಜಿಯಂನ ಎಲ್ಲಾ ಪ್ರಯತ್ನಗಳನ್ನೂ ಬೈರನ್‌ವಾಂದ್ ತಡೆದರು. ಈ ವಿಶ್ವಕಪ್‌ನಲ್ಲಿ ಬೆಲ್ಜಿಯಂ ಇನ್ನೂ ಗೋಲ್ ಖಾತೆ ತೆರೆದಿಲ್ಲ, 73ನೇ ನಿಮಿಷದಲ್ಲಿ ಅಚ್ಚರಿಯ ರೀತಿ ಬೆಲ್ಜಿಯಂ ಲೈನ್‌ಅಪ್ ಸೇರಿದ ರೊಮೆಲು ಲುಕಾಕು ಗೋಲ್ ಹೊಡೆದು ಅಚ್ಚರಿ ಮೂಡಿಸಲಿಲ್ಲ.

ಬೆಲ್ಜಿಯಂ ಎದುರು ಗೋಲ್‌ಲೆಸ್ ಡ್ರಾ ಸಾಧಿಸಿದ ಇರಾನ್

ತಾಹ, ಗೌತಮ್ ಗರ್ಜನೆ, ಗೆದ್ದ ಟೈಗರ್ಸ್

ಮೈಸೂರು: ಮೊಹಮ್ಮದ್ ತಾಹ ಮತ್ತು ನಾಯಕ ಅನೀಶ್ವರ್ ಗೌತಮ್ ಅವರ ಸ್ಫೋಟಕ ಅರ್ಧ ಶತಕಗಳ ನೆರವಿನಿಂದ ಮೈಸೂರು ವಾರಿಯರ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. 162 ರನ್ ಸವಾಲನ್ನು ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 17.3 ಓವರ್‌ಗಳಲ್ಲೇ ಗುರಿಮುಟ್ಟಿತು. ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ವಾರಿಯರ್ಸ್ ಪರ ಆರಂಭಿಕ ಕಾರ್ತಿಕ್(35), ರಿತೇಶ್ ಭಟ್ಕಳ್ (46) ಮತ್ತು ಕಾರ್ತಿಕೇಯ (27) ಕೊಡುಗೆ ನೀಡಿದ್ದು ಬಿಟ್ಟರೆ ಇತರರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ, ಮೈಸೂರಿನ ಮಧ್ಯಮ ಕ್ರಮಾಂಕ ಮತ್ತು ಕೆಳಕ್ರಮಾಂಕ ಸಂಪೂರ್ಣ ವೈಫಲ್ಯ ಕಂಡಿತು.




ಸಂಕ್ಷಿಪ್ತ ಸ್ಕೋರ್

ಮೈಸೂರು ವಾರಿಯರ್ಸ್ 161/10 (19.2): ಕಾರ್ತಿಕ್ 35(27), ಭಟ್ಕಳ್ 46(28), ಕಾರ್ತಿಕೇಯ 27(19), ಹಾರ್ದಿಕ್ 25ಕ್ಕೆ 3, ಕುಮಾರ್ 14ಕ್ಕೆ 3.
ಹುಬ್ಬಳ್ಳಿ ಟೈಗರ್ಸ್ 162/3 (17.3): ತಾಹ 57(38), ಅನೀಶ್ವರ್ 60(41)★, ಮಯಾಂಕ್ 19(11), ಬಜಾಜ್ 27ಕ್ಕೆ 2, ಭಟ್ಕಳ್ 24ಕ್ಕೆ 1.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



6023

ಎಡದಿಂದ ಬಲಕ್ಕೆ
1.ಆನಂದವಾದಾಗ ಬರುವ ಕಣ್ಣೀರು (3)
3.ಎಡಗಡೆಯ ವಿರುದ್ಧ ಬದಿ (4)
5.ರಾಮನ ಬಿಲ್ಲಿನ ಕಡೆಯಲ್ಲಿ ಜುಲ್ಲಾನೆಯಿದೆ (3)
7.ಸುತನ ನಡುವೆ ಬುದ್ಧನ ಒಂದು ಹೆಸರಿದೆ (3)
8.ಇದ್ದಕ್ಕಿದ್ದಂತೆ ಕಾಣದಂತಾಗುವುದು ತಿರುಗಿದೆ (2)
10.ನಡುಗದೇ ಧರಿಸಿದ ಆಭರಣ (2)
12.ಬಗ್ಗೆಗೆಡುವುದು-ಕಳಾಹೀನವಾಗುವುದು (3)
13.ವಾಯುದ ನಡುವೆ ಕುಡಿಯುವ ದ್ರವಪದಾರ್ಥವಿದೆ (3)
15.ಮುತ್ತು-ರತ್ನಗಳ ಸಂಗ್ರಹವಿರುವ ಸ್ಥಳ (4)
16.ಪ್ರಕೃತಿ-ಸಮೃದ್ಧಿಯ ಸಂಕೇತದ ಬಣ್ಣ (3)

ಮೇಲಿನಿಂದ ಕೆಳಕ್ಕೆ
1.ವಸಂತನ ಸ್ನೇಹಿತ-ಮನ್ಮಥ (5)
2.ಮೃದುವಾದುದು ತಲೆಕೆಳಗಾಗಿದೆ (3)
3.ಕಲಕಿದ,ಸ್ವಚ್ಛವಲ್ಲದ ನೀರು (3)
4.ಗಗನ-ತಟ್ಟಿ ಒಳಗೊಂಡ ಹೂರಣವಿದು (5)
6.ಇದು ಹಲ್ಲುಜ್ಜಲು ಬಳಸುವ ಪುಡಿ (4)
7.ಮೋಹಕನಗೆಯ ನಟಿ ಕಡೆಯಲ್ಲಿ ದೀರ್ಘವಾಗಿದ್ದಾಳೆ (4)
9. ಮಾರನ ನಡುವೆ ಫಲರಾಜನ ತ್ರಿಪದೆ (5)
11.ಸೌಳಿನಿಂದ ಕೂಡಿದ ಜಲ (5)
13.ತಿಳುವಳಿಕೆ ಕಡಿಮೆ ಇರುವವನು (3)
14.ಹಾರುಗ್ಯ ವಿಲ್ಲಿ ತಲೆಕೆಳಗಾಗಿದೆ (3)

6022 ಉತ್ತರ

ಎಡದಿಂದ ಬಲಕ್ಕೆ:
1.ಕದಗ 6.ಗುರುಶಿಷ್ಯರು
7.ಗಿಡುಗ 8.ಕರಾರು
9.ಶಿಕ್ಷೆ 10.ಚಿನ್ನ
11.ಪಟ್ಟಿಕ 12.ಕರಂಡ
15.ಸಮಕಾಲೀನ
17.ಸುನೇರಿ

ಮೇಲಿನಿಂದ ಕೆಳಕ್ಕೆ
1.ಕನಕಾಂಗಿ
2.ಗಜಾನುಗಶಿಕ
3.ಅಂಗುಲ 4.ಕಾಶಿ
5.ನಾರುಬೇರು
8.ಕನ್ನಡಕಸ್ತೂರಿ
11.ಪರಿಸರ 13.ಕತ್ತರಿಸು
14.ಏನಕ 16.ಕಾವ್ಯ

ಜು.3ರವರೆಗೆ ಜಾಲಹಳ್ಳಿಯ ವಾಯುಪಡೆ ನಿಲ್ದಾಣದಲ್ಲಿ 7ನೇ ಆವೃತ್ತಿ | ಈ ಬಾರಿ 16 ತಂಡಗಳ ಸ್ಪರ್ಧೆ

ಇಂದಿನಿಂದ ಮಾರ್ಷಲ್ ಅರ್ಜುನ್ ಸಿಂಗ್ ಸ್ಮರಣಾರ್ಥ ಹಾಕಿ

• **ಬೆಂಗಳೂರು:** ಮಾರ್ಷಲ್ ಆಫ್ ದಿ ಏರ್‌ಫೋರ್ಸ್ ಅರ್ಜನ್ ಸಿಂಗ್ ಸ್ಮಾರಕ ಹಾಕಿ ಟೂರ್ನಮೆಂಟ್ 2026ರ ಏಳನೇ ಆವೃತ್ತಿಯು ಜೂ.23ರಿಂದ ಜು.3ರವರೆಗೆ ಬೆಂಗಳೂರಿನ ಜಾಲಹಳ್ಳಿಯ ವಾಯುಪಡೆ ನಿಲ್ದಾಣದಲ್ಲಿ ನಡೆಯಲಿದೆ.

ವಾಯುಪಡೆಯ ಉಸ್ತುವಾರಿ ಅಧಿಕಾರಿ ಏರ್ ಮಾರ್ಷಲ್ ಎಸ್. ಶಿವಕುಮಾರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಗಳನ್ನು ನೀಡಿದರು.

ವಾಯುಪಡೆಯ ಕ್ರೀಡಾ ನಿಯಂತ್ರಣ ಮಂಡಳಿ(ಎಎಫ್‌ಎಸ್‌ಸಿಬಿ) 2018ರಿಂದ ಪಂದ್ಯಾವಳಿಯನ್ನು ಆಯೋಜಿಸುತ್ತಿದೆ. ವಾಯುಪಡೆಯ ಮಾರ್ಷಲ್ ಅರ್ಜನ್ ಸಿಂಗ್ ಅವರು ಅಪ್ರತಿಮ ಹಾಕಿ ಆಟಗಾರರಾಗಿದ್ದರು. ಯುದ್ಧದಲ್ಲಿ ಮಾತ್ರವಲ್ಲದೆ, ಕ್ರೀಡಾ ಕ್ಷೇತ್ರದಲ್ಲೂ ಮುಂಚೂಣಿಯಿಂದ ಮುನ್ನಡೆಸುವ ವಾಯು ಯೋಧರಿಗೆ ಅವರು ಸ್ಫೂರ್ತಿಯಾಗಿದ್ದರು. ಭಾರತೀಯ ವಾಯುಪಡೆಯು(ಐಎಎಫ್) ವಿವಿಧ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಮತ್ತು ರಾಷ್ಟ್ರಕ್ಕೆ ಹಾಗೂ ಐಎಎಫ್‌ಗೆ ಪ್ರಶಸ್ತಿಗಳನ್ನು ತಂದ ಕ್ರೀಡಾಪಟುಗಳನ್ನು ನಿರಂತರವಾಗಿ ನಿರ್ಮಾಣ ಮಾಡುತ್ತಿದೆ ಎಂದು ತಿಳಿಸಿದರು.

ಈ ಪಂದ್ಯಾವಳಿಯಲ್ಲಿ ಒಟ್ಟು 16 ತಂಡಗಳು ಭಾಗವಹಿಸಲಿವೆ. ಪಂದ್ಯಗಳು ಜಾಲಹಳ್ಳಿಯ ವಾಯುಪಡೆ ನಿಲ್ದಾಣದ ಹಾಕಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಪಂದ್ಯಗಳನ್ನು ಲೀಗ್ ಕಮ್ ನಾಕೌಟ್ ಆಧಾರದ ಮೇಲೆ ನಡೆಸಲಾಗುವುದು. ಪಂದ್ಯಾವಳಿ ವಿಜೇತ ತಂಡ 10 ಲಕ್ಷ ರೂ. ನಗದು ಬಹುಮಾನ ಪಡೆದರೆ, ರನ್ನರ್ಸ್ ಅಪ್ ತಂಡವು 8 ಲಕ್ಷ ರೂ. ಬಹುಮಾನ ಗಳಿಸಲಿದೆ. ಪ್ರತಿ ಪಂದ್ಯದ ಪಂದ್ಯಶ್ರೇಷ್ಠ ಆಟಗಾರ 25 ಸಾವಿರ ರೂ. ಮತ್ತು ಪಂದ್ಯಾವಳಿಯ ಸರಣಿಶ್ರೇಷ್ಠ ಆಟಗಾರ 50 ಸಾವಿರ ರೂ. ನಗದು ಬಹುಮಾನ ಪಡೆದುಕೊಳ್ಳಲಿದ್ದಾರೆ ಎಂದರು. ಮಂಗಳವಾರ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ವಾಯುಪಡೆಯ ಉಸ್ತುವಾರಿ ಅಧಿಕಾರಿ ಏರ್ ಮಾರ್ಷಲ್ ಎಸ್. ಶಿವಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಜು.3ರ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ತರಬೇತಿ ಕಮಾಂಡಿಂಗ್-ಇನ್-ಚೀಫ್ ಏರ್ ಮಾರ್ಷಲ್ ಸೀತೆಪಲ್ಲಿ ಶ್ರೀನಿವಾಸ್ ವಹಿಸಲಿದ್ದಾರೆ.



ನಗದು ಬಹುಮಾನ (ಪ್ರಶಸ್ತಿ)

- 10 ಲಕ್ಷ ರೂ. - ಚಾಂಪಿಯನ್
- 8 ಲಕ್ಷ ರೂ. - ರನ್ನರ್‌ಅಪ್
- 25,000 ರೂ. - ಪಂದ್ಯಶ್ರೇಷ್ಠ
- 50,000 ರೂ. - ಸರಣಿಶ್ರೇಷ್ಠ

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಹೇಳಿಕೆ

ಆರೋಗ್ಯ, ಶಿಕ್ಷಣ ಮುಖ್ಯ



• **ಪೀಣ್ಯ ದಾಸರಹಳ್ಳಿ :** ಸಮಾಜದಲ್ಲಿ ಮನುಷ್ಯ ಉತ್ತಮನಾಗಲು ಅನ್ನ, ಆರೋಗ್ಯ ಮತ್ತು ಶಿಕ್ಷಣ ಬಹಳ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಉತ್ತಮ ಶಿಕ್ಷಣ ನೀಡಲು ಶೆಟ್ಟಿಹಳ್ಳಿಯಲ್ಲಿ ಶಿಕ್ಷಣ ಸಂಸ್ಥೆ ಪ್ರಾರಂಭಿಸಲಾಗಿದೆ ಎಂದು ಮಾಜಿ ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಅಭಿಪ್ರಾಯಪಟ್ಟರು.

ಶೆಟ್ಟಿಹಳ್ಳಿಯ ಬಿ.ಸುರೇಶ್ ಅವರ ಜನ್ಮ ದಿನಾಚರಣೆಯ ಸಂಭ್ರಮದಲ್ಲಿ ಶ್ರೀ ಸಾಯಿ ಇಂಟರ್ ನ್ಯಾಷನಲ್ ಸ್ಕೂಲ್ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಸಂಸ್ಥೆಯ ಮೂಲಕ ಉತ್ತಮ ಶಿಕ್ಷಣ ನೀಡಿ ಸಮಾಜಕ್ಕೆ ಒಳ್ಳೆಯ ವಿದ್ಯಾರ್ಥಿಗಳನ್ನು ನೀಡಲು ಬಿ. ಸುರೇಶ್ ಅವರು ಸ್ವಚ್ಛ, ಸುಂದರ ಪರಿಸರದಲ್ಲಿ ಶಾಲೆ ನಿರ್ಮಿಸಿದ್ದಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಸಮಾಜಕ್ಕೆ ಕೊಡುಗೆ ನೀಡುವಂತಹ ಜ್ಞಾನಿಗಳಾಗಲಿ ಎಂದು ಹಾರೈಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಸುರೇಶ್ ಅವರು ತಂದೆ ತಾಯಿಯ ಆಸೆಯಂತೆ ಒಂದು ಸುಂದರವಾದ ಶಾಲಾ ಕಟ್ಟಡ ನಿರ್ಮಾಣ ಮಾಡಿ, ನುರಿತ ಶಿಕ್ಷಕರನ್ನು ನೇಮಿಸಿ ಗುಣಮಟ್ಟದ ಶಿಕ್ಷಣ ನೀಡಲು ಶ್ರೀ ಸಾಯಿ ಇಂಟರ್ ನ್ಯಾಷನಲ್ ಸ್ಕೂಲ್ ಆರಂಭವಾಗಿದೆ. ಈ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಭವಿಷ್ಯದ ಭಾರತದ ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮಲಿ. ಈ ಭಾಗದ ಸುತ್ತಲಿನ ಜನರ ಪ್ರೀತಿ ಗಳಿಸಿ ಹೆಸರಾಗಲಿ. ಸುರೇಶ್ ಅವರು ಬಿಜೆಪಿಯಲ್ಲಿ ಸದಾ ನಿಷ್ಠಾವಂತ ಕಾರ್ಯಕರ್ತರಾಗಿರುವುದರಿಂದ ಅವರಿಗೂ ರಾಜಕೀಯವಾಗಿ ಒಳ್ಳೆಯ ಅವಕಾಶಗಳು ಸಿಗಲಿ ಎಂದು ಶುಭ ಕೋರಿದರು.

ಶಾಸಕ ಎಸ್.ಮುನಿರಾಜು ಮಾತನಾಡಿ, ವಿದ್ಯೆ ತನ್ನ ಉಸಿರಿರುವವರೆಗೂ ತಮ್ಮ ಜತೆಯಲ್ಲಿಯೇ ಇರುವಂತಹ ಒಂದು ಆಸ್ತಿ ಎಂದರು.

ಕಾರ್ಯಕ್ರಮದಲ್ಲಿ ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹರೀಶ್, ಬಿಜೆಪಿ ಮುಖಂಡ ಲಕ್ಷ್ಮಣ್ ಗೌಡ, ಬಿಜೆಪಿ ಅಧ್ಯಕ್ಷ ಸೋಮಶೇಖರ್, ಮಹಿಳಾ ಅಧ್ಯಕ್ಷೆ ಉಮಾದೇವಿ ನಾಗರಾಜು ಉಪಸ್ಥಿತರಿದ್ದರು.

ಬಿಡದಿ ನೂತನ ಟೌನ್‌ಶಿಪ್: ಸಿಎಂಗೆ ಪತ್ರ ಬರೆದ ಎಚ್‌ಡಿಕೆ

ಜೂ.27ರಂದು ಸಭೆ ನಿಗದಿಗೆ ಕೋರಿಕೆ

• **ರಾಮನಗರ :** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರಂಭ ಮಾಡಿರುವ ಬಿಡದಿ ನೂತನ ಟೌನ್‌ಶಿಪ್ ಯೋಜನೆ ಬಗ್ಗೆ ಚರ್ಚಿಸಲು ಸಿಎಂ ತಮಗೆ ಬರೆದಿದ್ದ ಪತ್ರಕ್ಕೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ಉತ್ತರ ಬರೆದಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ವಿಧಾನಸೌಧದಲ್ಲಿ ಚರ್ಚೆ ಉಪಯೋಗವಿಲ್ಲ, ಬಾಧಿತ ರೈತರ ಭಾಗದಲ್ಲಿಯೇ ಚರ್ಚೆ ನಡೆಯಬೇಕು ಎಂದು ಸಚಿವರು ಸಿಎಂಗೆ ತಿಳಿಸಿದ್ದಾರೆ.

ಸಚಿವರ ಪತ್ರದ ಪೂರ್ಣಪಾಠ ಇಲ್ಲಿದೆ: ಡಿ.ಕೆ.ಶಿವಕುಮಾರ್ ರವರೇ, ದಿನಾಂಕ: 22-06-2026ರ ತಮ್ಮ ಪತ್ರದಲ್ಲಿ ವಿಧಾನಸೌಧದಲ್ಲಿ ದಿನಾಂಕ: 26-06-2026ರಂದು ಬೆಳಗ್ಗೆ 11 ಗಂಟೆಗೆ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದ ಸಭೆಗೆ ನನ್ನನ್ನು ಮತ್ತು ನನ್ನ ತಂಡದ ಜನರು ಪ್ರತಿನಿಧಿಗಳೊಂದಿಗೆ ಚರ್ಚೆಗೆ ಆಹ್ವಾನಿಸಿರುವ ತಮ್ಮ ಪತ್ರ ನನ್ನ ಕೈ ಸೇರಿದೆ. ತಮ್ಮ ಆಹ್ವಾನಕ್ಕೆ ಧನ್ಯವಾದಗಳು. ಬಿಡದಿ ಸಮಗ್ರ ಉಪನಗರ ಯೋಜನೆ ಅನುಷ್ಠಾನದಿಂದ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಎಂಟು ಗ್ರಾಮಗಳು ಮತ್ತು ಹಾರೋಹಳ್ಳಿ ತಾಲ್ಲೂಕಿನ ಒಂದು ಗ್ರಾಮದ ರೈತರು, ಗ್ರಾಮಸ್ಥರು ಮತ್ತು ಪಾಲುದಾರರು ಹಲವಾರು ಸಮಸ್ಯೆ ಮತ್ತು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಲ್ಲದೇ, ಈ ಭಾಗದಲ್ಲಿರುವ ಅಪಾರ ಪರಿಸರ ಸಂಪತ್ತಿಗೆ ಹಾನಿಯಾಗುತ್ತದೆ.

ಈ ಹಿನ್ನೆಲೆಯಲ್ಲಿ ತಾವು ಪ್ರಸ್ತಾಪಿಸಿರುವ ಸಭೆಯನ್ನು ರಾಮನಗರ ಜಿಲ್ಲೆಯ ಬಿಡದಿ ಅಥವಾ ಬಾಧಿತ ಪ್ರದೇಶವಾದ ಭೈರಮಂಗಲದ ಯಾವುದಾದರೂ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಸಭೆ ಕರೆಯುವುದು ಸಮಂಜಸವೆನಿಸುತ್ತದೆ. ಈ ಮೇಲೆ ಸೂಚಿಸಿದ ಸ್ಥಳಗಳಲ್ಲಿ ಬಿಡದಿ ಸಮಗ್ರ ಉಪನಗರ ಯೋಜನೆಯಿಂದ ಬಾಧಿತರಾಗಿರುವ ರೈತರು, ಗ್ರಾಮಸ್ಥರು, ಕೃಷಿ ಕಾರ್ಮಿಕರು, ಹೈನುಗಾರಿಕೆ ಉದ್ಯಮದಲ್ಲಿರುವ ರೈತ ಮಹಿಳೆಯರು, ಸಣ್ಣ ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಬಾಧಿತ ಇತರ ಪಾಲುದಾರರನ್ನು ಭಾಗವಹಿಸಲು ಅವಕಾಶ ನೀಡಿದಲ್ಲಿ, ಈ ಸಭೆಯಲ್ಲಿ ಮುಕ್ತ ಮನಸ್ಸಿನ ಚರ್ಚೆ ನಡೆಸಿ, ಬಾಧಿತ ವರ್ಗದ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವಕಾಶವಾಗುತ್ತದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ ಮತ್ತು ನಿಲುವು.

ಈ ಯೋಜನೆಯ ರಚನೆ ಮತ್ತು ಅನುಷ್ಠಾನದಲ್ಲಿ ನನಗೆ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ ಎನ್ನುವುದನ್ನು ಈ ಪತ್ರದ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ. ಮುಂದುವರೆದು, ವಿಧಾನಸೌಧದಲ್ಲಿ ನಡೆಸಲು ಉದ್ದೇಶಿಸಿರುವ ಸಭೆಯಲ್ಲಿ ಬಾಧಿತ ರೈತ ವರ್ಗ, ಗ್ರಾಮಸ್ಥರು ಮತ್ತು ಪಾಲುದಾರರನ್ನು ಆಹ್ವಾನಿಸದೆ ಅವರನ್ನು ಹೊರಗೆ ಇಟ್ಟು ಸಭೆ ನಡೆಸುವುದರಿಂದ ಸಭೆ ಫಲಪ್ರದವಾಗುವುದಿಲ್ಲ.



ಜೂ.27ರಂದು ಸಭೆ

ತಾವು ನಿಗದಿಪಡಿಸಿದ ಜೂ. 26ರಂದು ನನಗೆ ಪೂರ್ವ ನಿಯೋಜಿತ ಕಾರ್ಯಕ್ರಮಗಳು ಇರುವುದರಿಂದ, ಈ ಉದ್ದೇಶಿತ ಸಭೆಯನ್ನು ಜೂ. 27ರಂದು ಮೇಲೆ ತಿಳಿಸಿದಂತೆ ಬಿಡದಿ ಅಥವಾ ಭೈರಮಂಗಲದ ಸೂಕ್ತ ಸ್ಥಳದಲ್ಲಿ ಆಯೋಜಿಸಿ ಮೇಲೆ ಕಾಣಿಸಿದ ಬಾಧಿತ ವರ್ಗದ ಜನರನ್ನು ಆಹ್ವಾನಿಸಿ ಸಭೆ ನಡೆಸಬೇಕೆಂದು ಈ ಮೂಲಕ ಕೋರುತ್ತೇನೆ ಎಂದು ಕೇಂದ್ರ ಸಚಿವರು ಪತ್ರದಲ್ಲಿ ಬರೆದಿದ್ದಾರೆ ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಮುಮ್ಮಡಿ ನಿರ್ವಾಣ ಸ್ವಾಮೀಜಿ ಲಿಂಗೈಕ್ಯ

• **ರಾಮನಗರ :** ಕನಕಪುರ ದೇಗುಲ ಮಠದ ನಿ.ಪ್ರ.ಸ್ವ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿಯವರು ಲಿಂಗೈಕ್ಯರಾದ ಸುದ್ದಿ ತಿಳಿದು ತೀವ್ರ ದುಃಖಿತನಾಗಿದ್ದೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.



ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ ಎನ್ನುವ ಮಾತನ್ನು ನಾವು ಕೇಳಿದ್ದೇವೆ. ಈ ಮಾತಿಗೆ ಅನ್ವರ್ಥದಂತೆ ಶರಣ ತತ್ವದ ಏಳಿಗೆಗೆ ದುಡಿದವರು ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಯವರು. ಪರಮ ಪೂಜ್ಯರ ಅಗಲಿಕೆ ಅತ್ಯಂತ ನೋವಿನ ಸಂಗತಿ ಎಂದು ಕಂಬನಿ ಮಿಡಿದಿದ್ದಾರೆ.

ಜನನ, ಮರಣ ದೇಹಕ್ಕೆ ಹೊರತು ಜಂಗಮಕ್ಕಲ್ಲ, ಶರಣರ ಗುಣವನ್ನು ಮರಣದಲ್ಲಿ ಕಾಣಬೇಕು ಎಂದು ವಚನಕಾರರು ಹೇಳಿದ್ದಾರೆ. ಪೂಜ್ಯ ಮಹಾ ಸ್ವಾಮೀಜಿಯವರು ಕನಕಪುರದ ದೇಗುಲ ಮಠದ ಮೂಲಕ ಬೆಂಗಳೂರು ದಕ್ಷಿಣ ಜಿಲ್ಲೆ ಸೇರಿದಂತೆ ಹಳೇ ಮೈಸೂರು ಭಾಗ ಹಾಗೂ ಕರ್ನಾಟಕದಾದ್ಯಂತ ಶರಣರ, ಬಸವಣ್ಣನವರ ತತ್ವ, ಆದರ್ಶಗಳನ್ನು ಪಸರಿಸಿದವರು. ಆಧ್ಯಾತ್ಮದ ಅರಿವು ಮೂಡಿಸಿದವರು ಎಂದು ಕೊಂಡಾಡಿದ್ದಾರೆ.

ಸುಮಾರು 700 ವರ್ಷಗಳ ಇತಿಹಾಸವಿರುವ ಶ್ರೀಮಠದ ಪೀಠಾಧ್ಯಕ್ಷರಾಗಿ ಸರ್ವರಿಗೂ ಸಮಪಾಲು, ಸಮಬಾಳು ತತ್ವವನ್ನು ಮಠದ ಭಕ್ತಾದಿಗಳು ಹಾಗೂ ಎಲ್ಲಾ ಜನರಿಗೂ ಮನವರಿಕೆ ಮಾಡಿದವರು. ಮಠದಲ್ಲಿ ತ್ರಿವಿಧ ದಾಸೋಹ ಆರಂಭಿಸಿ ಅನ್ನ, ಅಕ್ಷರ, ಆಶ್ರಯದ ಮೂಲಕ ಸಾವಿರಾರು ವಿದ್ಯಾರ್ಥಿಗಳ ಜೀವನ ರೂಪಿಸುವುದರಲ್ಲಿ ಶ್ರೀಗಳ ಪಾತ್ರ ತುಂಬಾ ದೊಡ್ಡದು. ಆಯುಷ್ಯ ತೀರಲು ಮರಣ ಎನ್ನುವುದು ನಮ್ಮಂತಹ ಸಾಮಾನ್ಯ ಮನುಷ್ಯರಿಗೆ. ಶ್ರೀಗಳು ದೇಗುಲ ಮಠದ ಮೂಲಕ ಸಮಾಜಕ್ಕೆ ಹಲವಾರು ಕೊಡುಗೆ ನೀಡಿದ್ದಾರೆ. ಆ ಮೂಲಕ ಎಲ್ಲರ ಮನದಲ್ಲಿ ಚಿರಸ್ಥಾಯಿಯಾಗಿದ್ದಾರೆ ಎಂದು ಸಿಎಂ ಅವರು ಸ್ಮರಿಸಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಬಹುದೊಡ್ಡ ಆಧ್ಯಾತ್ಮಿಕ ಕೊಂಡಿ ಕಳಚಿ ಹೋಗಿದೆ. ಕ್ಷೇತ್ರದ ಅಭಿವೃದ್ಧಿಯ ವಿಚಾರದಲ್ಲಿ ಶ್ರೀಗಳು ನೀಡುತ್ತಿದ್ದ ಅನೇಕ ಸಲಹೆಗಳು ನಮ್ಮ ಅರಿವನ್ನು ಜಾಗೃತಗೊಳಿಸಿದ್ದವು. ಇಂತಹ ಹಿರಿಯರ ಅಗಲಿಕೆ ದೊಡ್ಡ ನಿರ್ವಾತವನ್ನು ಸೃಷ್ಟಿಸಿದೆ. ಪರಮಪೂಜ್ಯರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಮಠದ ಭಕ್ತಾದಿಗಳಿಗೆ ಆ ದೇವರು ನೀಡಲಿ. ಶ್ರೀಗಳ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಿಎಂ ಅವರು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ತೊಂದರೆ ನಿವಾರಣೆಗೆ ಕ್ರಮ

ಒಂದು ಬಾರಿ ವಿನಾಯಿತಿ: ಅಧಿಕೃತ ಆದೇಶ

• **ಬೆಂಗಳೂರು:** ರಾಜ್ಯಾದ್ಯಂತ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಎದುರಾಗುತ್ತಿದ್ದ ಪ್ರಮುಖ ತೊಂದರೆಯೊಂದನ್ನು ನಿವಾರಿಸಲು ನಿರ್ದಿಷ್ಟ ಮಿತಿಯೊಳಗಿನ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಒದಗಿಸುವುದರಿಂದ ಒಂದು ಬಾರಿಗೆ ವಿನಾಯಿತಿ ನೀಡಿ ಇಂಧನ ಇಲಾಖೆಯು ಅಧಿಕೃತ ಆದೇಶ ಹೊರಡಿಸಿದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಿರ್ಣಯದ ಹಿನ್ನೆಲೆಯಲ್ಲಿ ಈ ಆದೇಶವನ್ನು ಜಾರಿಗೊಳಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿ, ರಾಜ್ಯದಲ್ಲಿನ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿ ಸೇರಿದಂತೆ ಇಡೀ ರಾಜ್ಯಕ್ಕೆ ಅನ್ವಯವಾಗಲಿದೆ.

ಕಟ್ಟಡದ ವಿಸ್ತೀರ್ಣ ಮತ್ತು ಮಿತಿ : 2,400 ಚದರ ಅಡಿಗಳವರೆಗೆ (ಶೇ. +20 ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಜಿ+3 (ಎ+3) ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳಿಗೆ ಮಾತ್ರ ಈ ವಿನಾಯಿತಿ ಅನ್ವಯಿಸಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮೇ 31ರ ಒಳಗಾಗಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಈಗಾಗಲೇ ಅರ್ಜಿ ಸಲ್ಲಿಸಿರುವವರಿಗೆ ಈ ವಿನಾಯಿತಿ ಲಭ್ಯವಾಗಲಿದೆ. ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಿಸಿ ಪೂರ್ಣಗೊಳಿಸಿರುವ ಪ್ರಕರಣಗಳು. ಯಾವುದೇ ವಿದ್ಯುತ್ ಸಂಪರ್ಕ ಪಡೆಯದೇ ಕಟ್ಟಡ ಕಾಮಗಾರಿ ಪೂರ್ಣಗೊಂಡಿರುವ ಪ್ರಕರಣಗಳಿಗೆ ಇದು ಅನ್ವಯವಾಗಲಿದೆ.

ಈ ಆದೇಶ ಹೊರಡಿಸಿದ ದಿನಾಂಕದಿಂದ ಅಂದರೆ ಜೂ.22 ರಿಂದ ಮುಂದಿನ 15 ದಿನಗಳವರೆಗೆ ಮಾತ್ರ ಹೊಸದಾಗಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಗ್ರಾಮೀಣ ಪ್ರದೇಶ ಮತ್ತು ರೈತರಿಗೆ ವಿಶೇಷ ಸವಲತ್ತು: ಗ್ರಾಮೀಣ ಭಾಗದ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಸರ್ಕಾರ ಮತ್ತೊಂದು ಪ್ರಮುಖ ನಿರ್ಧಾರ ಕೈಗೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆಗಳು ಹಾಗೂ ಕೃಷಿ ಪೂರಕ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆಯುವುದರಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ರೈತರು ವಾಸಿಸುವ ಮನೆ ಮತ್ತು ತೋಟದ ಮನೆ. ಕೃಷಿ ಉಪಕರಣಗಳನ್ನು ಇಡುವ ಮನೆ. ದನದ ಕೊಟ್ಟಿಗೆ ಹಾಗೂ ರೇಷ್ಮೆ ಗೂಡಿನ ಮನೆಗಳಿಗೆ ವಿನಾಯಿತಿ ನೀಡಲಾಗಿದೆ. ಈ ಆದೇಶದ ಅನ್ವಯ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕ ನೀಡಲು ಅನುಸರಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಶೀಘ್ರದಲ್ಲೇ ಹೊರಡಿಸಲಾಗುವುದು ಎಂದು ಇಂಧನ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಮಾರ್ನಿಂಗ್ ಶೋ



ರಾಕಿಂಗ್ ಸ್ಟಾರ್ ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ಯಾವಾಗ ರಿಲೀಸಾಗುತ್ತೆ ಎಂದು ಕೇಳುತ್ತಿರುವ ಲಕ್ಷಾಂತರ ಯಶ್ ಅಭಿಮಾನಿಗಳ ಪ್ರಶ್ನೆಗೆ ಕೊನೆಗೂ ಉತ್ತರ ಸಿಕ್ಕಿದೆ. ಈ ವರ್ಷ ಸಿನಿಮಾ ತೆರೆಗೆ ಬರೋದೇ ಇಲ್ಲ ಎಂದುಕೊಂಡಿದ್ದವರು ನಿಟ್ಟುಸಿರು ಬಿಟ್ಟಿದ್ದಾರೆ. ಇನ್ನೆರಡು ತಿಂಗಳಲ್ಲಿ ಸಿನಿಮಾ ರಿಲೀಸ್ ಮಾಡುವುದಾಗಿ ಚಿತ್ರತಂಡ ಘೋಷಿಸಿದೆ. ಗೀತು ಮೋಹನ್ ದಾಸ್ ನಿರ್ದೇಶನದ 'ಟಾಕ್ಸಿಕ್' ಸಿನಿಮಾ ಬಿಡುಗಡೆ ದಿನಾಂಕ ಪದೇ ಪದೆ ಬದಲಾಗಿ ಅಭಿಮಾನಿಗಳು ಬೇಸರಗೊಂಡಿದ್ದರು. 3 ಬಾರಿ ರಿಲೀಸ್ ಡೇಟ್ ಬದಲಿಸಿದ್ದ ಚಿತ್ರತಂಡ ಕಡೆಗೂ ಆಗಸ್ಟ್ 26ಕ್ಕೆ ಟಾಕ್ಸಿಕ್ ಸಿನಿಮಾ ತೆರೆಕಾಣುತ್ತಿದೆ ಎನ್ನುವ ಗುಡ್ ನ್ಯೂಸ್ ನೀಡಿದೆ. ಈ ಸುದ್ದಿ ಕೇಳಿ ರಾಕಿಂಗ್ ಫ್ಯಾನ್ಸ್ ಖುಷಿಯಾಗಿದ್ದಾರೆ.

ವಿಶ್ವ ಅಪ್ಪಂದಿರ ದಿನದ ವಿಶೇಷವಾಗಿ 'ಟಾಕ್ಸಿಕ್' ಸಿನಿಮಾದ ರಿಲೀಸ್ ಡೇಟ್ ಘೋಷಣೆ ಮಾಡಿದ್ದಾರೆ. ರಾಯ ಹಾಗೂ ಟಕೆಟ್ ಆಗಿ ತಂದೆ ಮಗನ ಹೊಸ ಪೋಸ್ಟರ್ ಸಮೇತ ಅಪ್‌ಡೇಟ್ ಸಿಕ್ಕಿದೆ. ಸಾಮಾನ್ಯವಾಗಿ ಶುಕ್ರವಾರ ಸಿನಿಮಾಗಳು ಬಿಡುಗಡೆ ಆಗುತ್ತವೆ. ಆದರೆ 'ಟಾಕ್ಸಿಕ್' ಚಿತ್ರವನ್ನು ಎರಡು ದಿನ ಮುನ್ನ ಅಂದರೆ ಬುಧವಾರ ತೆರೆಗೆ ತರಲಾಗುತ್ತಿದೆ. ಪ್ಯಾನ್ ಇಂಡಿಯಾ ಅಲ್ಲ ಗ್ಲೋಬಲ್ ಮಟ್ಟದಲ್ಲಿ ಏಕಕಾಲಕ್ಕೆ ಟಾಕ್ಸಿಕ್ ಸಿನಿಮಾ ರಿಲೀಸ್ ಎಂದು ಚಿತ್ರತಂಡ ಹೇಳಿದೆ. ಓಣಂ, ಈದ್, ವರಮಹಾಲಕ್ಷ್ಮಿ ಮತ್ತು ರಕ್ಷಾಬಂಧನ ಹಬ್ಬಗಳ ಸಾಲು ಸಾಲು ರಜೆಗಳ ಲಾಭ ಪಡೆಯಲು ಬುಧವಾರವೇ ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಕೆ.ವಿ.ಎನ್. ಪ್ರೊಡಕ್ಷನ್ಸ್ ಜೊತೆ ಸೇರಿ ಯಶ್ ತಮ್ಮ ಮಾನ್ ಸ್ಟರ್ ಮೈಂಡ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ 'ಟಾಕ್ಸಿಕ್' ಚಿತ್ರವನ್ನು ನಿರ್ಮಿಸಿದ್ದಾರೆ. ಅಂದುಕೊಂಡಂತೆ ಆಗಿದ್ರೆ ಜೂನ್ 4ರಂದು ಸಿನಿಮಾ ತೆರೆಗೆ ಬರಬೇಕಿತ್ತು. ಆದರೆ ವಿದೇಶಗಳಲ್ಲಿ ಏಕಕಾಲಕ್ಕೆ ಸಿನಿಮಾ ರಿಲೀಸ್ ಮಾಡಬೇಕು ಎನ್ನುವ ಕಾರಣಕ್ಕೆ ಎರಡೂವರೆ ತಿಂಗಳ ಸಮಯಾವಕಾಶ ತೆಗೆದುಕೊಂಡಿದ್ದರು. ಹಾಲಿವುಡ್ ತಂತ್ರಜ್ಞರು ಕೂಡ ಈ ಚಿತ್ರಕ್ಕಾಗಿ ಕೆಲಸ ಮಾಡಿದ್ದಾರೆ. ಯಶ್ ಜೊತೆ ನಾಯಕಿಯರಾಗಿ ನಯನತಾರಾ, ಹುಮಾ ಖುರೇಷಿ, ಕಿಯಾರಾ ಅಡ್ವಾಣಿ, ರುಕ್ಮಿಣಿ ವಸಂತ್ ಕೂಡ ನಟಿಸಿದ್ದಾರೆ. ಸಿನಿಮಾ ಬಜೆಟ್ 500 ಕೋಟಿ ರೂ. ದಾಟಿದೆ ಎನ್ನಲಾಗ್ತಿದೆ. ಇದೊಂದು ಗ್ಯಾಂಗ್ ಸ್ಟರ್ ಸಿನಿಮಾ ಆಗಿದ್ದು ತಂದೆ ಹಾಗೂ ಮಗನಾಗಿ ದ್ವಿಪಾತ್ರದಲ್ಲಿ ನಟ ಯಶ್ ಅವರು ಕಾಣಿಸಿಕೊಂಡಿರುವುದು ವಿಶೇಷ. ಐತಿಹಾಸಿಕ ಹಿನ್ನೆಲೆಯೊಂದಿಗೆ ಒಂದು ಕಾಲ್ಪನಿಕ ಕಥೆಯನ್ನು ಈ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಮಲಯಾಳಂನ ಗೀತು ಮೋಹನ್ ದಾಸ್ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಏಕಕಾಲಕ್ಕೆ 'ಟಾಕ್ಸಿಕ್' ಸಿನಿಮಾದ ಚಿತ್ರೀಕರಣ ನಡೆಸಲಾಗಿದೆ. ಇನ್ನುಳಿದಂತೆ ದೇಶ ವಿದೇಶದ ಹಲವು ಭಾಷೆಗಳಿಗೂ ಚಿತ್ರವನ್ನು ಡಬ್ ಮಾಡಿ ರಿಲೀಸ್ ಮಾಡುವ ಪ್ರಯತ್ನ ನಡೀತಿದೆ. ರಾಜೀವ್ ರವಿ ಅವರ ಛಾಯಾಗ್ರಹಣ, ರವಿ ಬಸ್ರೂರು ಅವರ ಸಂಗೀತ ಈ ಚಿತ್ರದಲ್ಲಿದೆ. ಈಗಾಗಲೇ ರಿಲೀಸಾಗಿರುವ 'ತಬಾಹಿ' ಸಾಂಗ್ ಎಲ್ಲರ ಗಮನ ಸೆಳೆದಿದೆ. ಇನ್ನೂ 4 ಹಾಡುಗಳು ಈ ಚಿತ್ರದಲ್ಲಿವೆ.

ಇತ್ತೀಚೆಗೆ ಸಿನಿಮಾಕಾನ್ ಸಮಾವೇಶದಲ್ಲಿ ನಟ ಯಶ್ ಭಾಗಿ ಆಗಿದ್ದರು. ಈ ವೇಳೆ 'ರಾಮಾಯಣ' ಹಾಗೂ 'ಟಾಕ್ಸಿಕ್' ಚಿತ್ರಗಳ ಬಗ್ಗೆ ಹಾಲಿವುಡ್ ವೇದಿಕೆಗಳಲ್ಲಿ ಮಾತನಾಡಿದ್ದರು. ಸಿನಿಮಾ ಕಥೆ, ಪಾತ್ರವರ್ಗ ಎಲ್ಲದರ ಬಗ್ಗೆ ಮಾಹಿತಿ ನೀಡಿದ್ದರು. ಹಾಲಿವುಡ್ ಮಾಧ್ಯಮಗಳ ಸಂದರ್ಶನದಲ್ಲಿ ರಾಕಿಂಗ್ ಸ್ಟಾರ್ ಮಿಂಚಿದ್ದರು.



ಕನ್ನಡ ಚಿತ್ರರಂಗದ ಪ್ರತಿಭಾವಂತ ಕಲಾವಿದರಲ್ಲಿ ರಂಗಾಯಣ ರಘು ಕೂಡ ಒಬ್ಬರು. ಯಾವುದೇ ಪಾತ್ರ ಕೊಟ್ಟರೂ ಲೀಲಾಜಾಲವಾಗಿ ನಿಭಾಯಿಸುವ ರಂಗಾಯಣ ರಘು ಅವರೀಗ ದೇವಿ ಮಹಾತ್ಮೆ ಚಿತ್ರದಲ್ಲಿ ವಿಭಿನ್ನ ಪಾತ್ರದ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ.

ಟ್ರೈಲರ್ ಮೂಲಕ ನಿರೀಕ್ಷೆ ಹೆಚ್ಚು ಮಾಡಿರುವ ದೇವಿ ಮಹಾತ್ಮೆ ಸಿನಿಮಾದಲ್ಲಿ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರದ ಕುತೂಹಲಕಾರಿ ಟೀಸರ್ ಪೊಂಟಾಳಿ ಮ್ಯೂಸಿಕ್ ಯೂ ಟ್ಯೂಬ್ ಚಾನೆಲ್ ನಲ್ಲಿ ಬಿಡುಗಡೆಯಾಗಿದೆ. ನಿರ್ದೇಶಕ ನಾಗರಾಜ್ ಸೋಮಯಾಜಿ ಅವರು ದೇವಿ ಮಹಾತ್ಮೆ ಚಿತ್ರದ ಮೂಲಕ ಒಂದೊಳ್ಳೆ ಕಥೆಯೊಂದನ್ನು ತೆರೆಮೇಲೆ ಹೇಳಹೊರಟಿದ್ದಾರೆ ಅನ್ನೋದು ಟೀಸರ್ ನಲ್ಲಿ ಗೊತ್ತಾಗುತ್ತಿದೆ.

ರಂಗಾಯಣ ರಘು ಅವರ ಅಭಿನಯ, ಸಮುದ್ರ ತೀರ, ಹುಲಿ ವೇಷ, ಈ ಟೀಸರ್ ನ ಹೈಲೈಟ್. ರೋಚಕವಾಗಿ ಸಾಗುವ ಈ ಟೀಸರ್‌ನಲ್ಲಿ ಲಿಖಿತ್ ಪ್ರಸಾದ್ ಶೆಟ್ಟಿ ಅವರ ಮ್ಯೂಸಿಕ್ ಗಮನ ಸೆಳೆಯುತ್ತಿದೆ.

1 ನಿಮಿಷ 5 ಸೆಕೆಂಡ್ ಇರುವ, ಈ ಟೀಸರ್ ಸಾಕಷ್ಟು ಥ್ರಿಲ್ಲಿಂಗ್ ಜೊತೆಗೆ ಸಸ್ಪೆನ್ಸ್ ಅಂಶಗಳಿಂದ ಕೂಡಿದೆ.

ಪ್ರತಿಮಾ ನಾಯಕ್, ಸುಂದರ್ ವೀಣಾ, ಅರವಿಂದ್ ಕುಪ್ಳೀಕರ್, ಬಾಸುಮ ಕೊಡಗು, ನಾಗೇಂದ್ರ ಶಾ, ಒಡಿ ಸತೀಶ್ ಚಂದ್ರ, ಪ್ರಶಾಂತ್ ಹಿರೇಮಠ, ಆದಿತ್ಯ ರಾಜ್ ರಘು ಪಾಂಡೇಶ್ವರ,

ಪಲ್ಲವಿ ಮಂಜುನಾಥ್, ಶೈಲಶ್ರೀ ಮೂಲ್ಕಿ, ಶ್ವೇತಾ ಶ್ರೀನಿವಾಸ, ಮಹಾದೇವ ಹಡಪದ್, ಆಸಿಫ್ ಕ್ಷತ್ರಿಯ ಈ ಚಿತ್ರದ ಉಳಿದ ತಾರಾಬಳಗದಲ್ಲಿದ್ದಾರೆ. ನಾಗರಾಜ್ ಸೋಮಯಾಜಿ ಅವರೇ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಅವರುಗಳು ಜೊತೆಯಾಗಿದ್ದಾರೆ.

ಯುಯುವಿ ಸ್ಟುಡಿಯೋ ಬ್ಯಾನರ್ ಅಡಿ ವಿದ್ಯಾ ಗಾಂಧಿರಾಜನ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಗಾಂಧಿರಾಜನ್ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ಒಂದೊಳ್ಳೆ ತಾಂತ್ರಿಕ ವರ್ಗವೇ ಈ ಚಿತ್ರದಲ್ಲಿ ಕೆಲಸ ಮಾಡುತ್ತಿದ್ದು, ಎಸ್.ಕೆ. ರಾವ್ ಅವರ ಛಾಯಾಗ್ರಹಣ ಹಾಗೂ ಲಿಖಿತ್ ಪ್ರಸಾದ್ ಕೆ. ಶೆಟ್ಟಿ ಅವರ, ಸಂಗೀತ ನಿರ್ದೇಶನ, ಉಜ್ವಲ್ ಚಂದ್ರ ಅವರ, ಸಂಕಲನ ದೇವಿ ಮಹಾತ್ಮೆ ಚಿತ್ರಕ್ಕಿದೆ.

ಗ್ರಾಮಾಯಣದಲ್ಲಿ ಲೂಸ್ ಮಾದ ಯೋಗಿ-ಕರಿಬೆಕ್ಕು



ಲಹರಿ ಫಿಲಂಸ್ ನಿರ್ಮಾಣದ, ದೇವನೂರು ಚಂದ್ರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಅಲ್ಲದೆ ವಿನಯ್ ರಾಜಕುಮಾರ್ ಹಾಗೂ ಮೇಘಾ ಶೆಟ್ಟಿ ನಾಯಕ - ನಾಯಕಿಯಾಗಿ ನಟಿಸಿರುವ ಗ್ರಾಮಾಯಣ ಚಿತ್ರದ ಏನೇ ಹೇಳು ಕುಸುಮ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ಲಹರಿ ವೇಲು ಈ ಹಾಡನ್ನು ಬಿಡುಗಡೆ ಮಾಡಿದರು. ಪ್ರಮೋದ್ ಮರವಂತೆ ರಚಿಸಿ, ಪೂರ್ಣಚಂದ್ರ ತೇಜಸ್ವಿ ಸಂಗೀತ ನೀಡಿರುವ ಈ ಹಾಡಿಗೆ ನಿಹಾಲ್ ತಾವ್ರೋ ಹಾಗೂ ಸಾಕ್ಷಿ ಕಲ್ಲೂರ್ ಅವರುಗಳು ದನಿಯಾಗಿದ್ದಾರೆ. ಜುಲೈ 3 ರಂದು ಗ್ರಾಮಾಯಣ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ.

ಗ್ರಾಮಾಯಣ ಚಿತ್ರದ ಐದನೇ ಹಾಡನ್ನು ಬಿಡುಗಡೆಗೊಳಿಸಿ ಮಾತನಾಡಿದ ನಿರ್ಮಾಪಕ ಲಹರಿ ವೇಲು, ಗ್ರಾಮಾಯಣ ನಮ್ಮ ಲಹರಿ ಸಂಸ್ಥೆಯ ನಿರ್ಮಾಣದ ಒಂಭತ್ತನೇ ಚಿತ್ರ. ಒಂಭತ್ತು ನಮ್ಮ ಸಂಸ್ಥೆಗೆ ಅದೃಷ್ಟದ ಸಂಖ್ಯೆ. ಸುವರ್ಣ ವರ್ಷದ ಸಂಭ್ರಮದಲ್ಲಿರುವ ನಮ್ಮ ಸಂಸ್ಥೆಯಿಂದ ಗ್ರಾಮೀಣ ಸೊಗಡಿನ ಒಂದೊಳ್ಳೆ ಸದಭಿರುಚಿಯ ಚಿತ್ರ ನಿರ್ಮಾಣವಾಗಿರುವುದು ಖುಷಿಯಾಗಿದೆ. ದೇವನೂರು ಚಂದ್ರು ಅವರು ಒಂದೊಳ್ಳೆ ಸದಭಿರುಚಿಯ ಚಿತ್ರವನ್ನು ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ಒಂಭತ್ತು ವಿಭಿನ್ನ ಶೈಲಿಯ ಹಾಡುಗಳಿದ್ದು, ಅದರಲ್ಲಿ ಇದು ಐದನೇ ಹಾಡು. ಈ ಹಿಂದೆ ಶಿವರಾಜಕುಮಾರ್ ಅವರು ಬಿಡುಗಡೆ ಮಾಡಿದ್ದ ಬೆಂಕಿಯಲ್ಲಿ ತಂಪು ಹಾಡು ಸೂಪರ್ ಹಿಟ್ ಆಗಿದೆ. ನಮ್ಮ ಚಿತ್ರವ ಜುಲೈ 3 ರಂದು ತೆರೆಗೆ ಬರುತ್ತಿದೆ ಎಂದರು.



ನಿರ್ದೇಶಕ ದೇವನೂರು ಚಂದ್ರು ಮಾತನಾಡುತ್ತ ಏನೇ ಹೇಳು ಕುಸುಮ ಒಂದು ಮೆಲೋಡಿ ಹಾಡಾಗಿದ್ದು, ಕೇಳುತ್ತಾ ಹೋದಂತೆ ಮನಸ್ಸಿನ ಮುಟ್ಟುವ ಗುಣ ಮೆಲೋಡಿ ಹಾಡುಗಳಿದ್ದು, ಗ್ರಾಮಾಯಣ, ಒಂದು ಗ್ರಾಮೀಣ ಸೊಗಡಿನ ಚಿತ್ರವಾಗಿದ್ದು, ನೋಡುಗರಿಗೆ ಬೇಕಾದ ಎಲ್ಲ ರೀತಿಯ ಮನರಂಜನಾತ್ಮಕ ಅಂಶಗಳಿರುವ ಸಿನಿಮಾ ಕೂಡ. ಇದುವರೆಗೂ ಮಾಡಿರದ ಪಾತ್ರದಲ್ಲಿ ವಿನಯ್ ರಾಜಕುಮಾರ್ ಅವರು ಅಭಿನಯಿಸಿದ್ದಾರೆ. ಮೇಘಾ ಶೆಟ್ಟಿ ಅವರದು ಕೂಡ ವಿಭಿನ್ನ ಪಾತ್ರ. ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣ ಚಿತ್ರಕ್ಕೆ ಪೂರಕವಾಗಿದೆ ಎಂದರು.

ಇದೇ ಜಾಗದಲ್ಲೇ ಅಪ್ಪ, ದೊಡ್ಡಪ್ಪ ಹಾಗೂ ಚಿಕ್ಕಪ್ಪ ಅವರಿಂದ ಗ್ರಾಮಾಯಣ ಚಿತ್ರಕ್ಕೆ ಚಾಲನೆ ದೊರೆತಿತ್ತು. ಈಗ ಇಲ್ಲೇ ಚಿತ್ರದ ಬಿಡುಗಡೆಯ ದಿನಾಂಕ ಕೂಡ ಘೋಷಣೆಯಾಗಿರುವುದು ಸಂತೋಷವಾಗಿದೆ. ನಾನು ನಾಯಕನಾಗಿ ನಟಿಸಿರುವ ಒಂಭತ್ತನೆಯ ಚಿತ್ರವಿದು. ಪೂರ್ಣಚಂದ್ರ ತೇಜಸ್ವಿಯವರ ಸಂಗೀತ ಸಂಯೋಜನೆಯ ಈ ಹಾಡು ಸೇರಿದಂತೆ ಎಲ್ಲಾ ಹಾಡುಗಳು ಚೆನ್ನಾಗಿದೆ. ಜುಲೈ 3 ರಂದು ಬಿಡುಗಡೆಯಾಗುತ್ತಿರುವ ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದು ನಾಯಕ ವಿನಯ್ ರಾಜಕುಮಾರ್ ಹೇಳಿದರು.

ನಾಯಕಿ ಮೇಘಾ ಶೆಟ್ಟಿ ಮಾತನಾಡುತ್ತ ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಕುಸುಮ. ಅದೇ ಹೆಸರಿನ ಹಾಡೊಂದು ಬಿಡುಗಡೆಯಾಗಿರೋದು ಖುಷಿಯಾಗಿದೆ ಎಂದರು. ನಾನು ಬಾಸಿಯಾ ಚಿತ್ರದಿಂದ ಪೂರ್ಣಚಂದ್ರ ತೇಜಸ್ವಿಯವರನ್ನು ಬಲ್ಲೆ, ಉತ್ತಮ ಸಂಗೀತ ನಿರ್ದೇಶಕರು ಅವರು. ನಮ್ಮ ಗ್ರಾಮಾಯಣ ಚಿತ್ರದಲ್ಲೂ ಒಂಭತ್ತು ಸುಮಧುರ ಹಾಡುಗಳಿವೆ. ಎಲ್ಲಾ ಹಾಡುಗಳು ಒಂದಕ್ಕಿಂತ ಒಂದು ಚೆನ್ನಾಗಿದೆ . ದೇವನೂರು ಚಂದ್ರು ಅವರ ನಿರ್ದೇಶನ, ತಂತ್ರಜ್ಞರ ಕಾರ್ಯ ವೈಖರಿ ಹಾಗೂ ಎಲ್ಲಾ ಕಲಾವಿದರ ಅಭಿನಯ ಚೆನ್ನಾಗಿದೆ ಎಂದು ನಿರ್ಮಾಪಕ ನವೀನ್ ಮನೋಹರ್ ಹೇಳಿದರು. ಹಾಡುಗಳ ಕುರಿತು ಸಂಗೀತ ಸಂಯೋಜಕ ಪೂರ್ಣಚಂದ್ರ ತೇಜಸ್ವಿ ಮಾಹಿತಿ ನೀಡಿದರು. ಗೀತರಚನೆಕಾರ ಪ್ರಮೋದ್ ಮರವಂತೆ ಹಾಗೂ ಗಾಯಕಿ ಸಾಕ್ಷಿ ಕಲ್ಲೂರ್ ಏನೇ ಹೇಳು ಕುಸುಮ ಹಾಡಿನ ಬಗ್ಗೆ ಮಾತನಾಡಿದರು.

ಅಚ್ಯುತ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಬಲ ರಾಜವಾಡಿ, ಅಪರ್ಣ ವಸ್ತಾರೆ, ಸೀತಾ ಕೋಟೆ, ಪ್ರಶಾಂತ್ ಹೊಸ್ಮನೆ, ಅವಿನಾಶ್ ರೈ ಹೀಗೆ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ, ಲೂಸ್ ಮಾದ ಯೋಗಿ ಅವರು ಅಭಿನಯಿಸಿದ್ದಾರೆ. ಅವರ ಪಾತ್ರದ ಹೆಸರು ಕರಿಬೆಕ್ಕು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26